ಮಂಗಳವಾರ, ನವೆಂಬರ್ 29, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 329 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,504 ▲	18,562 ▲	₹54,430 (ಬೆಂಗಳೂರು)	₹63,800 (ಬೆಂಗಳೂರು)	81.68 ▲

ಕಾನೂನು ಸಚಿವರು ಆಡಿದ ಮಾತಿಗೆ ಕೋರ್ಟ್‌ನಿಂದ ಬಲವಾದ ವಿರೋಧ

ನೇಮಕಕ್ಕೆ ಅಡ್ಡಿ: ‘ಸುಪ್ರೀಂ’ ಕಿಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೊಲಿಜಿಯಂ ವ್ಯವಸ್ಥೆ ಕುರಿತು ಕಾನೂನು ಸಚಿವ ಕಿರಣ್ ರಿಜಿಜು ಆಡಿದ ಮಾತಿಗೆ ಸುಪ್ರೀಂ ಕೋರ್ಟ್ ಬಲವಾದ ವಿರೋಧ ವ್ಯಕ್ತಪಡಿಸಿದೆ. ಕೇಂದ್ರ ಸರ್ಕಾರವು 2014ರಲ್ಲಿ ರೂಪಿಸಿದ ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗವು (ಎನ್‌ಜೆಎಸಿ) ಜಾರಿಗೆ ಬರಲಿಲ್ಲ ಎಂಬ ಕಾರಣಕ್ಕೆ ಕೊಲಿಜಿಯಂನ ಶಿಫಾರಸುಗಳನ್ನು ತಡೆ ಹಿಡಿಯಲಾಗುತ್ತಿದೆಯೇ ಎಂದು ಪ್ರಶ್ನಿಸಿದೆ.

ಶಿಫಾರಸನ್ನು ಪುನರುಚ್ಚರಿಸಿದರೆ ಸರ್ಕಾರವು ಅದಕ್ಕೆ ಒಪ್ಪಿಗೆ ನೀಡಲೇಬೇಕು. ಕಾನೂನು ಪ್ರಕಾರ, ಅಲ್ಲಿಗೆ ಆ ವಿಚಾರವು ಕೊನೆಗೊಳ್ಳುತ್ತದೆ ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಅಭಯ್ ಎಸ್. ಓಕಾ ಅವರ ಪೀಠವು ಸೋಮವಾರ ಹೇಳಿದೆ.

ಬೆಂಗಳೂರು ವಕೀಲರ ಸಂಘವು ಸಲ್ಲಿಸಿದ ನ್ಯಾಯಾಂಗ ನಿಂದನೆ ಅರ್ಜಿಯ ವಿಚಾರಣೆಯನ್ನು ಪೀಠವು ನಡೆಸಿತು. ಕಿರಣ್ ರಿಜಿಜು ಅವರು ನ್ಯಾಯಮೂರ್ತಿಗಳ ನೇಮಕ ಕುರಿತು ಆಡಿದ್ದ ಮಾತುಗಳನ್ನು ಹಿರಿಯ ವಕೀಲ ವಿಕಾಸ್ ಸಿಂಗ್ ಅವರು ಪೀಠದ ಗಮನಕ್ಕೆ ತಂದರು.



ಮುಖ್ಯಾಂಶಗಳು
- ಡಿಸೆಂಬರ್ 8ರಂದು ಮುಂದಿನ ವಿಚಾರಣೆ
- ಅಟಾರ್ನಿ ಜನರಲ್, ಸಾಲಿಸಿಟರ್ ಜನರಲ್ ಹಾಜರಾಗಲು ಸೂಚನೆ
- ಸಮಸ್ಯೆ ಪರಿಹರಿಸಲು ಶ್ರಮಿಸುವುದಾಗಿ ಅಟಾರ್ನಿ ಜನರಲ್ ಭರವಸೆ

‘ನಮ್ಮ ಆಕ್ರೋಶವನ್ನು ನಾವು ವ್ಯಕ್ತಪಡಿಸಿದ್ದೇವೆ. ಎನ್‌ಜೆಎಸಿ ಜಾರಿಗೆ ಬಾರದಿರುವ ಕುರಿತು ಸರ್ಕಾರಕ್ಕೆ ಅಸಮಾಧಾನ ಇದ್ದ ಹಾಗೆ ಕಾಣಿಸುತ್ತಿದೆ. ಶಿಫಾರಸು ಮಾಡಿದ ಹೆಸರುಗಳನ್ನು ತಡೆ ಹಿಡಿಯಲು ಅದು ಕಾರಣವೇ’ ಎಂದು ಪೀಠವು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರನ್ನು ಪ್ರಶ್ನಿಸಿದೆ.

ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಬೇಕಾದ ಕಾಲಮಿತಿಯನ್ನು ಮೂವರು ನ್ಯಾಯಮೂರ್ತಿಗಳ ಪೀಠವು ನಿಗದಿ ಮಾಡಿತ್ತು. ಅದನ್ನು ಪಾಲಿಸಲೇಬೇಕು ಎಂದು ಪೀಠವು ಹೇಳಿದೆ.

ಸಂವಿಧಾನಕ್ಕೆ 99ನೇ ತಿದ್ದುಪಡಿಯ ಮೂಲಕ ನ್ಯಾಯಾಂಗ ನೇಮಕಾತಿ ಆಯೋಗ ಕಾಯ್ದೆಯನ್ನು ಕೇಂದ್ರ ಸರ್ಕಾರವು 2014ರಲ್ಲಿ ಜಾರಿಗೆ ತಂದಿತ್ತು. ಆದರೆ, ಈ ಕಾಯ್ದೆಯನ್ನು ಸುಪ್ರೀಂ ಕೋರ್ಟ್ 2015ರಲ್ಲಿ ರದ್ದುಪಡಿಸಿತ್ತು. ಇದರಿಂದಾಗಿ ಹಿಂದೆ ಇದ್ದ ಕೊಲಿಜಿಯಂ ವ್ಯವಸ್ಥೆಯೇ ಜಾರಿಗೆ ಬಂದಿದೆ.

ಎರಡು ತಿಂಗಳುಗಳಿಂದ ಎಲ್ಲವೂ ಸ್ಥಗಿತಗೊಂಡಿದೆ. ಹೈಕೋರ್ಟ್‌ಗಳಿಗೆ ಮುಖ್ಯ ನ್ಯಾಯಮೂರ್ತಿಗಳು ಮತ್ತು ನ್ಯಾಯಮೂರ್ತಿಗಳ ನೇಮಕ ಆಗಬೇಕಿದೆ. ದಯವಿಟ್ಟು ಸಮಸ್ಯೆಯನ್ನು ಪರಿಹರಿಸಿ. ನ್ಯಾಯಾಲಯದ ಕಡೆಯಿಂದ ನಿರ್ಧಾರ ಕೈಗೊಳ್ಳುವಂತೆ ಮಾಡಬೇಡಿ ಎಂದು ಪೀಠವು ಹೇಳಿತು.

8ನೇ ಪುಟ ನೋಡಿ

ಕಿರಣ್ ರಿಜಿಜು ಹೇಳಿದ್ದೇನು?

‘ಸರ್ಕಾರವು ಕಡತವನ್ನು ಹಿಡಿದಿಟ್ಟುಕೊಂಡಿದೆ ಎಂದು ಹೇಳಬೇಡಿ. ಹಾಗಿದ್ದರೆ ನೀವು ಸರ್ಕಾರಕ್ಕೆ ಕಡತವನ್ನೇ ಕಳುಹಿಸಬೇಡಿ. ನೀವು ನೇಮಕಾತಿ ಮಾಡಿಕೊಳ್ಳಿ. ಎಲ್ಲವನ್ನೂ ನೀವೇ ನಿರ್ವಹಿಸಿ’ ಎಂದು ಕಾನೂನು ಸಚಿವ ಕಿರಣ್ ರಿಜಿಜು ಅವರು ಟಿ.ವಿ. ಸುದ್ದಿವಾಹಿನಿಯೊಂದಕ್ಕೆ ನೀಡಿದ್ದ ಸಂದರ್ಶನದಲ್ಲಿ ಹೇಳಿದ್ದರು.

ಇದೇ ಮೊದಲಲ್ಲ

ನೇಮಕಾತಿ ವಿಚಾರದಲ್ಲಿ ಸರ್ಕಾರದ ವರ್ತನೆಯ ಕುರಿತು ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದ್ದು ಇದೇ ಮೊದಲಲ್ಲ. ನ್ಯಾಯಮೂರ್ತಿ ಹುದ್ದೆಗೆ ನೇಮಕಕ್ಕಾಗಿ ಶಿಫಾರಸು ಮಾಡಿದ ಹೆಸರುಗಳಿಗೆ ಅನುಮೋದನೆ ನೀಡಲು ವಿಳಂಬ ಮಾಡುವುದು ಸರಿಯಲ್ಲ ಎಂದು ನವೆಂಬರ್ 11ರಂದೂ ಹೇಳಿತ್ತು.

ಕಾನೂನು ಸಚಿವಾಲಯದ ಕಾರ್ಯದರ್ಶಿ ಮತ್ತು ಹೆಚ್ಚುವರಿ ಕಾರ್ಯದರ್ಶಿಗೆ ನೋಟಿಸ್ ನೀಡಿ, ಪ್ರತಿಕ್ರಿಯೆ ನೀಡಲು ಸೂಚಿಸಿತ್ತು. ಕೊಲಿಜಿಯಂ 11 ಹೆಸರುಗಳನ್ನು ಶಿಫಾರಸು ಮಾಡಿತ್ತು. ಮತ್ತೆ, ಅವೇ ಹೆಸರುಗಳನ್ನು ಪುನರುಚ್ಚರಿಸಲಾಗಿತ್ತು.

ಕೊಲಿಜಿಯಂ ಸರ್ವಾನುಮತದಿಂದ ಮರುಶಿಫಾರಸು ಮಾಡಿದ ಹೆಸರುಗಳಿಗೆ ಮೂರರಿಂದ ನಾಲ್ಕು ವಾರಗಳಲ್ಲಿ ಸರ್ಕಾರವು ಒಪ್ಪಿಗೆ ಕೊಡಬೇಕು ಎಂದು ಕಳೆದ ವರ್ಷ ಏಪ್ರಿಲ್‌ನಲ್ಲಿ ಕೋರ್ಟ್ ಹೇಳಿತ್ತು.



ಕಾಡಾನೆ ಸೆರೆ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಹುಲ್ಲೆಮನೆ ಕುಂದೂರು ಭಾಗದಲ್ಲಿರುವ ಮೂರು ಕಾಡಾನೆಗಳ ಸೆರೆಗೆ ಸರ್ಕಾರ ಆದೇಶ ನೀಡಿದ್ದು, ಸೋಮವಾರ ಒಂದು ಆನೆಯನ್ನು ಸೆರೆ ಹಿಡಿಯಲಾಯಿತು. ಈ ಕಾರ್ಯಾಚರಣೆಗೆ ಮತ್ತಿಗೂಡು ಶಿಬಿರದಿಂದ ಅಭಿಮನ್ಯು, ಭೀಮ, ಮಹೇಂದ್ರ ಹಾಗೂ ದುಬಾರೆ ಶಿಬಿರದಿಂದ ಕೃಷ್ಣಾ, ಪ್ರಶಾಂತ್, ಹರ್ಷ ಆನೆಗಳನ್ನು ಬಳಸಿಕೊಳ್ಳಲಾಗುತ್ತಿದೆ

‘ಚಿಲುಮೆ’ ವಿರುದ್ಧದ ಪ್ರಕರಣ ಮತ್ತೊಬ್ಬ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ವೈಯಕ್ತಿಕ ಮಾಹಿತಿ ಕಳವು ಹಾಗೂ ದುರ್ಬಳಕೆ ಆರೋಪದಡಿ ಚಿಲುಮೆ ಸಂಸ್ಥೆ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿ ಅನಿಲ್ ಎಂಬುವವರನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆ 12ಕ್ಕೆ ಏರಿದೆ.

‘ಚಿಲುಮೆ ಸಂಸ್ಥೆಯ ಸಂಸ್ಥಾಪಕ ರವಿಕುಮಾರ್ ಜೊತೆಗೆ ಒಡನಾಟ ಹೊಂದಿದ್ದ ಅನಿಲ್, ಮತದಾರರ ಮಾಹಿತಿ ಸಂಗ್ರಹಿಸುವ ಕೆಲಸಕ್ಕೆ ಸಹಾಯ ಮಾಡಿದ್ದ. ರವಿಕುಮಾರ್‌ನನ್ನು ಬಂಧಿಸಿ ವಿಚಾರಣೆ ನಡೆಸಿದಾಗ, ಅನಿಲ್ ಹೆಸರು ಬಾಯ್ಬಿಟ್ಟಿದ್ದ. ಈ ಮಾಹಿತಿ ಆಧರಿಸಿ ಅನಿಲ್‌ನನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಮಹದೇವಪುರ ವಿಧಾನಸಭಾ ಕ್ಷೇತ್ರದ ಮತದಾರರ ಸಮೀಕ್ಷೆ ಮಾಡಲು ಮುಂದಾಗಿದ್ದ ಚಿಲುಮೆ ಸಂಸ್ಥೆ ಸಿಬ್ಬಂದಿ, ಅದೇ ಕ್ಷೇತ್ರ ವ್ಯಾಪ್ತಿಯಲ್ಲಿ ಕಚೇರಿ ತೆರೆದಿದ್ದರು. ಕಚೇರಿ ನಿರ್ವಹಣೆ ಜವಾಬ್ದಾರಿ ವಹಿಸಿಕೊಂಡಿದ್ದ ಅನಿಲ್, ಸಿಬ್ಬಂದಿ ನೇಮಕ ಹಾಗೂ ಸಾರಿಗೆ ಸೌಕರ್ಯ ಕಲ್ಪಿಸುವ ಕೆಲಸವನ್ನೂ ಮಾಡುತ್ತಿದ್ದ. ಪ್ರಕರಣ ದಾಖಲಾಗುತ್ತಿದ್ದಂತೆ ಈತ ಪರಾರಿಯಾಗಿದ್ದ’ ಎಂದು ತಿಳಿಸಿದರು.

ಅಧಿಕಾರಿಗಳ ವಿಚಾರಣೆ ಮುಂದುವರಿಕೆ: ಪ್ರಕರಣದಲ್ಲಿ ಬಂಧಿಸಲಾಗಿರುವ ಬಿಬಿಎಂಪಿ ಕಂದಾಯ ಅಧಿಕಾರಿಗಳಾದ ಸುಹೇಲ್ ಅಹಮದ್, ಕೆ.ಚಂದ್ರಶೇಖರ್, ಮಹೇಶ್ ಹಾಗೂ ಉಪ ಕಂದಾಯ ಅಧಿಕಾರಿ ವಿ.ಬಿ. ಭೀಮಾಶಂಕರ್ ಅವರ ವಿಚಾರಣೆಯನ್ನು ಪೊಲೀಸರು ಮುಂದುವರಿಸಿದ್ದಾರೆ.

‘ಮತದಾರರ ಸಮೀಕ್ಷೆಯೇ ಕಾನೂನುಬಾಹಿರ. ಇಂಥ ಸಮೀಕ್ಷೆ ಕೈಗೊಳ್ಳಲು ತೀರ್ಮಾನಿಸಿದ್ದ ಚಿಲುಮೆ ಸಂಸ್ಥೆಗೆ ಬಂಧಿತ ಅಧಿಕಾರಿಗಳು ಸಹಕಾರ ನೀಡಿದ್ದರು. ಮತಗಟ್ಟೆ ಅಧಿಕಾರಿ (ಬಿಎಲ್‌ಒ) ಗುರುತಿನ ಚೀಟಿಗಳನ್ನೂ ಅಕ್ರಮವಾಗಿ ಮಾಡಿಕೊಟ್ಟಿದ್ದರು. ಆರೋಪಿತ ಅಧಿಕಾರಿಗಳು, ಹಿರಿಯ ಅಧಿಕಾರಿಗಳ ಸೂಚನೆಯಂತೆ ಕೆಲಸ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಸೂಕ್ತ ಪುರಾವೆಗಾಗಿ ಹುಡುಕಾಟ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಗಡಿ ವಿವಾದ: ರೋಹಟಗಿ ಜತೆ ಸಿ.ಎಂ ಚರ್ಚೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದದ ಪ್ರಕರಣ ಇದೇ 30 ರಂದು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬರಲಿದೆ. ನ್ಯಾಯಾಲಯದಲ್ಲಿ ರಾಜ್ಯದ ನಿಲುವನ್ನು ಪ್ರತಿಪಾದಿಸುವ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ದೆಹಲಿಯಲ್ಲಿ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಮುಕುಲ್ ರೋಹಟಗಿ ಜತೆ ಮಂಗಳವಾರ ಚರ್ಚೆ ನಡೆಸಲಿದ್ದಾರೆ.

ಸಭೆಯ ಬಳಿಕ ಬೊಮ್ಮಾಯಿ ಅವರು ಕೇಂದ್ರ ಸಚಿವ ಪೀಯೂಷ್ ಗೋಯೆಲ್ ಮತ್ತು ಒಂದಿಬ್ಬರು ಕೇಂದ್ರ ಸಚಿವರನ್ನೂ ಭೇಟಿ ಮಾಡಲಿದ್ದಾರೆ. ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಭೇಟಿಗೂ ಸಮಯ ಕೇಳಿದ್ದು, ಇನ್ನೂ ಸಮಯ ಕೊಟ್ಟಿಲ್ಲ ಎಂದು ಮೂಲಗಳು ತಿಳಿಸಿವೆ.

ಸಂವಿಧಾನ ತಿರುಚಿದ ಕಾಂಗ್ರೆಸ್: ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ ಬೊಮ್ಮಾಯಿ, ಈವರೆಗೆ ಕಾಂಗ್ರೆಸ್ ಪಕ್ಷವೇ ಸಂವಿಧಾನವನ್ನು ತಿರುಚಿರುವುದು ಎಂದರು.

‘ಬಿಜೆಪಿ ಸಂವಿಧಾನವನ್ನು ತಿರುಚಿದೆ’ ಎಂಬ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ‘ಸಂವಿಧಾನವನ್ನು ಗಾಳಿಗೆ ತೂರಿ ತುರ್ತು ಪರಿಸ್ಥಿತಿಯನ್ನು ಹೇರಿದ್ದು ಕಾಂಗ್ರೆಸ್. ವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿ ಎಲ್ಲರನ್ನೂ ಜೈಲಿಗೆ ಹಾಕಿದ ಕಾಂಗ್ರೆಸ್ ಪಕ್ಷದಿಂದ ಪಾಠ ಕಲಿಯುವ ಅಗತ್ಯವಿಲ್ಲ’ ಎಂದರು.

ಡಿ.3ರಂದು ಮಹಾರಾಷ್ಟ್ರದ ಸಚಿವರು ಬೆಳಗಾವಿಗೆ

ಮುಂಬೈ(ಪಿಟಿಐ): ಮಹಾರಾಷ್ಟ್ರದ ಸಚಿವರಾದ ಚಂದ್ರಕಾಂತ ಪಾಟೀಲ್ ಮತ್ತು ಶಂಭುರಾಜ್ ದೇಸಾಯಿ ಅವರು ಡಿಸೆಂಬರ್ 3ರಂದು ಬೆಳಗಾವಿಯಲ್ಲಿ ಮಧ್ಯವರ್ತಿ ಮಹಾರಾಷ್ಟ್ರ ಏಕೀಕರಣ ಸಮಿತಿ ಕಾರ್ಯಕರ್ತರನ್ನು ಭೇಟಿಯಾಗಿ ಕರ್ನಾಟಕದ ಜೊತೆಗಿನ ಗಡಿ ಸಮಸ್ಯೆಯ ಕುರಿತು ಮಾತುಕತೆ ನಡೆಸಲಿದ್ದಾರೆ.

ಗಡಿ ವಿವಾದಕ್ಕೆ ಸಂಬಂಧಿಸಿ ಪಾಟೀಲ್ ಮತ್ತು ದೇಸಾಯಿ ಅವರನ್ನು ಸಮನ್ವಯ ಸಚಿವರನ್ನಾಗಿ ಮಹಾರಾಷ್ಟ್ರ ಸರ್ಕಾರವು ನೇಮಕ ಮಾಡಿದೆ. ಎರಡು ರಾಜ್ಯಗಳ ನಡುವಿನ ವಿವಾದದ ಕುರಿತು ನ್ಯಾಯಾಲಯದಲ್ಲಿರುವ ಪ್ರಕರಣಕ್ಕೆ ಸಂಬಂಧಿಸಿಯೂ ಕಾನೂನು ತಂಡದ ಜೊತೆಗೆ ಸಮನ್ವಯ ಸಾಧಿಸಲು ಇವರಿಬ್ಬರಿಗೆ ತಿಳಿಸಲಾಗಿದೆ.

‘ಗಡಿ ವಿವಾದದ ಕುರಿತು ಮಾತುಕತೆ ನಡೆಸಬೇಕೆಂಬ ಬೇಡಿಕೆಯನ್ನು ಮಧ್ಯವರ್ತಿ ಮಹಾರಾಷ್ಟ್ರ ಏಕೀಕರಣ ಸಮಿತಿ ಮುಂದಿಟ್ಟಿದೆ. ಈ ಕಾರಣಕ್ಕೆ ನಾನು ಮತ್ತು ಸಚಿವ ಶಂಭುರಾಜ್ ದೇಸಾಯಿ ಅವರು ಬೆಳಗಾವಿಗೆ ತೆರಳಿ ಮಾತುಕತೆ ನಡೆಸಲಿದ್ದೇವೆ. ಚರ್ಚೆಯು ಖಂಡಿತವಾಗಿಯೂ ಮುಂದಿನ ದಾರಿ ತೋರಲಿದೆ’ ಎಂದು ಚಂದ್ರಕಾಂತ ಪಾಟೀಲ್ ಅವರು ಟ್ವೀಟ್ ಮಾಡಿದ್ದಾರೆ. ಈ ವಿಚಾರವಾಗಿ ಸಮಿತಿಯು ಕಳುಹಿಸಿರುವ ಪತ್ರವನ್ನೂ ಅವರು ಟ್ವೀಟ್ ಜೊತೆ ಹಂಚಿಕೊಂಡಿದ್ದಾರೆ.

ಮಾ.9ರಿಂದ ದ್ವಿತೀಯ ಪಿಯು ಪರೀಕ್ಷೆ

ಬೆಂಗಳೂರು: 2022–23ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆಯ ಅಂತಿಮ ವೇಳಾಪಟ್ಟಿಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಸೋಮವಾರ ಪ್ರಕಟಿಸಿದೆ.

ಮಾರ್ಚ್ 9ರಿಂದ 29ರವರೆಗೆ ಪರೀಕ್ಷೆಗಳು ನಡೆಯಲಿವೆ. ಮಾರ್ಚ್ 9ರಂದು ಕನ್ನಡ, ಅರೇಬಿಕ್, 11ರಂದು ಗಣಿತ, ಶಿಕ್ಷಣಶಾಸ್ತ್ರ, 13ರಂದು ಅರ್ಥಶಾಸ್ತ್ರ, 14ರಂದು ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ಮನಃಶಾಸ್ತ್ರ, ರಸಾಯನ ವಿಜ್ಞಾನ, ಮೂಲಗಣಿತ, 15ರಂದು ತಮಿಳು, ತೆಲುಗು, ಮಲಯಾಳ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, 16ರಂದು ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ, 17ರಂದು ಮಾಹಿತಿ ತಂತ್ರಜ್ಞಾನ, ರೀಟೈಲ್, ಆಟೊಮೊಬೈಲ್, ಆರೋಗ್ಯರಕ್ಷಣೆ, ಸೌಂದರ್ಯ ಮತ್ತು ಕ್ಷೇಮಶಾಸ್ತ್ರ, 18ರಂದು ಭೂಗೋಳ ವಿಜ್ಞಾನ, ಜೀವ ವಿಜ್ಞಾನ, 20ರಂದು ಇತಿಹಾಸ, ಭೌತವಿಜ್ಞಾನ, 21ರಂದು ಹಿಂದಿ, 23ರಂದು ಇಂಗ್ಲಿಷ್, 25ರಂದು ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ, 27ರಂದು ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಭೂಗರ್ಭ ವಿಜ್ಞಾನ, ಗೃಹ ವಿಜ್ಞಾನ, 29ರಂದು ಸಮಾಜ ವಿಜ್ಞಾನ, ವಿದ್ಯುನ್ಮಾನ, ಗಣಕ ವಿಜ್ಞಾನ ಪರೀಕ್ಷೆಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಪರೀಕ್ಷಾ ಅಂತಿಮ ವೇಳಾಪಟ್ಟಿಯನ್ನು www.sslc.karnataka.gov.in ವೆಬ್‌ಸೈಟ್‌ನಲ್ಲೂ ವೀಕ್ಷಿಸಬಹುದಾಗಿದೆ.

ಚೀನಾ: ಜನಾಕ್ರೋಶ ಹತ್ತಿಕ್ಕಲು ಭದ್ರತಾ ಪಡೆ ಬಳಕೆ, ಮಾಧ್ಯಮ ನಿರ್ಬಂಧ

ಬೀಜಿಂಗ್/ಶಾಂಘೈ/ಜಿನೀವಾ (ಎಎಫ್‌ಪಿ/ಪಿಟಿಐ): ರಾಜಕೀಯ ಸ್ವಾತಂತ್ರ್ಯಕ್ಕಾಗಿ ಮತ್ತು ಕೋವಿಡ್ ಕಠಿಣ ಲಾಕ್‌ಡೌನ್ ಅಂತ್ಯಗೊಳಿಸುವಂತೆ ಒತ್ತಾಯಿಸಿ ದೇಶದಾದ್ಯಂತ ಭುಗಿಲೆದ್ದಿರುವ ಸಾರ್ವಜನಿಕ ಪ್ರತಿಭಟನೆಗಳನ್ನು ಹತ್ತಿಕ್ಕಲು ಚೀನಾದ ಕಮ್ಯುನಿಸ್ಟ್ ಸರ್ಕಾರ, ಭದ್ರತಾ ಪಡೆಗಳ ಮೊರೆ ಹೋಗಿದೆ.

ಪರಿಸ್ಥಿತಿ ನಿಯಂತ್ರಿಸಲು ರಸ್ತೆಗಿಳಿದಿರುವ ಭದ್ರತಾ ಪಡೆಗಳು ಸೋಮವಾರ ಹಲವರನ್ನು ವಶಕ್ಕೆ ಪಡೆದಿವೆ. ದೇಶದಲ್ಲಿ ಅಪರೂಪಕ್ಕೆ ನಡೆಯುತ್ತಿರುವ ನಾಗರಿಕರ ಪ್ರತಿಭಟನೆಗಳನ್ನು ತಡೆಯಲು, ಟಿ.ವಿ, ಮುದ್ರಣ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಸುದ್ದಿಗಳು ಪ್ರಸಾರವಾಗದಂತೆ ನಿರ್ಬಂಧಿಸಲು ಅಧಿಕಾರಿಗಳು ಯತ್ನಿಸುತ್ತಿದ್ದಾರೆ.

ಬೀಜಿಂಗ್, ಶಾಂಘೈ ನಗರಗಳು ಸೇರಿ ದೇಶದಾದ್ಯಂತ ಪ್ರತಿದಿನ ಕೋವಿಡ್ ಹೊಸ ಪ್ರಕರಣಗಳು ಉಲ್ಬಣಿಸುತ್ತಿವೆ. ಸತತ ಐದನೇ ದಿನವಾದ ಸೋಮವಾರ ಕೂಡ ಸುಮಾರು 40 ಸಾವಿರ ಹೊಸ ಪ್ರಕರಣಗಳು ದೇಶದಲ್ಲಿ ದಾಖಲಾಗಿವೆ.

‘ಅಧ್ಯಕ್ಷ ಷಿ ಜಿನ್‌ಪಿಂಗ್ ಅಧಿಕಾರದಿಂದ ಕೆಳಗಿಳಿಯಬೇಕು. ಲಾಕ್‌ಡೌನ್ ನಿರ್ಬಂಧ ತೆರವುಗೊಳಿಸಬೇಕು, ಕೋವಿಡ್ ಪರೀಕ್ಷೆ ಬೇಡ, ಸ್ವಾತಂತ್ರ್ಯ ಬೇಕು’ ಎಂದು ಒತ್ತಾಯಿಸಿ ನಾಗರಿಕರು ನಡೆಸುತ್ತಿರುವ ಪ್ರತಿಭಟನೆ ಎರಡನೇ ವಾರಕ್ಕೆ ಕಾಲಿಟ್ಟಿದೆ.

ಪ್ರತಿಭಟನೆ ಹತ್ತಿಕ್ಕದಿರಿ: ನಾಗರಿಕರ ಶಾಂತಿಯುತ ಪ್ರತಿಭಟನೆಗಳನ್ನು ಹತ್ತಿಕ್ಕಬಾರದು. ಪ್ರತಿಭಟನಕಾರರನ್ನು ಬಂಧಿಸಬಾರದು ಎಂದು ವಿಶ್ವಸಂಸ್ಥೆಯು ಸೋಮವಾರ ಚೀನಾವನ್ನು ಒತ್ತಾಯಿಸಿದೆ.

‘ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಕಾನೂನುಗಳು ಮತ್ತು ಮಾನದಂಡಗಳಿಗೆ ಅನುಗುಣವಾಗಿ ಸರ್ಕಾರ ಸ್ಪಂದಿಸಬೇಕು. ಅಭಿಪ್ರಾಯಗಳನ್ನು ಶಾಂತಿಯುತವಾಗಿ ವ್ಯಕ್ತಪಡಿಸಿದ್ದಕ್ಕಾಗಿ ಯಾರನ್ನೂ ಬಂಧಿಸಬಾರದು’ ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಕಚೇರಿಯ ವಕ್ತಾರ ಜೆರೆಮಿ ಲಾರೆನ್ಸ್ ಸುದ್ದಿಗಾರರಿಗೆ ತಿಳಿಸಿದರು.

‘ಕಸಬ್’ ಎಂದ ಪ್ರಾಧ್ಯಾಪಕ: ವಿದ್ಯಾರ್ಥಿ ತರಾಟೆ

ಉಡುಪಿ: ಮಣಿಪಾಲದ ಮಾಹೆ ವಿವಿಯ ಎಂಐಟಿ ಕಾಲೇಜಿನಲ್ಲಿ ಪ್ರಾಧ್ಯಾಪಕ ರವೀಂದ್ರನಾಥ್ ತನ್ನನ್ನು ‘ಕಸಬ್’ ಎಂದು ಸಂಬೋಧಿಸಿದರು ಎಂದು ವಿದ್ಯಾರ್ಥಿ ಪಿ.ಹಮ್ಜ ಆಕ್ಷೇಪ ವ್ಯಕ್ತಪಡಿಸಿ, ಆಪ್ರಾಧ್ಯಾಪಕರನ್ನು ತರಗತಿಯಲ್ಲೇ ತರಾಟೆಗೆ ತೆಗೆದುಕೊಂಡ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಪ್ರಾಧ್ಯಾಪಕರ ಈ ನಡೆಗೆ ನೆಟ್ಟಿಗರಿಂದ ಆಕ್ಷೇಪ ವ್ಯಕ್ತವಾಗಿದೆ. 4

ಚಿನಕುರಳಿ

ಪ್ರಕಾಶ್ ಶೆಟ್ಟಿ



ನಟ್ ಬ್ರೌನ್ ಹೆಸರಲ್ಲಿ ಜನಪ್ರಿಯವಾಗುತ್ತಿದೆ ಅಡಿಕೆ ಬಣ್ಣ

ವಿದೇಶಿ ವಸ್ತ್ರಕ್ಕೂ ಅಡಿಕೆ ಬಣ್ಣದ ಮೆರುಗು

• ಗಣೇಶ ಚಂದನಶಿವ

ಪ್ರಜಾವಾಣಿ ವಿಶೇಷ

ಮಂಗಳೂರು: ವಸ್ತ್ರೋದ್ಯಮದಲ್ಲಿ ಅಡಿಕೆಯ ಬಣ್ಣದ ಬಳಕೆ ಈಗ ವಿದೇಶಗಳಲ್ಲಿಯೂ ಹೆಚ್ಚುತ್ತಿದೆ. ಈ ನೈಸರ್ಗಿಕ ಬಣ್ಣದ ಉತ್ಕೃಷ್ಟತೆಯನ್ನು ಇನ್ನಷ್ಟು ಹೆಚ್ಚಿಸಿದರೆ ಅಡಿಕೆ ಕೃಷಿಯಲ್ಲಿ ಹೊಸ ಕ್ರಾಂತಿ ಉಂಟಾಗುವ ಸಾಧ್ಯತೆ ಇದೆ ಎಂದು ಅಡಿಕೆ ಕೃಷಿ ತಜ್ಞರು ಹೇಳುತ್ತಿದ್ದಾರೆ.


ಕೆಂಪಡಿಕೆಯ ಕೊಯಿಲೋತ್ತರ ಸಂಸ್ಕರಣೆಯ ಉಪ ಉತ್ಪನ್ನ ‘ಚೊಗರು/ತೊಗರು’ ಅನ್ನು ನೈಸರ್ಗಿಕ ಬಣ್ಣಕ್ಕೆ ಬಳಸಲಾಗುತ್ತಿದೆ. ಅಡಿಕೆಯ ಚೊಗರಿನಿಂದ ಬಣ್ಣ ತಯಾರಿಕೆ ಬಹಳ ವರ್ಷಗಳಿಂದ ಇದೆ. ಅದು ಅತೀ ಕಡಿಮೆ ಪ್ರಮಾಣದಲ್ಲಿ ಇತ್ತು. ಈಗ ಜಾಗತಿಕವಾಗಿ ಬೇಡಿಕೆ ಪಡೆದುಕೊಳ್ಳುತ್ತಿದೆ.

‘ಮಧ್ಯವರ್ತಿಗಳಿಂದ ಚೊಗರು ಖರೀದಿಸಿ, ಅಲ್ಪ ಪ್ರಮಾಣದಲ್ಲಿ ಸಂಸ್ಕರಿಸಿ ರಾಜಸ್ಥಾನ, ಗುಜರಾತ್, ಉತ್ತರ ಪ್ರದೇಶದ ಕಂಪನಿಗಳಿಗೆ ಪೂರೈಸುತ್ತಿದ್ದೇನೆ’ ಎನ್ನುತ್ತಾರೆ ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಶೆಡ್ತಿಕೆರೆ ಗ್ರಾಮದ ಹವ್ಯಕ ಕೃಷಿ ಉದ್ಯೋಗ ಮತ್ತು ಕೈಗಾರಿಕಾ ಕಂಪನಿಯ ಸಂತೋಷ್ ಕುಮಾರ್.

‘ಹಾಲಿನ ಪೌಡರ್‌ನಂತೆ ಅಡಿಕೆಯ ಚೊಗರಿನಿಂದ ಪೌಡರ್‌ಅನ್ನು ಬೆಂಗಳೂರು ಹಾಗೂ ರಾಜಸ್ಥಾನದಲ್ಲಿ ಉತ್ಪಾದಿಸಿ, ನಟ್ ಬ್ರೌನ್ (Nut Brown) ಹೆಸರಿನಲ್ಲಿ ಈ ಬಣ್ಣವನ್ನು ದೇಶ–ವಿದೇಶಗಳಿಗೆ ಪೂರೈಸಲಾಗುತ್ತಿದೆ. ಇದಕ್ಕೆ ಬೇಡಿಕೆಯೂ ಹೆಚ್ಚುತ್ತಿದೆ. ಕಳಪೆ ಗುಣಮಟ್ಟದ ಅಡಿಕೆಯ ಬಣ್ಣ ವೃದ್ಧಿಸಲು ಚೊಗರನ್ನು ಈಗಲೂ ಕೆಲವು ವ್ಯಾಪಾರಿಗಳು ಬಳಕೆ ಮಾಡುತ್ತಿದ್ದಾರೆ. ಇದರಿಂದ ರೈತರಿಗೆ ಯಾವುದೇ ಲಾಭ ಇಲ್ಲ. ಚೊಗರನ್ನು ಬಣ್ಣ ತಯಾರಿಕೆಗೆ ಮಾರಾಟ ಮಾಡಿದರೆ ರೈತರು 2–3 ಪಟ್ಟು ಆದಾಯ ಗಳಿಸಬಹುದು’ ಎಂದರು.

4ನೇ ಪುಟ ನೋಡಿ


ಕೆಂಪಡಿಕೆ ಮತ್ತು ಕೆಂಪಡಿಕೆಯ ಚೊಗರಿನಿಂದ ತಯಾರಿಸಿದ ಬಣ್ಣ


ಅಡಿಕೆ ಬಣ್ಣ ಬಳಸಿ ಚರಕ ಸಂಸ್ಥೆಯವರು ತಯಾರಿಸಿದ ಶರ್ಟ್

ಚೊಗರನ್ನು ಸಾರ, ಪೇಸ್ಟ್, ಪೌಡರ್ ರೂಪದಲ್ಲಿ ತಯಾರಿಸುವ ವಿಧಾನವನ್ನೂ ಆಗಲೇ ರೂಢಿಸಿಕೊಂಡಿದ್ದೇವೆ. ಅಡಿಕೆಯ ಬಣ್ಣದಿಂದ 50ರಿಂದ 60 ಶೇಡ್ (ಛಾಯೆ)ಗಳನ್ನು ತರಬಹುದು

ಡಾ.ಗೀತಾ ಮಹಾಲೆ
ಹಿರಿಯ ಸಂಶೋಧಕಿ, ಧಾರವಾಡ

ಏನಿದು ಚೊಗರು?

ಅಡಿಕೆಯಲ್ಲಿ ಎರಡು ವಿಧ. ಒಂದು ಚಾಲಿ ಅಡಿಕೆ; ಅಂದರೆ ಬಿಳಿ ಅಡಿಕೆ. ಇದನ್ನು ಮರದಲ್ಲಿ ಅಡಿಕೆ ಹಣ್ಣು ಆದಾಗ ಕೊಯ್ದು ಒಣಗಿಸಿ ಮಾರಾಟ ಮಾಡಲಾಗುತ್ತದೆ.

ಇನ್ನೊಂದು ಕೆಂಪಡಿಕೆ. ಅಡಿಕೆ ಸುಲಿದು ಬೇಯಿಸುತ್ತಾರೆ. ಕರ್ನಾಟಕದಲ್ಲಿ ಬೆಳೆಯುವ ಅಡಿಕೆಯಲ್ಲಿ ಅರ್ಧಕ್ಕಿಂತ ಹೆಚ್ಚು ಪ್ರಮಾಣ ಕೆಂಪಡಿಕೆಯದ್ದು. ಶಿವಮೊಗ್ಗ, ಉತ್ತರ ಕನ್ನಡ ಹಾಗೂ ಬಯಲುಸೀಮೆಯಲ್ಲಿ ಇದನ್ನು ಹೆಚ್ಚು ಬೆಳೆಯಲಾಗುತ್ತಿದೆ. ಕೆಂಪಡಿಕೆಯನ್ನು ನೀರಿನಲ್ಲಿ ಕುದಿಸಿ ಸಂಸ್ಕರಿಸಿದಾಗ ಉತ್ಪತ್ತಿಯಾಗುವ ಪದಾರ್ಥಕ್ಕೆ ಅಡಿಕೆ ಚೊಗರು, ಅಡಿಕೆ ತೊಗರು, ಅಡಿಕೆ ಹಾಲು ಎಂದು ಕರೆಯಲಾಗುತ್ತಿದೆ.

ಪರಿಶಿಷ್ಟರೇ ಸಿ.ಎಂ: ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಈ ಬಾರಿ ಪರಿಶಿಷ್ಟ ಸಮುದಾಯದವರನ್ನೇ ಮುಖ್ಯಮಂತ್ರಿ ಮಾಡಬೇಕು, ಇದಕ್ಕಾಗಿ ಪರಿಶಿಷ್ಟ ಸಮುದಾಯದ ಎಲ್ಲ 151 ಜಾತಿಯವರೂ ಒಂದಾಗಬೇಕು’ ಎಂಬ ನಿರ್ಣಯವನ್ನು ರಾಜ್ಯದ ವಿವಿಧ ಮಠಾಧೀಶರು ಹಾಗೂ ಮುಖಂಡರ ಸಭೆಯಲ್ಲಿ ಕೈಗೊಳ್ಳಲಾಯಿತು.

ನಗರದಲ್ಲಿ ಸೋಮವಾರ ನಡೆದ ಪರಿಶಿಷ್ಟ ಜಾತಿ ಹಾಗೂ ಪಂಗಡದ ಮಠಾಧೀಶರು ಹಾಗೂ ಸ್ವಾಭಿಮಾನಿ ಎಸ್‌ಸಿ–ಎಸ್‌ಟಿ ಒಕ್ಕೂಟದ ಸಭೆಯಲ್ಲಿ ಒಮ್ಮತದಿಂದ ನಿರ್ಣಯ ಕೈಗೊಳ್ಳಲಾಯಿತು.

‘ಪರಿಶಿಷ್ಟ ಜಾತಿಯಲ್ಲಿ 101 ಉಪ ಜಾತಿ, ಪರಿಶಿಷ್ಟ ಪಂಗಡದಲ್ಲಿ 50 ಉಪ ಜಾತಿಯವರು ಇದ್ದೇವೆ. 2 ಕೋಟಿಗೂ ಅಧಿಕ ಜನಸಂಖ್ಯೆ ಇದೆ. ಆದರೂ ಇದುವರೆಗೆ ಮುಖ್ಯಮಂತ್ರಿ ಸ್ಥಾನ ಸಿಕ್ಕಿಲ್ಲ. ಪಕ್ಷಗಳ ಕಾರಣದಿಂದ, ಭಿನ್ನಮತದಿಂದ ಚದುರಿ ಹೋದ ಎಲ್ಲ ಜಾತಿಯವರೂ ಈಗ ಒಂದಾಗಬೇಕು. ಮಠಾಧೀಶರು ಹೇಳಿದವರಿಗೇ ಮತ ಹಾಕಬೇಕು’ ಎಂದೂ ನಿರ್ಧರಿಸಲಾಯಿತು.

ಸದ್ಯ 51 ಕ್ಷೇತ್ರಗಳಲ್ಲಿ 36 ಪರಿಶಿಷ್ಟ ಜಾತಿಗೆ, 15 ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿವೆ. ಇವಲ್ಲದೇ ಇನ್ನೂ 58 ಕ್ಷೇತ್ರಗಳಲ್ಲಿ ಪರಿಶಿಷ್ಟರೇ ಗೆಲ್ಲುವ ಅವಕಾಶಗಳಿವೆ. ಮುಂದಿನ ದಿನಗಳಲ್ಲಿ ಜಿಲ್ಲಾ ಹಾಗೂ ತಾಲ್ಲೂಕುವಾರು ಸಮಾವೇಶ ಮಾಡಿ, ಆ ಕ್ಷೇತ್ರಗಳನ್ನೂ ಗೆಲ್ಲಲು ಸಿದ್ಧತೆ ಮಾಡಬೇಕು ಎಂದು ತಿಳಿಸಲಾಯಿತು.

ಈಗ ಪರಿಶಿಷ್ಟ ಸ್ವಾಮೀಜಿಗಳೆಲ್ಲ ಒಂದಾಗಿದ್ದೇವೆ. ಹಿಂದುಳಿದ ವರ್ಗದ ಮಠಾಧೀಶರನ್ನೂ ಸೇರಿಸಿಕೊಂಡು ಮಹಾನ್ ಸಂಘಟನೆ ಮಾಡಿ ಮುನ್ನುಗ್ಗಬೇಕು. ಕಲಬುರಗಿಯ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಪರಿಶಿಷ್ಟರಿಗೆ ಮೀಸಲಾದ ಪ್ರಾಧ್ಯಾಪಕ, ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ತಪ್ಪಿಸಲು ಯತ್ನ ನಡೆದಿದೆ. ಇದನ್ನು ತಡೆಯಬೇಕು ಎಂಬ ನಿರ್ಣಯ ಕೂಡ ಕೈಗೊಳ್ಳಲಾಯಿತು.

9ನೇ ಪುಟ ನೋಡಿ


ಶಾಸಕ ರಮೇಶ ಜಾರಕಿಹೊಳಿ ಅವರ ಬೆಳಗಾವಿ ನಿವಾಸದಲ್ಲಿ ಸೋಮವಾರ ನಡೆದ ಗೋಪ್ಯ ಸಭೆಯಲ್ಲಿ ಸಿದ್ದರಾಮೇಶ್ವರ ಸ್ವಾಮೀಜಿ, ಬಸವಪ್ರಭು ಇಮ್ಮಡಿ ಕೇತೇಶ್ವರ ಸ್ವಾಮೀಜಿ, ಸಂತ ಸೇವಾಲಾಲ್ ಸ್ವಾಮೀಜಿ, ಜ್ಞಾನ ಪ್ರಕಾಶ ಸ್ವಾಮೀಜಿ, ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಬಸವನಾಗಿದೇವ ಸ್ವಾಮೀಜಿ ಪಾಲ್ಗೊಂಡರು

ಸಂಗಪ್ಪ ಪ್ರಭಾರ ಜಿಲ್ಲಾಧಿಕಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಂಗಪ್ಪ ಅವರಿಗೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಹುದ್ದೆಯ ಹೆಚ್ಚುವರಿ ಪ್ರಭಾರ ವಹಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

ಬಿಬಿಎಂಪಿ ಘನತ್ಯಾಜ್ಯ ನಿರ್ವಹಣಾ ವಿಭಾಗದ ವಿಶೇಷ ಆಯುಕ್ತ ಡಾ. ಹರೀಶ್ ಕುಮಾರ್ ಕೆ. ಅವರಿಗೆ ಪಾಲಿಕೆಯ ಆಡಳಿತ ವಿಭಾಗದ ವಿಶೇಷ ಆಯುಕ್ತರ ಹುದ್ದೆಯ ಹೆಚ್ಚುವರಿ ಪ್ರಭಾರ ವಹಿಸಿ ಆದೇಶಿಸಲಾಗಿದೆ.

ಶಿವಾಜಿನಗರ, ಚಿಕ್ಕಪೇಟೆ ಮತ್ತು ಮಹದೇವಪುರ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆಗಾಗಿ ಚಿಲುಮೆ ಸಂಸ್ಥೆಯ ಕಾರ್ಯಕರ್ತರಿಗೆ 'ಮತಗಟ್ಟೆ ಹಂತದ ಅಧಿಕಾರಿ' ಎಂಬ ಹೆಸರಿನಡಿ ಗುರುತಿನ ಚೀಟಿ ನೀಡಿದ ಪ್ರಕರಣದಲ್ಲಿ ಕರ್ತವ್ಯಲೋಪ ಎಸಗಿದ ಆರೋಪದಡಿ ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ. ಶ್ರೀನಿವಾಸ್ ಮತ್ತು ಬಿಬಿಎಂಪಿ ವಿಶೇಷ ಆಯುಕ್ತ ಎಸ್. ರಂಗಪ್ಪ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿತ್ತು.

ಈ ಎರಡೂ ಹುದ್ದೆಗಳ ಹೆಚ್ಚುವರಿ ಹೊಣೆಯನ್ನು ಸಂಗಪ್ಪ ಮತ್ತು ಹರೀಶ್ ಕುಮಾರ್ ಅವರಿಗೆ ನೀಡಲಾಗಿದೆ.

ಮಹದೇವಪುರ: ರಾಜಕಾಲುವೆ ಒತ್ತುವರಿ ತೆರವಿಗೆ ಅಡ್ಡಿಪಡಿಸಿದ್ದ ಆರೋಪ

ಎಫ್‌ಐಆರ್ ರದ್ದತಿಗೆ ಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ವೇಳೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಅಧಿಕಾರಿಗಳಿಗೆ ಅಡ್ಡಿಪಡಿಸಿದ ಆರೋಪಕ್ಕೆ ಸಂಬಂಧಿಸಿದಂತೆ ನಗರದ ಅಪಾರ್ಟ್‌ಮೆಂಟ್ ನಿವಾಸಿಗಳ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

'ನಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಗೊಳಿಸಬೇಕು' ಎಂದು ಕೋರಿ ಮಹದೇವಪುರದ 'ಶಿಲ್ಪಿತಾ ಸ್ಪ್ಲೆಂಡರ್ ಅಪಾರ್ಟ್‌ಮೆಂಟ್' ಅಪಾರ್ಟ್‌ಮೆಂಟ್‌ನ 23 ಫ್ಲ್ಯಾಟ್ ನಿವಾಸಿಗಳು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ವಜಾಗೊಳಿಸಿದ್ದಾರೆ.



'ಪ್ರಕರಣಕ್ಕೆ ಸಂಬಂಧಿಸಿದ ಫೋಟೊ ಮತ್ತು ವಿಡಿಯೊ ದೃಶ್ಯಾವಳಿ ಗಮನಿಸಿದಾಗ ಅರ್ಜಿದಾರರು ಬಿಬಿಎಂಪಿ ಅಧಿಕಾರಿಗಳ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಸರ್ಕಾರಿ ಅಧಿಕಾರಿಗಳ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸುವ ಉದ್ದೇಶದಿಂದ ಇವರೆಲ್ಲಾ ಒಟ್ಟುಗೂಡಿದ್ದಾರೆ.

'ಇದು ಭಾರತೀಯ ದಂಡ ಸಂಹಿತೆ (ಐಪಿಸಿ) ಕಲಂ 149 (ಅಕ್ರಮ ಕೂಟ ರಚನೆ) ಮತ್ತು ಕಲಂ 143ರ (ಸರ್ಕಾರಿ ಅಧಿಕಾರಿಯ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸುವುದು) ಅಡಿಯಲ್ಲಿ ಅಪರಾಧವಾಗಿದೆ' ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಪ್ರಕರಣವೇನು?: ಮಹದೇವಪುರ ಗ್ರಾಮದ ಸರ್ವೆ ನಂ. 151/1 ಮತ್ತು 151/4 ಮತ್ತು 119ರಲ್ಲಿ ಒತ್ತುವರಿಯಾಗಿರುವ ರಾಜಕಾಲುವೆ ಜಾಗ ತೆರವುಗೊಳಿಸುವಂತೆ 2020ರ ಜನವರಿ 16ರಂದು ಹೈಕೋರ್ಟ್ ಆದೇಶಿಸಿತ್ತು.

ಇದರ ಅನುಸಾರ ಬಿಬಿಎಂಪಿ ಕಾರ್ಯನಿರ್ವಾಹಕ ಎಂಜಿನಿಯರ್ ಮಾಲತಿ 2020ರ ಮಾರ್ಚ್ 31ರಂದು ಒತ್ತುವರಿ ಜಾಗದ ಸರ್ವೆ ನಡೆಸಲು ಅಧಿಕಾರಿಗಳೊಂದಿಗೆ ಸ್ಥಳಕ್ಕೆ ತೆರಳಿದ್ದರು. ಆಗ ಅಪಾರ್ಟ್‌ಮೆಂಟ್ ನಿವಾಸಿಗಳು ಒಟ್ಟುಗೂಡಿ ಪ್ರತಿಭಟನೆ ನಡೆಸಿದ್ದರು. ಈ ಕುರಿತು ಮಾಲತಿ ಮಹದೇವಪುರ ಠಾಣೆಗೆ ದೂರು ಸಲ್ಲಿಸಿದ್ದರು.

ಓಲಾ, ಉಬರ್ ಪ್ರಯಾಣ ದರ: ವಿಚಾರಣೆ ಮುಂದೂಡಿಕೆ

ಬೆಂಗಳೂರು: 'ಪರವಾನಗಿ ಹೊಂದಿರುವ ಸಂಸ್ಥೆಗಳಿಗೆ ರಾಜ್ಯದ ಎಲ್ಲ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು ನಿಗದಿಪಡಿಸಿರುವ ಆಟೊರಿಕ್ಷಾ ಪ್ರಯಾಣ ದರಗಳ ಮೇಲೆ ಶೇ 5ರಷ್ಟು ಸೇವಾ ಶುಲ್ಕ ಮತ್ತು ಅನ್ವಯಿಸುವ ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ಸೇರಿಸಿ ಅಂತಿಮ ಪ್ರಯಾಣ ದರ ನಿಗದಿಪಡಿಸಲು ನಿರ್ದೇಶಿಸಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

'ಆ್ಯಪ್ ಆಧಾರಿತ ಓಲಾ ಮತ್ತು ಉಬರ್ ಆಟೊ ರಿಕ್ಷಾ ಸೇವೆ ಸ್ಥಗಿತಗೊಳಿಸುವಂತೆ ರಾಜ್ಯ ಸರ್ಕಾರ ಹೊರಡಿಸಿರುವ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್, ಉಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ರೊಪ್ಪೆನ್ ಟ್ರಾನ್ಸ್‌ಪೊರ್ಟೇಷನ್ ಸರ್ವೀಸಸ್ ಸಲ್ಲಿಸಿರುವ ಪ್ರತ್ಯೇಕ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ಈ ಕುರಿತ ಅಧಿಸೂಚನೆಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು ಡಿಸೆಂಬರ್ 5ಕ್ಕೆ ಮುಂದೂಡಿತು.

ಇದೇ ವೇಳೆ ನ್ಯಾಯಪೀಠವು, 'ಅರ್ಜಿದಾರ ಕಂಪನಿಗಳು ಆಟೊರಿಕ್ಷಾ ಸೇವೆಗೆ ದರ ನಿಗದಿಪಡಿಸಿ ಸರ್ಕಾರ 2021ರ ನವೆಂಬರ್ 6ರಂದು ಹೊರಡಿಸಿರುವ ಅಧಿಸೂಚನೆಯಲ್ಲಿ ಸೂಚಿಸಿರುವ ದರದ ಜೊತೆಗೆ ಶೇ 10ರಷ್ಟು ಹೆಚ್ಚುವರಿ ಹಣ ಮತ್ತು ಸೇವಾ ತೆರಿಗೆಯನ್ನು ಪಡೆಯಬೇಕು. ದರ ನಿಗದಿಪಡಿಸುವವರೆಗೆ ಅಗ್ರಿಗೇಟರ್ ಕಂಪನಿಗಳ ವಿರುದ್ಧ ಸರ್ಕಾರ ಬಲವಂತದ ಕ್ರಮ ಜರುಗಿಸಬಾರದು. ಆಟೊರಿಕ್ಷಾ ಸೇವೆ ಒದಗಿಸಲು ಪರವಾನಗಿ ಕೋರಿ ಅರ್ಜಿ ಸಲ್ಲಿಸಿದರೆ, ಅದನ್ನು ಕಾನೂನು ಪ್ರಕಾರ ಪರಿಗಣಿಸಬೇಕು' ಎಂದು ನಿರ್ದೇಶಿಸಿ ಈ ಹಿಂದೆ ಹೊರಡಿಸಿದ್ದ ಮಧ್ಯಂತರ ಆದೇಶವನ್ನು ಮುಂದಿನ ವಿಚಾರಣೆವರೆಗೂ ವಿಸ್ತರಿಸಿತು.

ಸುದ್ದಿ 2 ನಿಮಿಷ

'ಸಿ.ಎಂ ಒಂದು ಲಕ್ಷ ಮನೆ ಘಟಕ ವೆಚ್ಚ ಇಳಿಸಲು ಒಪ್ಪಿಗೆ'

ಬೆಂಗಳೂರು: ಮುಖ್ಯಮಂತ್ರಿಯವರ ಒಂದು ಲಕ್ಷ ಮನೆ ಯೋಜನೆಯಡಿ ನಿರ್ಮಿಸುವ ಮನೆಗಳ ಘಟಕ ವೆಚ್ಚವನ್ನು ಕಡಿಮೆ ಮಾಡಲು ತೀರ್ಮಾನಿಸಲಾಗಿದೆ ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಈ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ನಿರ್ಮಿಸುವ ಮನೆಗಳಿಗೆ ತಲಾ ₹ 7.10 ಲಕ್ಷ ಹಾಗೂ ಸಾಮಾನ್ಯ ವರ್ಗದ ಫಲಾನುಭವಿಗಳಿಗಾಗಿ ನಿರ್ಮಿಸುವ ಮನೆಗಳಿಗೆ ತಲಾ ₹ 7.90 ಲಕ್ಷ ಘಟಕ ವೆಚ್ಚ ನಿಗದಿಪಡಿಸಲಾಗಿತ್ತು. ಈ ಮೊತ್ತವನ್ನು ಅನುಕ್ರಮವಾಗಿ ₹ 6 ಲಕ್ಷ ಹಾಗೂ ₹6.50 ಲಕ್ಷಕ್ಕೆ ಇಳಿಕೆ ಮಾಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮ್ಮತಿಸಿದ್ದಾರೆ' ಎಂದರು.



ಪ್ರತಿ ಮನೆ ನಿರ್ಮಾಣದ ಘಟಕ ವೆಚ್ಚ ₹ 10 ಲಕ್ಷ ತಲುಪಲಿದೆ. ಆದರೆ, ಬಡವರಿಗೆ ಹೊರೆಯಾಗಬಾರದು ಎಂಬ ಕಾರಣದಿಂದ ಮೂಲಸೌಕರ್ಯಗಳ ಪಾಲು ₹ 2.80 ಲಕ್ಷವನ್ನು ಸರ್ಕಾರವೇ ಭರಿಸುತ್ತಿದೆ. ಈ ಯೋಜನೆಯಡಿ ಮನೆ ಒದಗಿಸುವಂತೆ ಕೋರಿ ಒಟ್ಟು 45,000ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ತಿಳಿಸಿದರು.

ಬಿಬಿಎಂಪಿ ಚುನಾವಣೆ ವಿಭಾಗಕ್ಕೆ ವಿಶೇಷ ಆಯುಕ್ತ ನೇಮಕ

ಬೆಂಗಳೂರು: ಬಿಬಿಎಂಪಿಯಲ್ಲಿ ಚುನಾವಣೆ ಎಂಬ ಹೊಸ ವಿಭಾಗವನ್ನು ಸೃಷ್ಟಿಸಲಾಗಿದ್ದು, ಇದರ ವಿಶೇಷ ಆಯುಕ್ತರನ್ನಾಗಿ ಉಜ್ವಲ್ ಕುಮಾರ್ ಘೋಷ್ ಅವರನ್ನು ನೇಮಿಸಲಾಗಿದೆ.

ಈ ಹುದ್ದೆಯು ಪೌರಾಡಳಿತ ಇಲಾಖೆಯ ನಿರ್ದೇಶಕರ ದರ್ಜೆಯದ್ದಾಗಿದೆ. ಖಜಾನೆ ಆಯುಕ್ತರಾಗಿದ್ದ ಉಜ್ವಲ್ ಕುಮಾರ್ ಅವರು ನ.28ರಿಂದಲೇ ಅನ್ವಯವಾಗುವಂತೆ ಬಿಬಿಎಂಪಿ ಚುನಾವಣೆಯ ವಿಶೇಷ ಆಯುಕ್ತರ ಹುದ್ದೆಗೆ ವರ್ಗಾಯಿಸಲಾಗಿದೆ.

ಕಸದ ಲಾರಿ ಡಿಕ್ಕಿ: ಇಬ್ಬರ ಸಾವು

ದೊಡ್ಡಬಳ್ಳಾಪುರ: ತಾಲ್ಲೂಕಿನ ಹುಲಿಕುಂಟೆ ಸಮೀಪ ಸೋಮವಾರ ಸಂಜೆ ಬಿಬಿಎಂಪಿ ಕಸದ ಲಾರಿ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಬೈಕ್ ಸವಾರರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ನೆಲಮಂಗಲ ತಾಲ್ಲೂಕಿನ ಮರಳು ಕುಂಟೆ ಗ್ರಾಮದ ಮಹೇಶ್ (27) ಮತ್ತು ಮಾರುತಿ (24) ಮೃತಪಟ್ಟವರು. ದ್ವಿಚಕ್ರವಾಹನಕ್ಕೆ ಡಿಕ್ಕಿ ಹೊಡೆದ ತಕ್ಷಣ ಲಾರಿ ಚಾಲಕ ಸ್ಥಳದಿಂದ ಪರಾರಿಯಾಗಲು ಯತ್ನಿಸಿದ್ದ ಆತನನ್ನು ಸ್ಥಳೀಯರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಕಸ ತುಂಬಿದ ಸುಮಾರು 150 ಲಾರಿಗಳು ಚಿಗರೇನಹಳ್ಳಿಯ ಎಂಎಸ್‌ಜಿಪಿ ಕಸ ವಿಲೇವಾರಿ ಘಟಕಕ್ಕೆ ಪ್ರತಿದಿನ ಬರುತ್ತವೆ.

ಎಲೆಕ್ಟ್ರಾನಿಕ್ ಸಿಟಿ ಮೇಲ್ಸೇತುವೆ: ದ್ವಿಚಕ್ರ ವಾಹನ ಸಂಚಾರ ನಿರ್ಬಂಧಕ್ಕೆ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಲೆಕ್ಟ್ರಾನಿಕ್ ಸಿಟಿ ಮೇಲ್ಸೇತುವೆಯಲ್ಲಿ ದ್ವಿಚಕ್ರ ವಾಹನಗಳ ಸಂಚಾರ ನಿರ್ಬಂಧಿಸುವ ಬಗ್ಗೆ ಚಿಂತನೆ ನಡೆದಿದ್ದು, ಬಿಇಟಿಪಿಎಲ್ ಕಂಪನಿಗೆ ಸಂಚಾರ ಪೊಲೀಸರು ಪತ್ರ ಬರೆದಿದ್ದಾರೆ.

'ನಗರದಿಂದ ಹೊಸೂರಿಗೆ ಸಂಪರ್ಕ ಕಲ್ಪಿಸುವ ಹೆದ್ದಾರಿಯಲ್ಲಿರುವ ಮೇಲ್ಸೇತುವೆಯಲ್ಲಿ ದಿನದಿಂದ ದಿನಕ್ಕೆ ಅಪಘಾತಗಳು ಹೆಚ್ಚುತ್ತಿವೆ. ದ್ವಿಚಕ್ರ ವಾಹನಗಳ ಸವಾರರೇ ಹೆಚ್ಚಿನ ಸಂಖ್ಯೆಯಲ್ಲಿ ಮೃತಪಡುತ್ತಿದ್ದಾರೆ. ಇದೇ ಕಾರಣಕ್ಕೆ ದ್ವಿಚಕ್ರ ವಾಹನ ಸಂಚಾರ ನಿರ್ಬಂಧಿಸುವ ಬಗ್ಗೆ ಚರ್ಚಿಸಲಾಗುತ್ತಿದೆ' ಎಂದು ಸಂಚಾರ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಬೆಂಗಳೂರು ಎಲಿವೇಟೆಡ್ ಟೋಲ್ ಪ್ರೈವೇಟ್ ಲಿಮಿಟೆಡ್ (BETPL) ಕಂಪನಿಗೆ ಈಗಾಗಲೇ ಪತ್ರ ಬರೆಯಲಾಗಿದೆ. ದ್ವಿಚಕ್ರ ವಾಹನ ಸಂಚಾರ ನಿಷೇಧಕ್ಕೆ ಇರುವ ಅವಕಾಶ ಹಾಗೂ ಪರಿಣಾಮಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಕಂಪನಿ ಅಧಿಕಾರಿಗಳ ಅಭಿಪ್ರಾಯ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಪೊಲೀಸ್ ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ

ಬೆಂಗಳೂರು: ನಗರದ ಹಲವು ಠಾಣೆಗಳ ಇನ್‌ಸ್ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಿ ಪೊಲೀಸ್ ಸಿಬ್ಬಂದಿ ಮಂಡಳಿ ಸೋಮವಾರ ಆದೇಶ ಹೊರಡಿಸಿದೆ.

ವರ್ಗಾವಣೆಯಾದವರು: ಎಚ್.ಬಿ. ಸಂಜೀವೇಗೌಡ; ಕೆಂಗೇರಿ, ಬಿ. ಬಾಲರಾಜ್; ಕಾಟನ್‌ಪೇಟೆ, ಎಂ. ಪ್ರಶಾಂತ್; ಮಾದನಾಯಕನಹಳ್ಳಿ, ಬಿ.ಪಿ. ನಾಗರಾಜು; ಕೆಂಗೇರಿ ಸಂಚಾರ, ಬಿ.ಎನ್. ಅಶ್ವಥ್ ನಾರಾಯಣಸ್ವಾಮಿ; ಕೊತ್ತನೂರು, ಟಿ. ಮುತ್ತುರಾಜ್; ಬಿಡಿಎ, ಎನ್. ಆನಂದ್; ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಎಸ್. ಹೇಮಂತ್‌ಕುಮಾರ್; ಶೇಷಾದ್ರಿಪುರ, ಹಜರೇಶ್ ಕಿಲ್ಲೇದ್; ಬೆಂಗಳೂರು ಸೈಬರ್, ಎಂ.ಬಿ. ಚಂದ್ರಕಲಾ; ಸಿಸಿಬಿ, ಆರ್. ರಾಜೇಶ್; ವಿ.ವಿ.ಪುರ ಸಂಚಾರ, ಎಂ.ಎ. ಹರೀಶ್‌ಕುಮಾರ್; ಸಂಪಂಗಿರಾಮನಗರ, ಎಸ್.ಪಿ. ವಿನೋದ್‌ರಾಜ್; ಕೇಂದ್ರ ವಿಭಾಗ ಸೈಬರ್, ಪಿ. ಸುರೇಶ್; ಆರ್‌ಎಂಸಿ ಯಾರ್ಡ್, ಎಸ್. ವಿಕಾಸ್; ಬೆಸ್ಕಾಂ ಜಾಗೃತದಳ, ಕರೆಪ್ಪ ಹಟ್ಟಿ; ಚಂದ್ರಾಲೇಔಟ್, ಬಿ.ಗೋವಿಂದರಾಜು; ಯಲಹಂಕ ನ್ಯೂ ಟೌನ್, ಚಂದ್ರಪ್ಪ ಬಾರ್ಕಿ; ಸಿಸಿಬಿ, ಆರ್. ಸಂತೋಷ್ ರಾಮ್; ಸಿಸಿಬಿ, ಎಂ. ಮಲ್ಲಿಕಾರ್ಜುನ; ಈಶಾನ್ಯ ವಿಭಾಗ ಸೈಬರ್.

ವಿದ್ಯುತ್ ವ್ಯತ್ಯಯ

ಬೆಂಗಳೂರು: ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ನಗರದ ವಿವಿಧೆಡೆ ನ.29 ಮತ್ತು 30ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

29ರಂದು: ಬೆಳ್ಳಂದೂರು, ಆರ್‌ಎಂಝಡ್, ದೇವರಬಿಸನಹಳ್ಳಿ, ಕರಿಯಮ್ಮನಪಾಳ್ಯ, ಅನುಪಮಾ, ಟೋಟಲ್ ಮಾಲ್, ಶೋಭಾ ಐರೀಸ್ ಸುತ್ತಮುತ್ತ ಪ್ರದೇಶಗಳು.

30ರಂದು: ವಿಶ್ವಪ್ರಿಯ ಲೇಔಟ್, ಬೇಗೂರು ಕೊಪ್ಪ ರಸ್ತೆ, ದೇವರಚಿಕ್ಕನಹಳ್ಳಿ, ಅಕ್ಷಯನಗರ, ದಕ್ಷಿಣದ ಪ್ರೆಸ್ಟೀಜ್ ಸಾಂಗ್, ತೇಜಸ್ವಿನಿ ನಗರ, ಹಿರ್ನಾದಾನಿ ಅಪಾರ್ಟ್‌ಮೆಂಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.



ನಗರದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಐದನೇ ಘಟಿಕೋತ್ಸವದಲ್ಲಿ ಆರ್‌ಟಿಬಿಐ ಮುಖ್ಯಸ್ಥ ಪ್ರೊ.ಅಶೋಕ್ ಜುಂಜನ್‌ವಾಲಾ ಮತ್ತು ಸಂಸ್ಥಾಪಕ ಕುಲಾಧಿಪತಿ ನಿಸಾರ್ ಅಹಮದ್ ಅವರು ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ಪ್ರದಾನ ಮಾಡಿದರು. ಘಟಿಕೋತ್ಸವದಲ್ಲಿ 13 ಚಿನ್ನದ ಪದಕಗಳು, 47 ಪಿಎಚ್‌ಡಿ. ಪದವಿಗಳನ್ನು ಪ್ರದಾನ ಮಾಡಲಾಯಿತು. ಜತೆಗೆ ನಿರ್ವಹಣೆ, ಕಾನೂನು, ಎಂಜಿನಿಯರಿಂಗ್, ಮಾಹಿತಿ ವಿಜ್ಞಾನ, ವಾಣಿಜ್ಯ ನಿಕಾಯಗಳಿಂದ 689 ಸ್ನಾತಕೋತ್ತರ ಮತ್ತು 2531 ಪದವೀಧರ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರಗಳನ್ನು ನೀಡಲಾಯಿತು.

ನಗರದಲ್ಲಿ ಇಂದು

ಕರ್ನಾಟಕ ರಾಜ್ಯೋತ್ಸವ ಆಚರಣೆ: ಧ್ವಜಾರೋಹಣ: ಸತೀಶ್ ರೆಡ್ಡಿ, ಉದ್ಘಾಟನೆ: ವಾಟಾಳ್ ನಾಗರಾಜ್, ಸಾ.ರಾ. ಗೋವಿಂದ್, ಆಯೋಜನೆ: ವಿಶ್ವವಿಜಯ ಕನ್ನಡಿಗರ ಸಂಘ, ಸ್ಥಳ: ಬಿಳೇಕಹಳ್ಳಿ, ವಿಜಯಬ್ಯಾಂಕ್ ಲೇಔಟ್, ಕಾಂತಿ ಸ್ವೀಟ್ಸ್ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 10

ಚುನಾವಣಾ ನೋಂದಣಿ ಅರಿವು ಸಪ್ತಾಹ ಹಾಗೂ ಸಂವಿಧಾನ ದಿನ ಆಚರಣೆ: ಉದ್ಘಾಟನೆ: ಮನೋಜ್ ಕುಮಾರ್ ಮೀನಾ, ಅತಿಥಿಗಳು: ಸಿ. ಬಸವರಾಜು, ಅಧ್ಯಕ್ಷತೆ: ಜಯಕರ ಎಸ್.ಎಂ., ಉಪಸ್ಥಿತಿ: ಸುರೇಶ್ ವಿ. ನಾಡಗೌಡರ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯದ ಎಚ್.ಎನ್. ಸಭಾಂಗಣ, ಬೆಳಿಗ್ಗೆ 10.30

ಕರ್ನಾಟಕ ರಾಜ್ಯೋತ್ಸವ ಆಚರಣೆ: ಉದ್ಘಾಟನೆ: ರವೀಂದ್ರ ಭಟ್ಟ, ಅತಿಥಿಗಳು: ಕಾಳೇಗೌಡ ನಾಗವಾರ, ಸೋನಿಯಾ ವರ್ಣೇಕರ್ ಯು, ಬಸವರಾಜ ವಾಲೀಕಾರ್, ಅಧ್ಯಕ್ಷತೆ: ಶಿವಕುಮಾರ್, ಆಯೋಜನೆ: ಅಕ್ಕ ಐಎಎಸ್ ಅಕಾಡೆಮಿ, ಸ್ಥಳ: ಚಂದ್ರಗಿರಿ ಪ್ಯಾಲೆಸ್, ಚಂದ್ರಾ ಲೇಔಟ್ ಬಸ್ ನಿಲ್ದಾಣದ ಹತ್ತಿರ, ಸಂಜೆ 4

ಪದ ಜನಪದ ಮಾಡಿ ನಾಡಿಗೆ ನೀಡಿದ ಗುರುರಾಜ ಹೊಸಕೋಟೆ ಅವರಿಗೆ 75 ವರ್ಷದ ಸಂಭ್ರಮ: ಅತಿಥಿಗಳು: ಟಿ.ಎ. ನಾರಾಯಣಗೌಡ, ಶ್ರೀನಿವಾಸ.ಜಿ. ಕಪ್ಪಣ್ಣ, ಲಹರಿ ವೇಲು, ಶ್ರೀವತ್ಸ, ನಾಗೇಂದ್ರ ಪ್ರಸಾದ್, ಶಬ್ಬೀರ್ ಡಾಂಗೆ, ಅಶ್ವಿನಿ ರಾಮ್‌ಪ್ರಸಾದ್, ಹರೀಶ್ ಪಾರೇಖ್, ಆಯೋಜನೆ: ರಂಗಪಯಣ, ಕರ್ನಾಟಕ ರಕ್ಷಣಾ ವೇದಿಕೆ, ಲಹರಿ ಸಂಸ್ಥೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಹಳದಿ ಕೆಂಪು ಹಾಡಿನ ಸಂಜೆ, ಕಾ.ವೆ. ಶ್ರೀನಿವಾಸಮೂರ್ತಿ ಅವರ



'ಚೋರಪುರಾಣ' ನಾಟಕ ಪ್ರದರ್ಶನ: ನಿರ್ದೇಶನ: ಮಂಜುನಾಥ್ ಎಲ್. ಬಡಿಗೇರ, ಸಂಗೀತ: ವೀರೇಶ್ ಎಂ.ಪಿ.ಎಂ., ಆಯೋಜನೆ: ಅಭಿಜ್ಞಾ, ಸ್ಥಳ: ಎಡಿಎ ರಂಗಮಂದಿರ, ಸಂಜೆ 7.30

ಕನ್ನಡ ನಾಡು–ನುಡಿ ಗೀತೆಗಳ ಪುಸ್ತಕ ಬಿಡುಗಡೆ: ಜಾಣಗೆರೆ ವೆಂಕಟರಾಮಯ್ಯ, ಅಧ್ಯಕ್ಷತೆ: ಕೆ. ರಾಜ್‌ಕುಮಾರ್, ಉಪಸ್ಥಿತಿ: ಶ್ರೀನಿವಾಸಮೂರ್ತಿ, ಆಯೋಜನೆ: ವಿಶ್ವಮಾನವ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಕುವೆಂಪು ಸಭಾಂಗಣ, ಚಾಮರಾಜಪೇಟೆ, ಸಂಜೆ 5.30

ವಜ್ರ ಮಹೋತ್ಸವ ಸಮಾರಂಭ–2022: ಅತಿಥಿಗಳು: ಅಜೀಂ ಪ್ರೇಮ್‌ಜೀ, ಅಧ್ಯಕ್ಷತೆ: ಬಿ.ಸಿ. ಪ್ರಭಾಕರ್, ಆಯೋಜನೆ: ಕರ್ನಾಟಕ ಎಂಪ್ಲಾಯೀಸ್ ಅಸೋಸಿಯೇಷನ್, ಸ್ಥಳ: ಹೋಟೆಲ್ ಕೊನಾರ್ಡ್, ಹಲಸೂರು, ಸಂಜೆ 6

'ಚಂದ್ರಹಾಸ' ಪೌರಾಣಿಕ ನಾಟಕ ಪ್ರದರ್ಶನ: ರಚನೆ: ಕುವೆಂಪು, ನಿರ್ದೇಶನ: ವೆಂಕಟರಮಣಯ್ಯ ಡಿ., ರಂಗರೂಪ ನಿರ್ವಹಣೆ: ಆಂಜನೇಯ, ಆಯೋಜನೆ: ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ, ಸ್ಥಳ: ಪೇಜಾವರ ಶ್ರೀ ವಿಶ್ವೇಶ ತೀರ್ಥ ಶ್ರೀಪಾದ ರಂಗಮಂದಿರ, ನ್ಯೂ ಇನ್‌ಕಮ್ ಟ್ಯಾಕ್ಸ್ ಬಡಾವಣೆ, ನಾಗರಬಾವಿ, ಸಂಜೆ 6

• ನಿರ್ಭಯಾ ನಿಧಿ ಯೋಜನೆ • ₹ 496.57 ಕೋಟಿ ಅಂದಾಜು ವೆಚ್ಚ • ಹನಿವೆಲ್ ಆಟೊಮೇಷನ್ ಇಂಡಿಯಾ ನಿರ್ವಹಣೆ

ಹೆಣ್ಣುಮಕ್ಕಳ ಸುರಕ್ಷೆ–‘ನೇತ್ರಾ’ ಶ್ರೀರಕ್ಷೆ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ನಗರದಲ್ಲಿ ಅಪರಾಧ ಕೃತ್ಯ ನಿಯಂತ್ರಿಸಲು ಹಾಗೂ ಮಹಿಳೆ-ಮಕ್ಕಳ ಸುರಕ್ಷತೆ ಕಾಪಾಡಲು ‘ಸ್ಮಾರ್ಟ್’ ಆಗುತ್ತಿರುವ ಪೊಲೀಸರು, ‘ನೇತ್ರಾ’ ಹೆಸರಿನಲ್ಲಿ ಆಧುನಿಕ ಸಿಸಿಟಿವಿ ಕ್ಯಾಮೆರಾ ಅಳವಡಿಸಿ ಕಣ್ಗಾವಲಿರಿಸಲು ಸಿದ್ಧರಾಗಿದ್ದಾರೆ.

‘ಸುರಕ್ಷಿತ ನಗರ’ ಘೋಷವಾಕ್ಯದೊಂದಿಗೆ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ಕೇಂದ್ರ ಸರ್ಕಾರವು ನಿರ್ಭಯಾ ನಿಧಿ ಯೋಜನೆ ರೂಪಿಸಿದೆ. ಯೋಜನೆಯಡಿ ಅನುದಾನ ಪಡೆದಿರುವ ಬೆಂಗಳೂರು ಪೊಲೀಸರು, ನಗರದ 3,000 ಸ್ಥಳಗಳಲ್ಲಿ 7,000 ಸಿಸಿಟಿವಿ ಕ್ಯಾಮೆರಾ ಅಳವಡಿಸುವ ಕೆಲಸ ಆರಂಭಿಸಿದ್ದಾರೆ.

ಮುಖಚಹರೆ, ವಾಹನಗಳ ನೋಂದಣಿ ಸಂಖ್ಯೆ ಸಮೇತ ದೃಶ್ಯಗಳನ್ನು ಸ್ಪಷ್ಟವಾಗಿ ಸೆರೆಹಿಡಿಯಬಲ್ಲ ಸಾಮರ್ಥ್ಯ ಹೊಂದಿರುವ ಕ್ಯಾಮೆರಾಗಳು, ಎಎನ್‌ಪಿಆರ್ (ಸ್ವಯಂಪ್ರೇರಿತ ವಾಹನಗಳ ನೋಂದಣಿ ಸಂಖ್ಯೆ ಗುರುತಿಸುವ) ಸೌಲಭ್ಯವನ್ನೂ ಒಳಗೊಂಡಿವೆ. ಸಿಬ್ಬಂದಿ ಕೊರತೆ ಎದುರಿಸುತ್ತಿರುವ ಪೊಲೀಸ್ ಇಲಾಖೆಗೆ, ಕ್ಯಾಮೆರಾಗಳು ಸಿಬ್ಬಂದಿಯ ಬಲ ತುಂಬಲಿವೆ.

ಕ್ಯಾಮೆರಾ ಅಳವಡಿಕೆ ಹಾಗೂ ನಿರ್ವಹಣೆ ಜವಾಬ್ದಾರಿಯನ್ನು ಟೆಂಡರ್ ಮೂಲಕ ಹನಿವೆಲ್ ಆಟೊಮೇಷನ್ ಇಂಡಿಯಾ ಕಂಪನಿಗೆ ವಹಿಸಲಾಗಿದೆ.


ಬೆಂಗಳೂರು ಪೊಲೀಸ್ ಕಮಿಷನರ್ ಕಚೇರಿ ಕಟ್ಟಡದಲ್ಲಿರುವ ಕಮಾಂಡೊ ಕೇಂದ್ರ (ಸಂಗ್ರಹ ಚಿತ್ರ)

ಪ್ರಮುಖ ರಸ್ತೆಗಳ ಪಾದಚಾರಿ ಮಾರ್ಗ, ಬಸ್ ನಿಲ್ದಾಣ, ತಂಗುದಾಣ, ಸಾರ್ವಜನಿಕ ಸ್ಥಳ, ಮೈದಾನ, ಧಾರ್ಮಿಕ ಕೇಂದ್ರಗಳು... ಹೀಗೆ ಹಲವು ಸ್ಥಳಗಳಲ್ಲಿ ಪ್ರತ್ಯೇಕ ಕಂಬಗಳಲ್ಲಿ ‘ನೇತ್ರಾ’ ಕ್ಯಾಮೆರಾ ಅಳವಡಿಸುವ ಕೆಲಸ ಪ್ರಗತಿಯಲ್ಲಿದೆ.

ಯುವತಿಯರನ್ನು ಚುಡಾಯಿಸುವುದು, ಅಪಹರಣ, ಸರಗಳವು, ಕಳ್ಳತನ.... ಹೀಗೆ ರಸ್ತೆಯಲ್ಲಿ ನಡೆಯಬಹುದಾದ ಎಲ್ಲ ಅಪರಾಧಗಳ ಮೇಲೂ ‘ನೇತ್ರಾ’ ಕಣ್ಣಿಡಲಿದೆ.

‘ಬೆಂಗಳೂರಿನಲ್ಲಿ ಜನಸಂಖ್ಯೆ ಬೆಳೆಯುತ್ತಿದೆ. ಮಹಿಳೆಯರು, ಮಕ್ಕಳು ಹಾಗೂ ವೃದ್ಧರ ಸುರಕ್ಷತೆಗೆ ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇದೀಗ, ನಿರ್ಭಯಾ ಯೋಜನೆಯಡಿ ನಗರದ ಹಲವೆಡೆ ‘ನೇತ್ರಾ’ ಕ್ಯಾಮೆರಾ ಅಳವಡಿಸಲಾಗುತ್ತಿದೆ. ಈ ಕ್ಯಾಮೆರಾಗಳು, ನಗರದ ಸುರಕ್ಷತೆಗೆ ಮತ್ತಷ್ಟು ನೆರವಾಗಲಿವೆ’ ಎಂದು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ‘ಪ್ರಜಾವಾಣಿ’ಗೆ ತಿಳಿಸಿದರು.

ಕಮಾಂಡೊ ಕೇಂದ್ರದಿಂದ ನಿಗಾ: ಬೆಂಗಳೂರು ಕಮಿಷನರ್ ಕಚೇರಿ ಕಟ್ಟಡದಲ್ಲಿರುವ ಕಮಾಂಡೊ ಕೇಂದ್ರದ ಸಿಬ್ಬಂದಿ, ‘ನೇತ್ರಾ’ ಕ್ಯಾಮೆರಾ ಮೂಲಕ ಆಯಾ ಸ್ಥಳಗಳ ಮೇಲೆ ನಿರಂತರವಾಗಿ ನಿಗಾ ವಹಿಸಲಿದ್ದಾರೆ. ಕ್ಯಾಮೆರಾ ಚಾಲನೆ ಹಾಗೂ ಅದರಿಂದ ಪತ್ತೆಯಾದ ಪ್ರಕರಣಗಳ ಬಗ್ಗೆ ಕಾಲಕಾಲಕ್ಕೆ ಪರಿಶೀಲನೆ ನಡೆಸಿ, ಹಿರಿಯ ಅಧಿಕಾರಿಗಳಿಗೆ ವರದಿ ನೀಡಲಿದ್ದಾರೆ.

‘₹496.57 ಕೋಟಿ ವೆಚ್ಚದಲ್ಲಿ ಎರಡು ವರ್ಷಗಳ ಅವಧಿಯೊಳಗೆ ನಗರದ 3,000 ಸ್ಥಳಗಳಲ್ಲಿ 7,000 ಕ್ಯಾಮೆರಾ ಅಳವಡಿಸಲು ಗುತ್ತಿಗೆ ನೀಡಲಾಗಿದೆ. ಈಗಾಗಲೇ ನಗರದಲ್ಲಿ ಸುಮಾರು 1,500 ಕ್ಯಾಮೆರಾ ಅಳವಡಿಸಲಾಗಿದ್ದು, ಉಳಿದ ಕ್ಯಾಮೆರಾಗಳ ಅಳವಡಿಕೆ ಕೆಲಸ ಮುಂದುವರಿದಿದೆ’ ಎಂದು ಹೆಚ್ಚುವರಿ ಪೊಲೀಸ್ ಕಮಿಷನರ್ ಸುಬ್ರಹ್ಮಣ್ಯೇಶ್ವರ ರಾವ್ ಹೇಳಿದರು.

‘ಕ್ಯಾಮೆರಾಗಳನ್ನು ಕಮಾಂಡೊ ಕೇಂದ್ರಕ್ಕೆ ಜೋಡಿಸಲಾಗಿದೆ. ಕ್ಯಾಮೆರಾದಲ್ಲಿ ಸೆರೆಯಾಗುವ ದೃಶ್ಯಗಳನ್ನು ಕಮಾಂಡೊ ಕೇಂದ್ರದಲ್ಲಿ ನೋಡಬಹುದಾಗಿದೆ. ಇಂಥ ದೃಶ್ಯಗಳನ್ನು ಗಮನಿಸಲಿರುವ ಕೇಂದ್ರದ ಸಿಬ್ಬಂದಿ, ಏನಾದರೂ ಅಹಿತಕರ ಘಟನೆಗಳು ಹಾಗೂ ಅಪರಾಧಗಳು ನಡೆದರೆ ಸಂಬಂಧಪಟ್ಟ ಠಾಣೆಗೆ ಮಾಹಿತಿ ನೀಡಲಿದ್ದಾರೆ. ಜೊತೆಗೆ, ಗಸ್ತು ಸಿಬ್ಬಂದಿಗೂ ಸೂಚನೆ ನೀಡಿ ತ್ವರಿತವಾಗಿ ಸ್ಥಳಕ್ಕೆ ಕಳುಹಿಸಲಿದ್ದಾರೆ’ ಎಂದು ತಿಳಿಸಿದರು.

ಸುರಕ್ಷಾ ಆ್ಯಪ್ ಅಭಿವೃದ್ಧಿ: ‘ಮಹಿಳೆಯರ ಸುರಕ್ಷತೆಗಾಗಿ ಈಗಾಗಲೇ ‘ಸುರಕ್ಷಾ’ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಇದೇ ಆ್ಯಪ್‌ನಲ್ಲಿ ಮತ್ತಷ್ಟು ಆಯ್ಕೆಗಳನ್ನು ಸೇರಿಸಲಾಗುತ್ತಿದೆ. ತುರ್ತು ಸಂದರ್ಭಗಳಲ್ಲಿ ಆ್ಯಪ್ ಅಥವಾ ನಿಯಂತ್ರಣ ಸಂಖ್ಯೆ 100, 112ರ ಮೂಲಕ ಸಹಾಯ ಕೋರುವ ಮಹಿಳೆಯರ ಸ್ಥಳಗಳನ್ನು ‘ನೇತ್ರಾ’ ಕ್ಯಾಮೆರಾ ಮೂಲಕ ನೋಡುವ ವ್ಯವಸ್ಥೆ ಇರಲಿದೆ’ ಎಂದು ಕಮಾಂಡೊ ಕೇಂದ್ರದ ಅಧಿಕಾರಿಯೊಬ್ಬರು ಹೇಳಿದರು.

‘ಕದ್ದ ವಾಹನಗಳ ಮಾಹಿತಿಯನ್ನು ನೋಂದಣಿ ಫಲಕ ಸಮೇತ ಸೆರೆ ಹಿಡಿಯಬಲ್ಲ ಸಾಮರ್ಥ್ಯ ‘ನೇತ್ರಾ’ ಕ್ಯಾಮೆರಾಗಳಿಗೆ ಇದೆ. ಈಗಾಗಲೇ ಕೆಲ ಕ್ಯಾಮೆರಾಗಳ ಕಾರ್ಯಾಚರಣೆ ಆರಂಭವಾಗಿದ್ದು, ಮುಂಬರುವ ದಿನಗಳಲ್ಲಿ ಮತ್ತಷ್ಟು ಕ್ಯಾಮೆರಾಗಳು ಹಂತ ಹಂತವಾಗಿ ಕಾರ್ಯಾಚರಣೆ ಆರಂಭಿಸಲಿವೆ’ ಎಂದು ತಿಳಿಸಿದರು.

‘ಐಪಿಎಸ್’ ಜಟಾಪಟಿಗೆ ಕಾರಣವಾಗಿದ್ದ ಟೆಂಡರ್

ನಿರ್ಭಯಾ ನಿಧಿ ಯೋಜನೆಯಡಿ ‘ಸುರಕ್ಷ ನಗರ’ ಕೆಲಸದ ಟೆಂಡರ್ ವಿಚಾರವಾಗಿ ನಗರದ ಹಿಂದಿನ ಹೆಚ್ಚುವರಿ ಪೊಲೀಸ್ ಕಮಿಷನರ್ (ಆಡಳಿತ) ಹೇಮಂತ್ ನಿಂಬಾಳ್ಕರ್ ಹಾಗೂ ಗೃಹ ಇಲಾಖೆಯ ಹಿಂದಿನ ಕಾರ್ಯದರ್ಶಿ ಡಿ. ರೂಪಾ ನಡುವೆ ಜಟಾಪಟಿ ನಡೆದಿತ್ತು. ಇದರಿಂದಾಗಿ ಟೆಂಡರ್ ಸಹ ರದ್ದಾಗಿ, ಅಂದಿನ ಕಮಿಷನರ್ ಕಮಲ್ ಪಂತ್ ನೇತೃತ್ವದಲ್ಲಿ ತನಿಖೆಯೂ ನಡೆದಿತ್ತು.

‘ತಮ್ಮ ಅಧಿಕಾರ ವ್ಯಾಪ್ತಿ ಮೀರಿ ಟೆಂಡರ್ ಪ್ರಕ್ರಿಯೆಯಲ್ಲಿ ಡಿ.ರೂಪಾ ಹಸ್ತಕ್ಷೇಪ ಮಾಡುತ್ತಿದ್ದಾರೆ’ ಎಂದು ಆರೋಪಿಸಿ ಹೇಮಂತ್ ನಿಂಬಾಳ್ಕರ್, ಮುಖ್ಯ ಕಾರ್ಯದರ್ಶಿ ಅವರಿಗೆ 2021ರ ಡಿ.7ರಂದು ಪತ್ರ ಬರೆದಿದ್ದರು. ಆರೋಪಕ್ಕೆ ಪ್ರತಿಕ್ರಿಯಿಸಿದ್ದ ಡಿ. ರೂಪಾ, ‘ಸರ್ಕಾರದ ಹಣ ಉಳಿಸಲು ಯತ್ನಿಸಿದ್ದಕ್ಕೆ ದುಷ್ಟರ ಕೂಟ ನನ್ನ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುತ್ತಿದೆ. ಜನರ ಹಿತಾಸಕ್ತಿಗಾಗಿ ನಾನು ಕೆಲಸ ಮಾಡುತ್ತಿದ್ದೇನೆ’ ಎಂದು ಹೇಳಿದ್ದರು.

ಇದಾಗಿ ಹಲವು ತಿಂಗಳ ನಂತರ ಮರು ಟೆಂಡರ್ ಪ್ರಕ್ರಿಯೆ ನಡೆಸಿ, ಕ್ಯಾಮೆರಾ ಅಳವಡಿಸುವ ಗುತ್ತಿಗೆಯನ್ನು ಹನಿವೆಲ್ ಆಟೊಮೇಷನ್ ಇಂಡಿಯಾ ಕಂಪನಿಗೆ ನೀಡಲಾಗಿದೆ.


ನಗರದ ಹಡ್ಸನ್ ವೃತ್ತದಲ್ಲಿ ಅಳವಡಿಸಿರುವ ‘ನೇತ್ರಾ’ ಸಿಸಿಟಿವಿ ಕ್ಯಾಮೆರಾಗಳು

‘ಕ್ಯಾಮೆರಾವನ್ನೇ ಕದ್ದೊಯ್ಯುವ ಭಯ’

‘ನೇತ್ರಾ’ ಸಿಸಿಟಿವಿ ಕ್ಯಾಮೆರಾಗಳು ಆಧುನಿಕ ಉಪಕರಣ ಹಾಗೂ ಬ್ಯಾಟರಿ ಆಧರಿತವಾಗಿ ಕಾರ್ಯನಿರ್ವಹಿಸಲಿವೆ. ಬ್ಯಾಟರಿ ಆಸೆಗಾಗಿ ಕ್ಯಾಮೆರಾವನ್ನು ಕಳ್ಳರು ಕದ್ದೊಯ್ಯುವ ಭಯವೂ ಇದೆ’ ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

‘ಸಂಚಾರ ಸಿಗ್ನಲ್ ಹಾಗೂ ಇತರೆಡೆ ಅಳವಡಿಸುವ ಕ್ಯಾಮೆರಾಗಳ ಬ್ಯಾಟರಿಗಳನ್ನು ಕಳ್ಳರು ಕದ್ದೊಯ್ದಿರುವ ಪ್ರಕರಣಗಳು ಈಗಾಗಲೇ ವರದಿ ಆಗಿವೆ. ಹೀಗಾಗಿ, ನೇತ್ರಾ ಕ್ಯಾಮೆರಾಗಳನ್ನು ಗಸ್ತು ಸಿಬ್ಬಂದಿ ಆಗಾಗ ಗಮನಿಸುತ್ತಿರಬೇಕು. ಕ್ಯಾಮೆರಾ ಕದ್ದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಮೂಲಕ, ಕೃತ್ಯ ಎಸಗಲು ಸಂಚು ರೂಪಿಸುವವರಿಗೂ ಎಚ್ಚರಿಕೆ ರವಾನಿಸಬೇಕು’ ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

‘ರಾಜ್‌ಕುಮಾರ್ ಪರದೆ’: ನಿತ್ಯ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್‌ಕುಮಾರ್ ಅವರ 206 ಚಿತ್ರಗಳ ತುಣುಕು, ಪಾತ್ರವರ್ಗ ಸೇರಿ ಎಲ್ಲ ರೀತಿಯ ಚಿತ್ರಮಾಹಿತಿಯನ್ನು ಪ್ರತಿ ದಿನವೂ ನೀಡುವ ‘ಡಾ. ರಾಜ್‌ಕುಮಾರ್ ಪರದೆ’ ಯಡಿಯೂರು ವಾರ್ಡ್‌ನಲ್ಲಿ ಆರಂಭಗೊಂಡಿದೆ.

‘ಡಾ.ರಾಜ್‌ಕುಮಾರ್ ರಂಗ ಮಂದಿರ’ದ ಮುಂಭಾಗದಲ್ಲಿ 10x12 ಅಡಿಗಳ ಎಲ್‌ಇಡಿ ಪರದೆಯನ್ನು ಅಳವಡಿಸಲಾಗಿದೆ. ಪ್ರತಿದಿನ ಬೆಳಿಗ್ಗೆ 6ರಿಂದ 10 ಹಾಗೂ ಸಂಜೆ 5ರಿಂದ 10ರವರೆಗೆ ರಾಜ್‌ಕುಮಾರ್ ಅವರ ಚಲನಚಿತ್ರಗಳ ತುಣುಕು, ಪಾತ್ರವರ್ಗ, ನಿರ್ದೇಶಕರು, ನಿರ್ಮಾಪಕರು ಮತ್ತು ಇತರೆ ತಾಂತ್ರಿಕವರ್ಗದವರ ಸಂಪೂರ್ಣ ಮಾಹಿತಿಯನ್ನು ಪರದೆಯಲ್ಲಿ ಬಿತ್ತರಿಸಲಾಗುತ್ತದೆ. ಅಲ್ಲದೆ, ರಾಜ್‌ಕುಮಾರ್ ಅವರು ಭಾಗವಹಿಸಿದ್ದ ಸಾರ್ವಜನಿಕ ಕಾರ್ಯಕ್ರಮಗಳ ವಿಡಿಯೊ, ಪದ್ಮಭೂಷಣ, ಕರ್ನಾಟಕ ರತ್ನ, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪಡೆದ ತುಣುಕುಗಳು ಪ್ರಸಾರವಾಗಲಿವೆ.


ಯಡಿಯೂರು ವಾರ್ಡ್‌ನಲ್ಲಿರುವ ‘ಡಾ. ರಾಜ್‌ಕುಮಾರ್ ರಂಗಮಂದಿರ’ದ ಮೇಲಿರುವ ಚಿತ್ರ ಮಾಹಿತಿ ಪರದೆ

ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಯಡಿಯೂರು ವಾರ್ಡ್ ವ್ಯಾಪ್ತಿಯ ಶಾಸ್ತ್ರೀನಗರ ಮತ್ತು ತ್ಯಾಗರಾಜನಗರ ಬಡಾವಣೆ ನಡುವೆ ಬಿಬಿಎಂಪಿ ವತಿಯಿಂದ ₹4 ಕೋಟಿ ವೆಚ್ಚದಲ್ಲಿ 3 ಮಹಡಿಗಳ ‘ಡಾ. ರಾಜ್‌ಕುಮಾರ್ ರಂಗಮಂದಿರ’ ಹಾಗೂ ₹3 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ‘ಶಾರದಾ ದೇವಿ ಮಹಿಳಾ ಹೊಲಿಗೆ ತರಬೇತಿ ಕೇಂದ್ರ’ಕ್ಕೆ ಕಂದಾಯ ಸಚಿವ ಆರ್. ಅಶೋಕ್ ಸೋಮವಾರ ಚಾಲನೆ ನೀಡಿದರು.

‘ಸಾಧಕರೊಬ್ಬರ ಬಗ್ಗೆ ನಿತ್ಯವೂ ಚಿತ್ರ ಮಾಹಿತಿಯನ್ನು ಒದಗಿಸುವ ಇಂತಹ ಪರದೆ ದೇಶದಲ್ಲೇ ಮೊದಲು’ ಎಂದು ಬಿಬಿಎಂಪಿ ಮಾಜಿ ಸದಸ್ಯೆ ಪೂರ್ಣಿಮಾ ರಮೇಶ್ ಹೇಳಿದರು.

‘ರಾಜ್‌ಕುಮಾರ್ ರಂಗಮಂದಿರ’ದ ಒಂದನೇ ಮಹಡಿಯಲ್ಲಿ 150ಕ್ಕೂ ಹೆಚ್ಚು ಮಂದಿ ಯೋಗ ತರಬೇತಿ ಪಡೆಯಲು ಯೋಗಮಂದಿರ, 2ನೇ ಮಹಡಿಯಲ್ಲಿ ಅತ್ಯಾಧುನಿಕ ಜಿಮ್, ರಂಗಭೂಮಿ ಚಟುವಟಿಕೆ ಪ್ರೋತ್ಸಾಹಿಸಲು ನೆಲ ಮಹಡಿಯಲ್ಲಿ ರಂಗವೇದಿಕೆ ನಿರ್ಮಿಸಲಾಗಿದೆ. ಶಾಸ್ತ್ರೀನಗರದಲ್ಲಿ ‘ಶಾರದಾ ದೇವಿ ಮಹಿಳಾ ಹೊಲಿಗೆ ತರಬೇತಿ ಕೇಂದ್ರ’ ನಿರ್ಮಿಸಲಾಗಿದ್ದು, ಹೊಲಿಗೆ ತರಬೇತಿಯಲ್ಲದೇ ಎಂಬ್ರಾಯಿಡರಿ, ನಿಟ್ಟಿಂಗ್ ತರಬೇತಿಗಳನ್ನೂ ಉಚಿತವಾಗಿ ನೀಡಲಾಗುತ್ತದೆ ಎಂದರು. ಬೆಂಗಳೂರು ದಕ್ಷಿಣ ಕ್ಷೇತ್ರ ಸಂಸದ ತೇಜಸ್ವಿ ಸೂರ್ಯ, ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ರಮೇಶ್ ಎನ್. ಆರ್. ಇದ್ದರು.

ಮತದಾರರ ಪಟ್ಟಿ: ಸಾಮಾಜಿಕ ಮೌಲ್ಯಮಾಪನಕ್ಕೆ ಮನವಿ

ಬೆಂಗಳೂರು: ಮತದಾರರ ಮಾಹಿತಿ ಕಳವು ಪ್ರಕರಣ ರಾಜ್ಯದ ಎಲ್ಲ ಭಾಗದಲ್ಲೂ ನಡೆದಿರುವ ಸಾಧ್ಯತೆ ಇದ್ದು, ರಾಜ್ಯದಾದ್ಯಂತ ಸಾಮಾಜಿಕ ಮೌಲ್ಯಮಾಪನ ಮಾಡಬೇಕು ಎಂದು ಸಿಟಿಜನ್ಸ್ ಕಮಿಷನ್ ಆನ್ ಎಲೆಕ್ಷನ್ ವತಿಯಿಂದ ಕೇಂದ್ರ ಚುನಾವಣೆ ಆಯೋಗಕ್ಕೆ ಮನವಿ ಮಾಡಲಾಗಿದೆ.

‘ಸಾರ್ವಜನಿಕರು ತಮ್ಮ ಹೆಸರು ಹಾಗೂ ತಮ್ಮ ಸುತ್ತಮುತ್ತಲಿನ ಮತದಾರರ ಮಾಹಿತಿಯನ್ನು ಪರಿಶೀಲಿಸಿಕೊಳ್ಳುವಂತೆ ಮಾಡಬೇಕು. ಈ ಮೂಲಕ ಬೋಗಸ್ ಹೆಸರು, ನಕಲಿ ಸೇರ್ಪಡೆ ಸಾಧ್ಯವಾಗುವುದಿಲ್ಲ. ಅಲ್ಲದೆ, ಎಲ್ಲ ಮತದಾರರ ಹೆಸರು ಪಟ್ಟಿಗೆ ಸೇರ್ಪಡೆಯಾಗಲು ಇದು ಸಹಕಾರಿಯಾಗಲಿದೆ’ ಎಂದು ಸಿಟಿಜನ್ಸ್ ಕಮಿಷನ್ ಆನ್ ಎಲೆಕ್ಷನ್‌ನ ಮುಖ್ಯ ಸಂಯೋಜಕ ಎಂ.ಜಿ ದೇವಸಹಾಯಂ ತಿಳಿಸಿದ್ದಾರೆ.

‘ಈ ಸಾಮಾಜಿಕ ಮೌಲ್ಯಮಾಪನವನ್ನು ನರೇಗಾದಂತಹ ಕಾರ್ಯಕ್ರಮಗಳ ಮೂಲಕ ಪುನರ್‌ಪರಿಶೀಲಿಸಬೇಕು’ ಎಂದಿದ್ದಾರೆ.

‘ಸಾಮಾಜಿಕ ಮೌಲ್ಯಮಾಪನಕ್ಕೆ ಕೇಂದ್ರ ಚುನಾವಣೆ ಆಯೋಗದ ಆದೇಶದ ಅಗತ್ಯವಿದ್ದು, ಮತದಾರರ ಪಟ್ಟಿಯನ್ನು ಪಂಚಾಯಿತಿ, ವಾರ್ಡ್, ಬೂತ್‌ಗಳಲ್ಲಿ 15ದಿನ ಪ್ರದರ್ಶಿಸಬೇಕು. ಮತಗಟ್ಟೆ ಮಟ್ಟದ ಅಧಿಕಾರಿ (ಬಿಎಲ್‌ಒ) ಸಮ್ಮುಖದಲ್ಲಿ ಮತದಾರರು ಪಟ್ಟಿಯನ್ನು ಪರಿಶೀಲಿಸಬೇಕು. ಮತದಾರರ ಪಟ್ಟಿಯ ಬಗ್ಗೆ ನಂಬಿಕೆ ಉಳಿಯಬೇಕಾದರೆ ಈ ರೀತಿಯ ಮೌಲ್ಯಮಾಪನದ ಅಗತ್ಯವಿದೆ’ ಎಂದಿದ್ದಾರೆ.

ಪತ್ನಿ ಆತ್ಮಹತ್ಯೆ: ಪತಿ ವಿರುದ್ಧ ದೂರು

ಬೆಂಗಳೂರು: ಸುದ್ದಗುಂಟೆಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಖತೀಜಾ ಉಲ್ಲಾ (30) ಎಂಬುವವರು ಭಾನುವಾರ ಮನೆಯಲ್ಲಿ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಅವರ ಪತಿ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಾಗಿದೆ.

‘ಪತಿ ಮೆಹಬೂಬ್ ಷರೀಫ್ ಹಾಗೂ ಇತರರ ಕಿರುಕುಳದಿಂದ ಮಗಳು ಮೃತಪಟ್ಟಿರುವುದಾಗಿ ಪೋಷಕರು ದೂರು ನೀಡಿದ್ದಾರೆ. ಅದರನ್ವಯ ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಟೆಟ್ರಾ ಪ್ಯಾಕ್‌ನಲ್ಲಿ ಹಾಲು ವಿತರಣೆಗೆ ಪ್ರಸ್ತಾವ

ಬೆಂಗಳೂರು: ಕ್ಷೀರ ಭಾಗ್ಯ ಯೋಜನೆ ಅಡಿ ಶಾಲಾ ಮಕ್ಕಳಿಗೆ ಟೆಟ್ರಾ ಪ್ಯಾಕ್‌ನಲ್ಲಿ ಹಾಲು ವಿತರಿಸುವ ಪ್ರಸ್ತಾವವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕೆಎಂಎಫ್ ಸಲ್ಲಿಸಿದೆ.

ಟೆಟ್ರಾ ಪ್ಯಾಕ್‌ನಲ್ಲಿ ಹಾಲು 90 ದಿನಗಳಿಂದ 6 ತಿಂಗಳವರೆಗೆ ಸುರಕ್ಷಿತವಾಗಿರಲಿದೆ ಎಂದು ತಿಳಿಸಿದೆ.

‘ಪ್ರಾಯೋಗಿಕವಾಗಿ ಮೊದಲು 4–5 ಜಿಲ್ಲೆಗಳಲ್ಲಿ ಆರಂಭಿಸಬೇಕು. ಈ ಜಿಲ್ಲೆಗಳಲ್ಲಿ ದೊರೆಯುವ ಪ್ರತಿಕ್ರಿಯೆ ಆಧರಿಸಿ ರಾಜ್ಯದಾದ್ಯಂತ ವಿಸ್ತರಿಸಬಹುದು. ಟೆಟ್ರಾ ಪ್ಯಾಕ್‌ನಲ್ಲಿ ಹಾಲು ವಿತರಿಸುವುದರಿಂದ ಹೆಚ್ಚುವರಿ ಕಾರ್ಯಭಾರ ಕಡಿಮೆಯಾಗುತ್ತದೆ. ಮಕ್ಕಳು ಇಚ್ಛಿಸಿದರೆ ಸುಲಭವಾಗಿ ಮನೆಗೆ ಕೊಂಡೊಯ್ದು ಕುಡಿಯಬಹುದು’ ಎಂದು ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ತಿಳಿಸಿದ್ದಾರೆ.

ಯಶವಂತಪುರ ರೈಲು ನಿಲ್ದಾಣ ನವೀಕರಣ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶವಂತಪುರ ರೈಲು ನಿಲ್ದಾಣವನ್ನು ‘ಸಿಟಿ ಸೆಂಟರ್’ ಆಗಿ ನವೀಕರಿಸುವ ಕಾಮಗಾರಿ ಆರಂಭವಾಗಿದ್ದು, 2025ರ ಜೂನ್ ವೇಳೆಗೆ ಪೂರ್ಣಗೊಳ್ಳಲಿದೆ.

ಅಂಗವಿಕಲರಸ್ನೇಹಿ, ಹಸಿರು ಕಟ್ಟಡದೊಂದಿಗೆ ಭವಿಷ್ಯದ ವಿನ್ಯಾಸದಲ್ಲಿ ರೂಪುಗೊಳ್ಳುವ ರೈಲು ನಿಲ್ದಾಣವನ್ನು ಬೆಂಗಳೂರಿನ ಆಕರ್ಷಕ ತಾಣವನ್ನಾಗಿಸಲಾಗುತ್ತದೆ. ಪ್ರಯಾಣಿಕರಿಗೆ ಇದು ಹಿತಾನುಭವ ನೀಡಲಿದೆ ಎಂದು ನೈರುತ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಅನೀಶ್ ಹೆಗ್ಡೆ ತಿಳಿಸಿದರು.

ಯಶವಂತಪುರ ರೈಲು ನಿಲ್ದಾಣವನ್ನು ₹380 ಕೋಟಿ ವೆಚ್ಚದಲ್ಲಿ ನವೀಕರಿಸಲಾಗುತ್ತಿದ್ದು, ಪ್ರಧಾನಿ ನರೇಂದ್ರ ಮೋದಿ ಈ ಯೋಜನೆಗೆ ಇದೇ ವರ್ಷ ಜೂ.20ರಂದು ಚಾಲನೆ ನೀಡಿದ್ದರು. ಗಿರ್ಧಾರಿಲಾಲ್ ಕನ್‌ಸ್ಟ್ರಕ್ಷನ್ ಈ ಕಾಮಗಾರಿಯನ್ನು ನಿರ್ವಹಿಸುತ್ತಿದ್ದು, ಪ್ರಥಮ ಹಂತದ ಕಾಮಗಾರಿ ಆರಂಭವಾಗಿದೆ. ಈ ಯೋಜನೆ ಟರ್ನ್ ಕೀ ಮಾದರಿಯದ್ದಾಗಿದೆ.

ನವೀಕರಣಗೊಂಡ ರೈಲು ನಿಲ್ದಾಣ ‘ಸಿಟಿ ಸೆಂಟರ್’ ಆಗಿ ಕಾರ್ಯನಿರ್ವಹಿಸಲಿದ್ದು, ಆಗಮನ ಮತ್ತು ನಿರ್ಗಮನಕ್ಕೆ ತಲಾ 216 ಮೀಟರ್‌ಗಳಷ್ಟು ಅಗಲವಾದ ಪ್ರತ್ಯೇಕ ದ್ವಾರಗಳ ವ್ಯವಸ್ಥೆ ಇರಲಿದೆ. ರೂಫ್ ಪ್ಲಾಜಾದಲ್ಲಿ ಮಳಿಗೆ, ಫುಡ್ ಕೋರ್ಟ್, ಮನರಂಜನಾ ತಾಣಗಳಿರಲಿವೆ. ನಿಲ್ದಾಣದ ಆವರಣದಲ್ಲಿ ಎಲ್‌ಇಡಿ ಆಧಾರಿತ ಸೂಚನಾ ಫಲಕಗಳನ್ನು ಹಾಕಲಾಗುತ್ತದೆ. ಬಹುಅಂತಸ್ತಿನ ಕಾರು ಪಾರ್ಕಿಂಗ್ ಇರಲಿದೆ. ಮೆಟ್ರೊ ನಿಲ್ದಾಣಕ್ಕೆ ನೇರ ಸಂಪರ್ಕ ಕಲ್ಪಿಸಲಾಗುತ್ತದೆ ಎಂದು ಅನೀಸ್ ಮಾಹಿತಿ ನೀಡಿದರು.


ನವೀಕರಣಗೊಳ್ಳಲಿರುವ ಯಶವಂತಪುರ ರೈಲು ನಿಲ್ದಾಣದ ಮಾದರಿ ನಕ್ಷೆ.

‘ಇದೀಗ ಪ್ರತಿನಿತ್ಯ 50 ಸಾವಿರ ಪ್ರಯಾಣಿಕರು ಸಂಚರಿಸುತ್ತಿದ್ದು, ನವೀಕರಣಗೊಂಡ ಮೇಲೆ ಒಂದು ಲಕ್ಷಕ್ಕೂ ಹೆಚ್ಚು ಜನರು ಸಂಚರಿಸಲು ಅನುಕೂಲವಾಗಲಿದೆ’ ಎಂದರು.

ಚಿತ್ರಾವಳಿ


ರೇವಾ ವಿಶ್ವವಿದ್ಯಾಲಯ ದೆಹಲಿಯಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ಮತ್ತು ಇಂಡಿಕ್ ಸ್ಟಡೀಸ್‌ನಿಂದ ‘ಪಂಚವಕ್ತ್ರಂ ನೃತ್ಯದಲ್ಲಿ ಹವಾಮಾನ ಬದಲಾವಣೆ ಮತ್ತು ಲಿಂಗ ಸಮಾನತೆ’ ಎಂಬ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು. ರಾಜಾ ರೆಡ್ಡಿ, ರಾಧಾ ರೆಡ್ಡಿ ಮತ್ತು ಸಚ್ಚಿದಾನಂದ ಜೋಶಿ (ಸದಸ್ಯ ಕಾರ್ಯದರ್ಶಿ, ಐಜಿಎನ್‌ಸಿಎ) ಭಾಗವಹಿಸಿದ್ದರು.


ದಯಾನಂದ್ ಸಾಗರ್ ಅಕಾಡೆಮಿ ಆಫ್ ಟೆಕ್ನಾಲಜಿ ಆ್ಯಂಡ್ ಮ್ಯಾನೇಜ್‌ಮೆಂಟ್‌ನಲ್ಲಿ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಧ್ವಜಾರೋಹಣವನ್ನು ಪ್ರಾಂಶುಪಾಲ ಎಂ. ರವಿಶಂಕರ್ ಮತ್ತು ಡೀನ್ ಆಫ್ ಅಕಾಡೆಮಿಕ್ಸ್‌ನ ಸುಮಿತ್ರಾ ದೇವಿ ಕೆ.ಎ. ನೆರವೇರಿಸಿದರು. ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಸ್ತುತಪಡಿಸಿ ಕನ್ನಡ ಉತ್ಸವವನ್ನು ಆಚರಿಸಿದರು.

ಮಾದಕ ದ್ರವ್ಯ ಸಾಗಣೆ: ಜಾಮೀನು ರದ್ದತಿಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ರಿಮಿನಲ್ ಪ್ರಕರಣದಲ್ಲಿ ಮೊದಲನೆ ಆರೋಪಿ ಜಾಮೀನು ಪಡೆದು ಬಿಡುಗಡೆಯಾದ ನಂತರ ಆತನ ಸಂಬಂಧಿಕರು ಮತ್ತೊಬ್ಬ ಆರೋಪಿಗೆ ವಿಚಾರಣೆಗೆ ಸಹಕರಿಸಬಾರದೆಂದು ಬೆದರಿಕೆ ಹಾಕಿದ್ದರೆ ಅಂತಹ ಸಂದರ್ಭದಲ್ಲಿ ಮೊದಲನೆ ಆರೋಪಿಯ ಜಾಮೀನು ರದ್ದುಪಡಿಸಲು ಆಗದು’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.



‘ಮಾದಕ ದ್ರವ್ಯ ಮತ್ತು ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆಯಡಿ ಬಂಧನಕ್ಕೆ ಒಳಗಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿರುವ ಮೊದಲ ಆರೋಪಿಯ ಜಾಮೀನು ರದ್ದುಪಡಿಸಬೇಕು’ ಎಂದು ಕೋರಿ ಮಾದಕ ವಸ್ತು ಕಳ್ಳಸಾಗಣೆ ನಿಯಂತ್ರಣ ದಳದ (ಎನ್‌ಸಿಬಿ) ಗುಪ್ತಚರ ಅಧಿಕಾರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ. ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

‘ಒಂದು ವೇಳೆ ಎರಡನೇ ಆರೋಪಿಗೆ ಮೊದಲ ಆರೋಪಿ ಗೌಸ್ ಸಹೋದರ ಬೆದರಿಕೆ ಹಾಕಿದ್ದಾನೆ ಎಂದಾದರೆ ಆತನ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಬೇಕು’ ಎಂದು ತಿಳಿಸಿ ಅರ್ಜಿ ವಜಾಗೊಳಿಸಿದೆ.

ಪ್ರಕರಣವೇನು?: ಬೆಂಗಳೂರಿನ ಚಾಮರಾಜಪೇಟೆಯ ವಿದೇಶಿ ಅಂಚೆ ಕಚೇರಿಗೆ ಭೇಟಿ ನೀಡಿದ್ದ ಎನ್‌ಸಿಬಿ ಅಧಿಕಾರಿಗಳು, ಸುಮಾರು 1.5 ಕೆ.ಜಿಯಷ್ಟು ನಿಷೇಧಿತ ಎಂಡಿಎಂಎ (ಮೀಥೈಲ್ ಎನೆಡಿಯೊಕ್ಸಿ ಮೆಥಾಮ್‌ಫೆಟಾ ಅಮೈನ್) ಮಾದಕ ದ್ರವ್ಯ ವಶಪಡಿಸಿಕೊಂಡಿದ್ದರು. ಇದು ಗೌಸ್ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿಯೊಬ್ಬರಿಗೆ ಅಂಚೆ ಮೂಲಕ ವಿದೇಶದಿಂದ ರವಾನೆಯಾಗಿತ್ತು. ಪ್ರಕರಣದಲ್ಲಿ ಎನ್‌ಸಿಬಿ ಅಧಿಕಾರಿಗಳು ಗೌಸ್ ಅನ್ನು ಬಂಧಿಸಿದ್ದರು. ಗೌಸ್‌ಗೆ ಹೈಕೋರ್ಟ್ 2021ರ ಅಕ್ಟೋಬರ್ 4ರಂದು ಜಾಮೀನು ನೀಡಿತ್ತು.

ಗೌಸ್ ಬಳಿ ಕೆಲಸ ಮಾಡುತಿದ್ದ ವ್ಯಕ್ತಿಯನ್ನು ಎರಡನೇ ಆರೋಪಿಯನ್ನಾಗಿಸಿ 2021ರ ನವೆಂಬರ್ 5ರಂದು ಬಂಧಿಸಲಾಗಿತ್ತು. ವಿಚಾರಣೆ ವೇಳೆ ಈತ, ‘ನಾನು ವಿಚಾರಣೆಗೆ ಸಹಕರಿಸದಂತೆ ನನಗೆ ಹಾಗೂ ನನ್ನ ಪತ್ನಿಗೆ ಗೌಸ್ ಸಹೋದರ ರಿಯಾಜ್ ಬೆದರಿಕೆ ಒಡ್ಡಿದ್ದಾರೆ’ ಎಂದು ಹೇಳಿಕೆ ನೀಡಿದ್ದ. ಈ ಸಂಬಂಧ ಗುಪ್ತಚರ ಇಲಾಖೆ ಅಧಿಕಾರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.



ಡಬಲ್ ಎಂಜಿನ್ ಸರ್ಕಾರದ ವೈಫಲ್ಯ: ಸಿದ್ದರಾಮಯ್ಯ • ಶರಾವತಿ ಸಂತ್ರಸ್ತರ ಪರ ನಡೆದ ಜನಾಕ್ರೋಶ ಪಾದಯಾತ್ರೆ

‘ಸಂಕಷ್ಟ ಕೇಳಲು ನ್ಯಾಯಾಲಯಕ್ಕೂ ಆಗಲಿಲ್ಲ’

ಪ್ರಜಾವಾಣಿ ವಾರ್ತೆ


ಶರಾವತಿ ಸಂತ್ರಸ್ತರ ಬವಣೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲು ಕೆಪಿಸಿಸಿ ಹಿಂದುಳಿದ ವರ್ಗಗಳ ಸಮಿತಿ ಅಧ್ಯಕ್ಷ ಮಧು ಬಂಗಾರಪ್ಪ ನೇತೃತ್ವದಲ್ಲಿ ಆಯನೂರಿನಿಂದ ಶಿವಮೊಗ್ಗದತ್ತ ಸಾಗಿಬಂದ ಜನಾಕ್ರೋಶ ಪಾದಯಾತ್ರೆ —ಪ್ರಜಾವಾಣಿ ಚಿತ್ರ

ಶಿವಮೊಗ್ಗ: ‘ಶರಾವತಿ ಸಂತ್ರಸ್ತರಿಗೆ ನ್ಯಾಯ ಕೊಡಿಸಲು ಡಬಲ್ ಎಂಜಿನ್ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ಅವರನ್ನು ಪ್ರತಿವಾದಿಗಳನ್ನಾಗಿ ಮಾಡದ ಕಾರಣ ವಿಚಾರಣೆ ವೇಳೆ ಸಂತ್ರಸ್ತರ ಸಂಕಷ್ಟ ಕೇಳಲು ನ್ಯಾಯಾಲಯಕ್ಕೂ ಆಗಲಿಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಶರಾವತಿ ಸಂತ್ರಸ್ತರ ಪರವಾಗಿ ಸೋಮವಾರ ಕೆಪಿಸಿಸಿ ಹಿಂದುಳಿದ ವರ್ಗಗಳ ಅಧ್ಯಕ್ಷ ಮಧು ಬಂಗಾರಪ್ಪ ನೇತೃತ್ವದಲ್ಲಿ ಪಕ್ಷದಿಂದ ಆಯೋಜಿಸಿದ್ದ ಜನಾಕ್ರೋಶ ಪಾದಯಾತ್ರೆ ನಂತರ ನಡೆದ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಶರಾವತಿ ಸಂತ್ರಸ್ತರ ಸಮಸ್ಯೆ ಬಹಳ ವರ್ಷಗಳದ್ದು. ಅದನ್ನು ಬಗೆಹರಿಸಲು ನಮ್ಮ ಸರ್ಕಾರದ ಅವಧಿಯಲ್ಲಿ ಅರಣ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಮದನಗೋಪಾಲ್ ನೇತೃತ್ವದಲ್ಲಿ ಸಮಿತಿ ರಚಿಸಿದ್ದೆವು. 7,000 ಸಂತ್ರಸ್ತ ಕುಟುಂಬಗಳಿಗೆ 9,945 ಎಕರೆ ಅರಣ್ಯ ಜಮೀನು ಕೊಡಲು ಸಿದ್ಧತೆ ನಡೆದಿತ್ತು. ಅರಣ್ಯ ಸಂರಕ್ಷಣೆ ಕಾಯ್ದೆ ಜಾರಿಗೆ ಮುನ್ನವೇ ಸಂತ್ರಸ್ತರು ಅಲ್ಲಿ ವಾಸವಿರುವುದರಿಂದ ಅವರಿಗೆ ಹಕ್ಕುಪತ್ರ ಕೊಡಲು ಕೇಂದ್ರದ ಅನುಮತಿ ಬೇಕಿಲ್ಲ ಎಂದು ಸಮಿತಿ ಶಿಫಾರಸು ಮಾಡಿತ್ತು. ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬಾರದ ಕಾರಣ ಅವರಿಗೆ ಹಕ್ಕುಪತ್ರ ಕೊಡಲು ಆಗಲಿಲ್ಲ’ ಎಂದು ಅವರು ತಿಳಿಸಿದರು.

ಭೂಮಿ ಹಕ್ಕು ಕೊಟ್ಟರೆ ಶೇ 40ರಷ್ಟು ಕಮಿಷನ್ ಸಿಗುವುದಿಲ್ಲ. ಅದೇ ರಸ್ತೆ ಮಾಡಿದರೆ ಸಿಗುತ್ತದೆ ಎಂಬ ಲೆಕ್ಕಾಚಾರ ಬಿಜೆಪಿಯವರದ್ದು. ಅಂತೆಯೇ ಸಂತ್ರಸ್ತರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೋರ್ಟ್‌ಗೆ ಅಲೆಸಿದ್ದು ಸಾಧನೆ: ‘ಅರಣ್ಯ ಸಮಿತಿ ಮುಂದೆ ಬಂದ 93,000 ಬಗರ್‌ಹುಕುಂ ಅರ್ಜಿಗಳ ಪೈಕಿ 73,000 ಅರ್ಜಿದಾರರಿಗೆ ನೋಟಿಸ್ ಕೊಟ್ಟು ಬೆಂಗಳೂರಿನ ಕೋರ್ಟ್‌ಗೆ ಅಲೆದಾಡಿಸಿದ್ದೇ ಬಿಜೆಪಿಯವರ ಸಾಧನೆ’ ಎಂದು ಮಧು ಬಂಗಾರಪ್ಪ ದೂರಿದರು.

ಪಾದಯಾತ್ರೆಗೆ ಭಾರಿ ಸ್ಪಂದನೆ

ಶರಾವತಿ ಮುಳುಗಡೆ ಸಂತ್ರಸ್ತರ ಸಮಸ್ಯೆ ಮುಂದಿಟ್ಟುಕೊಂಡು ಶಿವಮೊಗ್ಗ ತಾಲ್ಲೂಕಿನ ಆಯನೂರಿನಿಂದ ಶಿವಮೊಗ್ಗಕ್ಕೆ ಸೋಮವಾರ ಬೆಳಿಗ್ಗೆ ನಡೆದ ಜನಾಕ್ರೋಶ ಪಾದಯಾತ್ರೆಗೆ ಭರ್ಜರಿ ಸ್ಪಂದನೆ ದೊರೆಯಿತು.

ಸಾವಿರಾರು ಜನರು ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಿದರು. 21.5 ಕಿ.ಮೀ ದೂರದ ಈ ಪಾದಯಾತ್ರೆಗೆ ಆಯನೂರಿನಲ್ಲಿ ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಚಾಲನೆ ನೀಡಿದರು. ಮಾಜಿ ಸಚಿವ ಕಿಮ್ಮನೆ ರತ್ನಾಕರ ಹೆಜ್ಜೆ ಹಾಕಿದರು.

ಮುಳುಗಡೆ ಸಂತ್ರಸ್ತರ ಕುಟುಂಬದವರು, ಕಾಂಗ್ರೆಸ್ ಸದಸ್ಯರು, ಪದಾಧಿಕಾರಿಗಳು ಹಾಗೂ ಮುಖಂಡರು ಮಧು ಬಂಗಾರಪ್ಪ ಅವರ ಜೊತೆಗೆ ಹೆಜ್ಜೆ ಹಾಕಿದರು. ಮಹಿಳೆಯರು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಅಡಿಕೆಗೆ ಪ್ರತ್ಯೇಕ ಮಂಡಳಿ: ಡಿಕೆಶಿ

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಅಡಿಕೆಗೆ ಪ್ರತ್ಯೇಕ ಮಂಡಳಿ ರಚಿಸಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಘೋಷಿಸಿದರು.

‘ಹಸಿರು ಶಾಲು ಹಾಕಿಕೊಂಡು ರೈತರ ಹೆಸರಲ್ಲಿ ಅಧಿಕಾರಕ್ಕೆ ಬಂದವರು ಕೈಗಾರಿಕೆಗಳ ಸ್ಥಾಪನೆಗೆ ಅರಣ್ಯ ಭೂಮಿ ಕೊಡುತ್ತಾರೆ. ಆದರೆ, ಶರಾವತಿ ಸಂತ್ರಸ್ತರಿಗೆ ಇರುವ ಭೂಮಿ ಉಳಿಸಿಕೊಡಲಿಲ್ಲ. ಮಲೆನಾಡಿನ ರೈತರು ಎದುರಿಸುತ್ತಿರುವ ಎಲ್ಲ ಸಮಸ್ಯೆಗಳ ಬಗ್ಗೆ ಕೆಪಿಸಿಸಿಯಿಂದ ರಚಿಸಿದ್ದ ಸಮಿತಿ ವರದಿ ನೀಡಿದೆ. ಪಕ್ಷ ಅಧಿಕಾರಕ್ಕೆ ಬಂದರೆ ಆದ್ಯತೆ ಮೇಲೆ ಪರಿಹರಿಸಲಿದ್ದೇವೆ’ ಎಂದು ಹೇಳಿದರು.

ಸುದ್ದಿ 2 ನಿಮಿಷ


ಜಾನಪದ ವಿ.ವಿಯಿಂದ ಆರು ಮಂದಿಗೆ ಗೌರವ ಡಾಕ್ಟರೇಟ್

ಹಾವೇರಿ: ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಆವರಣದಲ್ಲಿರುವ ‘ಹಿರೇತಿಟ್ಟು’ ಬಯಲು ರಂಗಮಂದಿರದಲ್ಲಿ ಡಿ. 1ರಂದು 6 ಮತ್ತು 7ನೇ ಘಟಿಕೋತ್ಸವ ನಡೆಯಲಿದ್ದು, ಈ ಬಾರಿ ಆರು ಸಾಧಕರಿಗೆ ‘ಗೌರವ ಡಾಕ್ಟರೇಟ್’ ಪದವಿ ನೀಡಲಾಗುವುದು ಎಂದು ಕುಲಪತಿ ಪ್ರೊ.ಟಿ.ಎಂ. ಭಾಸ್ಕರ್ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಣೆಬೆನ್ನೂರಿನ ಅರೆಮಲ್ಲಾಪುರದ ಜಾನಪದ ಕಲಾವಿದ ಕೆಂಚಪ್ಪ ನಾಗರಜ್ಜಿ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ ಜೀವನ್ ರಾಂ ಸುಳ್ಯ, ಉಡುಪಿಯ ಯಕ್ಷಗಾನ ಕಲಾವಿದ ತಲ್ಲೂರು ಶಿವರಾಮ ಶೆಟ್ಟಿ, ಹುಬ್ಬಳ್ಳಿಯ ರಂಗಭೂಮಿ ಕಲಾವಿದ ಯಶವಂತ ಸರದೇಶಪಾಂಡೆ, ಗದಗದ ಗಂಗಿಮಡಿ ನಗರದ ಬಸವರಾಜು ಕಂಚಿಗೇರಿ, ಬಾಗಲಕೋಟೆ ಜಿಲ್ಲೆಯ ವೆಂಕಪ್ಪ ಅಂಬಾಜಿ ಸುಗೇತಕರ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದರು.

ಚಿನ್ನದ ಪದಕ ಪಡೆದ 3 ವಿದ್ಯಾರ್ಥಿಗಳು, 26 ರ‍್ಯಾಂಕ್ ವಿದ್ಯಾರ್ಥಿಗಳು, ಪಿಎಚ್.ಡಿ ಪದವಿ ಪಡೆದ 7 ಮಂದಿ ಸೇರಿದಂತೆ ಒಟ್ಟು 515 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಮಾಲಾಧಾರಣೆ ಅಭಿಯಾನ



ಚಿಕ್ಕಮಗಳೂರು: ವಿಶ್ವ ಹಿಂದೂ ಪರಿಷತ್, ಬಜರಂಗ ದಳದಿಂದ ದತ್ತ ಮಾಲಾ ಅಭಿಯಾನದ ಅಂಗವಾಗಿ, ನಗರದ ಕಾಮಧೇನು ಗಣಪತಿ ದೇಗುಲದಲ್ಲಿ ಸೋಮವಾರ ಮಾಲಾಧಾರಣೆ ಕೈಂಕರ್ಯ ನೆರವೇರಿತು.

ಶ್ರೀಗುರುದತ್ತಾತ್ರೇಯ ಸ್ವಾಮಿಗೆ ಪೂಜೆ ನೆರವೇರಿಸಲಾಯಿತು. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಬಜರಂಗದಳ ಪ್ರಾಂತ ಸಹ ಸಂಚಾಲಕ ರಘು ಸಕಲೇಶಪುರ ಸಹಿತ ಹಲವರು ಮಾಲೆ ಧಾರಣೆ ಮಾಡಿದರು. ಸುರೇಶ ಜ.ಪೈ ಅವರ ‘ಇನಾಂ ಶ್ರೀದತ್ತಪೀಠ – ಚಿಕ್ಕಮಗಳೂರು’ ಕಿರುಹೊತ್ತಿಗೆ ಬಿಡುಗಡೆ ಮಾಡಲಾಯಿತು.

‘ವ್ಯವಸ್ಥಾಪನಾ ಸಮಿತಿಯು ಸಭೆ ನಡೆಸಿ ದತ್ತ ಪೀಠಕ್ಕೆ ಹಿಂದೂ ಅರ್ಚಕರ ನೇಮಕ ನಿಟ್ಟಿನಲ್ಲಿ ನಿರ್ಣಯ ಕೈಗೊಳ್ಳಲಿದೆ. ತಾತ್ಕಾಲಿಕ ಅರ್ಚಕರ ನೇಮಕ ಮಾಡಿ ಪೂಜೆ ಪ್ರಾರಂಭಿಸಲು ಆತಂಕ ಇಲ್ಲ. ಸಮಿತಿ ನೇಮಕ ಮಾಡಬಹುದು’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಪ್ರತಿಕ್ರಿಯಿಸಿದರು.

‘ಈ ಬಾರಿ ದತ್ತ ಜಯಂತಿಯಲ್ಲಿ ಹಿಂದೂ ಅರ್ಚಕ ಪೂಜೆ ನೆರವೇರಿಸಲಿದ್ದಾರೆ. ಬಾಬಾಬುಡನ್ ದರ್ಗಾದಲ್ಲಿ ಮುಜಾವರ್ ಹಾಗೂ ದತ್ತ ಪೀಠದಲ್ಲಿ ಹಿಂದೂ ಅರ್ಚಕ ಕೈಂಕರ್ಯ ನೆರವೇರಿಸಲಿದ್ದಾರೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಾಮಾಣಿಕರು ₹ 2 ಲಕ್ಷ ಕಟ್ಟಬಾರದು: ಎಸ್‌ಎಸ್‌ಎಂ

ದಾವಣಗೆರೆ: ‘ಕಾಂಗ್ರೆಸ್ ಪಕ್ಷದ ಟಿಕೆಟ್ ಆಕಾಂಕ್ಷಿಗಳು ಅರ್ಜಿಯ ಜೊತೆಗೆ ₹ 2 ಲಕ್ಷವನ್ನು ಯಾಕೆ ಕಟ್ಟಬೇಕು?’ ಎಂದು ಪ್ರಶ್ನಿಸಿರುವ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ, ‘ಪ್ರಾಮಾಣಿಕರಾಗಿರುವ ನಾವು ₹ 2 ಲಕ್ಷ ಕಟ್ಟಬಾರದು’ ಎಂದು ಪ್ರತಿಪಾದಿಸಿದರು.

ನಗರದಲ್ಲಿ ಪಕ್ಷದ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ‘ಭಾರತ್ ಜೋಡೊ–ಸಂವಿಧಾನ ಬಚಾವೋ’ ಪಾದಯಾತ್ರೆಗೆ ಚಾಲನೆ ನೀಡಿ, ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ‘ನಾನು ಪಕ್ಷದ ಟಿಕೆಟ್ ಕೋರಿ ಅರ್ಜಿ ಸಲ್ಲಿಸುತ್ತೇನೆ. ಪ್ರಾಮಾಣಿಕವಾಗಿರುವ ನಾವು ಯಾಕೆ ₹ 2 ಲಕ್ಷ ಯಾಕೆ ಕಟ್ಟಬೇಕು ಎಂದು ಕೇಳುತ್ತಿದ್ದೇನೆ’ ಎಂದರು.

‘ಕಸಬ್’ ಎಂದ ಪ್ರಾಧ್ಯಾಪಕ: ವಿದ್ಯಾರ್ಥಿ ತರಾಟೆ

ಪ್ರಜಾವಾಣಿ ವಾರ್ತೆ

ಉಡುಪಿ: ಮಣಿಪಾಲದ ಮಾಹೆ ವಿವಿಯ ಎಂಐಟಿಯಲ್ಲಿ ಪ್ರಾಧ್ಯಾಪಕ ರವೀಂದ್ರನಾಥ್ ತನ್ನನ್ನು ‘ಕಸಬ್’ ಎಂದು ಸಂಬೋಧಿಸಿದರು ಎಂದು ವಿದ್ಯಾರ್ಥಿ ಪಿ.ಹಮ್ಜ ಆಕ್ಷೇಪ ವ್ಯಕ್ತಪಡಿಸಿ, ಆ ಪ್ರಾಧ್ಯಾಪಕರನ್ನು ತರಗತಿಯಲ್ಲೇ ತರಾಟೆಗೆ ತೆಗೆದುಕೊಂಡ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಪ್ರಾಧ್ಯಾಪಕರ ಈ ನಡೆಗೆ ನೆಟ್ಟಿಗರಿಂದ ಆಕ್ಷೇಪ ವ್ಯಕ್ತವಾಗಿದೆ.

‘ಉದ್ದೇಶಪೂರ್ವಕವಾಗಿ ಈ ಪದ ಬಳಸಿಲ್ಲ. ಹಾಸ್ಯದ ಧಾಟಿಯಲ್ಲಿ ನೀಡಿರುವ ಹೇಳಿಕೆಗೆ ಕ್ಷಮೆಯಾಚಿಸುತ್ತೇನೆ. ನೀನು ನನ್ನ ಮಗನಂತೆ’ ಎಂದು ಪ್ರಾಧ್ಯಾಪಕ ರವೀಂದ್ರನಾಥ್ ವಿದ್ಯಾರ್ಥಿಯ ಬಳಿ ಕೇಳಿಕೊಂಡಿದ್ದಾರೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

‘26/11 ಕೃತ್ಯ ಹಾಸ್ಯಾಸ್ಪದವಲ್ಲ. ಮುಸ್ಲಿಮನಾಗಿ ಇಂತಹ ಹೇಳಿಕೆಗಳನ್ನು ಸಹಿಸುವುದಿಲ್ಲ. ಮಗನಿಗೆ ಭಯೋತ್ಪಾದಕ ಎಂದು ನೀವು ಕರೆಯುವಿರಾ’ ಎಂದು ವಿದ್ಯಾರ್ಥಿ ಪ್ರಶ್ನಿಸಿರುವುದು ವಿಡಿಯೊದಲ್ಲಿದೆ.

ತನಿಖೆಗೆ ಸೂಚನೆ: ಈ ಕುರಿತು ಪ್ರತಿಕ್ರಿಯೆ ನೀಡಿರುವ ಮಾಹೆ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣದ ಸಾರ್ವಜನಿಕ ಸಂಪರ್ಕ ಅಧಿಕಾರಿ ಎಸ್.ಪಿ.ಕರ್, ‘ಘಟನೆ ಸಂಬಂಧ ತನಿಖೆಗೆ ಸೂಚಿಸಲಾಗಿದೆ. ತನಿಖೆ ಮುಗಿಯುವವರೆಗೂ ಬೋಧನೆ ಮಾಡದಂತೆ ಪ್ರಾಧ್ಯಾಪಕ ರವೀಂದ್ರನಾಥ್ ಅವರಿಗೆ ಸೂಚಿಸಲಾಗಿದೆ’ ಎಂದಿದ್ದಾರೆ.

‘ಮಾಹೆ ವಿವಿಯು ಸಂವಿಧಾನಿಕ ಮೌಲ್ಯಗಳನ್ನು ಗೌರವಿಸಿ ಎತ್ತಿಹಿಡಿಯುವುದರ ಜತೆಗೆ ಜಾತಿ, ಧರ್ಮ, ಲಿಂಗ ಹಾಗೂ ಪ್ರಾದೇಶಿಕ ಭೇದ ತೋರದೆ ಎಲ್ಲ ವಿದ್ಯಾರ್ಥಿಗಳನ್ನು ಸಮಾನವಾಗಿ ನೋಡುತ್ತದೆ’ ಎಂದು ತಿಳಿಸಿದ್ದಾರೆ.

‘ವಿವಾದ ಕೊನೆಗೊಳಿಸಿ’: ‘ಘಟನೆ ಬಳಿಕ ಪ್ರಾಧ್ಯಾಪಕರ ಜತೆ ಮಾತನಾಡಿದ್ದು, ಉದ್ದೇಶಪೂರ್ವಕವಾಗಿ ಪದ ಬಳಕೆ ಮಾಡಿಲ್ಲ ಎಂಬುದು ಅರಿವಿಗೆ ಬಂದಿದೆ. ಕಸಬ್ ಹೇಳಿಕೆಗೆ ಅವರು ಕ್ಷಮೆಯಾಚಿಸಿರುವುದರಿಂದ ವಿವಾದ ಅಂತ್ಯಗೊಳಿಸುತ್ತಿದ್ದೇನೆ’ ಎಂದು ವಿದ್ಯಾರ್ಥಿ ಹಮ್ಜ ವಾಟ್ಸ್‌ಆ್ಯಪ್‌ನಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ.

‘ಒಡನಾಡಿ’ ಪರಶುರಾಮ್‌ಗೆ ನೋಟಿಸ್

ಚಿತ್ರದುರ್ಗ: ‘ಮುರುಘಾ ಮಠದ ಶಿವಮೂರ್ತಿ ಶರಣರು ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿರುವ ಪ್ರಕರಣದಿಂದ ಹಿಂದೆ ಸರಿಯಲು ₹ 3 ಕೋಟಿ ಆಮಿಷ ಒಡ್ಡಲಾಗಿತ್ತು’ ಎಂಬ ಹೇಳಿಕೆ ನೀಡಿರುವ ಒಡನಾಡಿ ಸೇವಾ ಸಂಸ್ಥೆಯ ನಿರ್ದೇಶಕ ಎಂ.ಎಲ್. ಪರಶುರಾಮ್ ಅವರಿಗೆ ಪೊಲೀಸರು ನೋಟಿಸ್ ನೀಡಿದ್ದಾರೆ.

‘ಆಮಿಷ ಒಡ್ಡಿರುವುದಕ್ಕೆ ಪೂರಕವಾದ ಸಾಕ್ಷ್ಯದೊಂದಿಗೆ ನ.29ರಂದು ವಿಚಾರಣೆಗೆ ಹಾಜರಾಗಿ’ ಎಂದು ಡಿವೈಎಸ್‌ಪಿ ಲೋಕೇಶ್ ನೋಟಿಸ್ ಜಾರಿ ಮಾಡಿದ್ದಾರೆ. ಇ-ಮೇಲ್ ಮೂಲಕ ನೋಟಿಸ್ ತಲುಪಿರುವುದನ್ನು ಸಂಸ್ಥೆ ಖಚಿತಪಡಿಸಿದೆ.

‘ಬಡತನ ಮಾನದಂಡವಾಗಲಿ’

ಚಿಕ್ಕಬಳ್ಳಾಪುರ: ‘ಮೀಸಲಾತಿ ನೀಡಲು ಜನಸಂಖ್ಯೆಗಿಂತ ಬಡತನವೇ ಮುಖ್ಯ ಮಾನದಂಡ ಆಗಬೇಕು’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ತಾಲ್ಲೂಕಿನ ನಂದಿ ಗ್ರಾಮದಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ‘ಆರ್ಥಿಕವಾಗಿ ಹಿಂದುಳಿದವರು ಎನ್ನುವರ ಕಾರಣಕ್ಕೆ ಶೇ 10ರಷ್ಟು ಮೀಸಲಾತಿ ನೀಡಲಾಗಿದೆ. ಆ ಸಮಾಜದವರು ನಮ್ಮಲ್ಲಿ ಎಷ್ಟು ಜನರು ಇದ್ದಾರೆ ಎನ್ನುವ ಚರ್ಚೆ ಮಾಡಿದರೆ ಅದು ಎಲ್ಲಿಗೊ ಹೋಗುತ್ತದೆ’ ಎಂದರು.

‘ಮೀಸಲಾತಿಗಾಗಿ ಪಂಚಮಸಾಲಿ ಮತ್ತು ಕುರುಬ ಸಮಾಜ ಹೋರಾಟ ನಡೆಸುತ್ತಿವೆ. ಒಕ್ಕಲಿಗರೂ ಆಗ್ರಹಿಸುತ್ತಿದ್ದಾರೆ. ಒಕ್ಕಲಿಗ ಸಮಾಜದ ಜಾತಿ, ಉಪ ಜಾತಿಗಳ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಮಾಹಿತಿ ಪಡೆದು ಆ ಆಧಾರದಲ್ಲಿ ಸರ್ಕಾರದ ಗಮನ ಸೆಳೆಯುವಂತೆ ಸಮುದಾಯದ ಸ್ವಾಮಿಗಳಲ್ಲಿ ಮನವಿ ಮಾಡಿದ್ದೇನೆ’ ಎಂದರು.

‘ಸಿ.ಟಿ. ರವಿ ವಿರುದ್ಧ ಪ್ರಕರಣ ದಾಖಲಿಸಿ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಸಿದ್ದರಾಮಯ್ಯ ಅಧಿಕಾರಕ್ಕೆ ಬಂದರೆ ಹಿಂದೂಗಳ ಸರಣಿ ಹತ್ಯೆ ನಡೆಯುತ್ತದೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ನೀಡಿರುವ ಹೇಳಿಕೆಯನ್ನು ಖಂಡಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘ಕೋಮುಭಾವನೆ ಪ್ರಚೋದಿಸಿದ ಆರೋಪದಡಿ ಸಿ.ಟಿ. ರವಿ ವಿರುದ್ಧ ಪ್ರಕರಣ ದಾಖಲಿಸಬೇಕು’ ಎಂದು ಆಗ್ರಹಿಸಿದರು.

ಚಿತ್ರದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಸೋಮವಾರ ಹಮ್ಮಿಕೊಂಡಿದ್ದ ‘ಸಂವಿಧಾನ ಬಚಾವೊ’ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ಸಾಮಾಜಿಕ ಜಾಲತಾಣಗಳಲ್ಲಿ ಬಿಜೆಪಿ ಕಾರ್ಯಕರ್ತರು ಅಪಪ್ರಚಾರ ಮಾಡಿದರೆ ಪ್ರಕರಣ ದಾಖಲಿಸುತ್ತಿಲ್ಲ. ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧ ಮಾತ್ರ ಕಾನೂನು ಅಸ್ತ್ರ ಬಳಸಲಾಗುತ್ತಿದೆ’ ಎಂದರು.

ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದರೆ ಗಲಭೆ, ಹತ್ಯೆ: ಜಗದೀಶ ಶೆಟ್ಟರ್

ಹುಬ್ಬಳ್ಳಿ: ‘ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಹಿಂದೂ-ಮುಸ್ಲಿಮರ ನಡುವೆ ಗಲಭೆಗಳಾಗಿವೆ, ಹಿಂದೂಗಳ ಹತ್ಯೆ ಸಹ ಆಗಿವೆ. ಅವರು ಮತ್ತೆ ಅಧಿಕಾರಕ್ಕೆ ಬಂದರೆ ಅದೇ ಸ್ಥಿತಿ ಮುಂದುವರಿಯುತ್ತದೆ’ ಎಂದು ಶಾಸಕ ಜಗದೀಶ ಶೆಟ್ಟರ್ ಹೇಳಿದರು.

ಸೋಮವಾರ ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್ ನಡೆಸಿದ 60 ವರ್ಷಗಳ ದುರಾಡಳಿತ ನೋಡಿಯೇ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹೇಳಿದ್ದು, ಅವರ ಹೇಳಿಕೆಯಲ್ಲಿ ತಪ್ಪೇನಿಲ್ಲ’ ಎಂದು ಸಿ.ಟಿ. ಅವರ ‘ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಹಿಂದೂಗಳ ಹತ್ಯೆಯಾಗುತ್ತದೆ’ ಎಂಬ ಮಾತನ್ನು ಸಮರ್ಥಿಸಿಕೊಂಡರು.

> ಸಿದ್ದರಾಮಯ್ಯ ಅವರಿಗೆ ಕುಂಕುಮ, ಕೇಸರಿ ಆಗಲ್ಲ. ಟಿಪ್ಪು, ಟೋಪಿ ಅವರಿಗೆ ಇಷ್ಟ. ಸಿದ್ರಾಮುಲ್ಲಾ ಖಾನ್ ಎಂದರೆ ಅದು ಅಸಂಸದೀಯ ಪದವಲ್ಲ.
>
> **ಸಿ.ಟಿ. ರವಿ,** ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

> ಸಿದ್ದರಾಮಯ್ಯ ಅವರನ್ನು ‘ಸಿದ್ರಾಮುಲ್ಲಾ’ ಎಂದು ಟೀಕಿಸಿರುವ ಸಿ.ಟಿ.ರವಿ ಅವರದ್ದು ವಿನಾಶಕಾರಿ ಮನಸ್ಸು. ಅವರ ಹೇಳಿಕೆಗಳು ಸಮಾಜವನ್ನು ಒಗ್ಗೂಡಿಸುವಂತಿರಬೇಕು.
>
> **ಸಲೀಂ ಅಹ್ಮದ್,** ವಿಧಾನ ಪರಿಷತ್ ಸದಸ್ಯ

41 ತಾಲ್ಲೂಕುಗಳಲ್ಲಿ 10 ಹಾಸಿಗೆಗಳ ಟೆಲಿ ಐಸಿಯು: ಸಿ.ಎಂ

ಮೈಸೂರು: ರಾಜ್ಯದ 41 ಸರ್ಕಾರಿ ಆಸ್ಪತ್ರೆಗಳಲ್ಲಿ ತಲಾ 10 ಹಾಸಿಗೆಗಳ ಟೆಲಿ ಐಸಿಯು ಸೇವೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಸಾರ್ವಜನಿಕರಿಗೆ ಸಮರ್ಪಿಸಿದರು.

ಇಲ್ಲಿನ ಜೆ.ಕೆ.ಮೈದಾನದ ಮೈಸೂರು ವೈದ್ಯಕೀಯ ಕಾಲೇಜಿನ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ, ಕಾಲೇಜಿನ ಗ್ರಂಥಾಲಯ ಮತ್ತು ವಿದ್ಯಾರ್ಥಿಗಳ ಹಾಸ್ಟೆಲ್ ಅನ್ನೂ ಉದ್ಘಾಟಿಸಿದರು.

‘ಆರೋಗ್ಯ ಇಲಾಖೆ, ಇ-ಆಡಳಿತ ಪ್ರತಿಷ್ಠಾನ ಹಾಗೂ ಕರುಣಾ ಟ್ರಸ್ಟ್ ಸಹಯೋಗದಲ್ಲಿ ಟೆಲಿ ಐಸಿಯು ಸೇವೆ ಉಪಕ್ರಮ ಅನುಷ್ಠಾನಗೊಳಿಸಲಾಗಿದೆ. ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ‘ಟೆಲಿ ಐಸಿಯು ಹಬ್’ ಸ್ಥಾಪಿಸಿ, ತಾಲ್ಲೂಕು ಆಸ್ಪತ್ರೆಗಳಿಗೆ ಇಲ್ಲಿಂದಲೇ ತಜ್ಞರು ಚಿಕಿತ್ಸೆಗೆ ಮಾರ್ಗದರ್ಶನ ನೀಡಲಿದ್ದಾರೆ ಎಂದರು.

ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವ ಡಾ.ಕೆ.ಸುಧಾಕರ್ ಮಾತನಾಡಿದರು.

ಕರ್ನಾಟಕ ಸೇರುತ್ತೇವೆ: ಸಿದ್ಧನಾಥ ಗ್ರಾಮಸ್ಥರ ನಿರ್ಣಯ

ಮಹಾರಾಷ್ಟ್ರದಲ್ಲಿ ಕನ್ನಡಿಗರಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಜತ್(ಮಹಾರಾಷ್ಟ್ರ): ‘ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಕಾರಣಕ್ಕೆ ಮಹಾರಾಷ್ಟ್ರ ಸರ್ಕಾರ ರಾಜ್ಯದ ಗಡಿ ಭಾಗದಲ್ಲಿರುವ ಗ್ರಾಮಗಳಲ್ಲಿ ಅಭಿವೃದ್ಧಿ ಕಡೆಗಣಿಸಿದೆ. ಶಿಕ್ಷಣ, ಆರೋಗ್ಯ, ರಸ್ತೆ, ಸಾರಿಗೆ, ನೀರಾವರಿ ಸೌಲಭ್ಯ ಸೇರಿದಂತೆ ಮೂಲಸೌಕರ್ಯ ನೀಡದೆ ಮಲತಾಯಿ ಧೋರಣೆ ಅನುಸರಿಸುತ್ತಿದೆ’ ಎಂದು ಆರೋಪಿಸಿ ಸಾಂಗ್ಲಿ ಜಿಲ್ಲೆ ಜತ್ ತಾಲ್ಲೂಕಿನ ಸಿದ್ಧನಾಥ ಗ್ರಾಮಸ್ಥರು ಸೋಮವಾರ ಪ್ರತಿಭಟನೆ ನಡೆಸಿದರು.

ಮಹಾರಾಷ್ಟ್ರದ ಕನ್ನಡ ಪರ ಸಂಘಟನೆಗಳ ಮುಖಂಡರು ಗ್ರಾಮದಲ್ಲಿ ಸಭೆ ನಡೆಸಿ, ಕನ್ನಡ ಧ್ವಜ ಹಿಡಿದು ಮೆರವಣಿಗೆ ಮಾಡಿದರು.

ಕರ್ನಾಟಕ ಸೇರುತ್ತೇವೆ: ಪಂಢರಪುರ ನಿವಾಸಿಗಳ ಬೆದರಿಕೆ: (ಕಲಬುರಗಿ ವರದಿ): ಮಹಾರಾಷ್ಟ್ರದ ಪಂಢರಪುರ ನಿವಾಸಿಗಳು ಅಲ್ಲಿನ ರಾಜ್ಯ ಸರ್ಕಾರದ ಪಂಢರಪುರ ಕಾರಿಡಾರ್ ಅಭಿವೃದ್ಧಿ ಯೋಜನೆ ವಿರೋಧಿಸಿ ಈಚೆಗೆ ಬೃಹತ್ ಪ್ರತಿಭಟನೆ ನಡೆಸಿದರು. ‘ಯೋಜನೆ ನಿಲ್ಲಿಸದಿದ್ದರೆ ಕರ್ನಾಟಕಕ್ಕೆ ಸೇರಬೇಕಾಗುತ್ತದೆ’ ಎಂದು ಎಚ್ಚರಿಕೆಯೂ ನೀಡಿದರು.

‘ಈ ಕಾರಿಡಾರ್ ಯೋಜನೆಯಿಂದ ಪ್ರಮುಖ ಐತಿಹಾಸಿಕ ತಾಣಗಳು ನೆಲಕ್ಕುರುಳಲಿದ್ದು, ವ್ಯವಹಾರಕ್ಕೂ ತೊಂದರೆ ಆಗಲಿದೆ’ ಎಂದು ಹೋರಾಟದ ನೇತೃತ್ವ ವಹಿಸಿರುವ ಸಂಘರ್ಷ ಸಮಿತಿಯ ಅಧ್ಯಕ್ಷ ರಾಮಕೃಷ್ಣ ಮಹಾರಾಜ ವೀರ್ ಹಾಗೂ ಮುಖಂಡ ಆದಿತ್ಯ ಫತ್ತೇಪುರಕರ್ ಎಚ್ಚರಿಕೆ ನೀಡಿದ್ದಾರೆ.

ಬಸ್ ಸಂಚಾರ ತಡೆದು ಪ್ರತಿಭಟನೆ

ಅಥಣಿ(ಬೆಳಗಾವಿ ಜಿಲ್ಲೆ): ‘ಮಹಾರಾಷ್ಟ್ರ ಏಕೀಕರಣ ಸಮಿತಿ ಮತ್ತು ಶಿವಸೇನೆಯನ್ನು ರಾಜ್ಯದಲ್ಲಿ ನಿಷೇಧಿಸಬೇಕು’ ಎಂದು ಒತ್ತಾಯಿಸಿ ಇಲ್ಲಿನ ಅಂಬೇಡ್ಕರ್ ವೃತ್ತದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ(ಪ್ರವೀಣ ಶೆಟ್ಟಿ ಬಣ) ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದರು.

ಮಹಾರಾಷ್ಟ್ರ ನಾಯಕರ ವಿರುದ್ಧ ಘೋಷಣೆಗಳನ್ನು ಕೂಗಿದ ಪ್ರತಿಭಟನಾಕಾರರು, ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಎಂಎಸ್‌ಆರ್‌ಟಿಸಿ) ಬಸ್‌ಗಳ ಸಂಚಾರ ತಡೆದು ಚಾಲಕ ಮತ್ತು ನಿರ್ವಾಹಕರಿಗೆ ಕನ್ನಡ ಬಾವುಟ ನೀಡಿದರು.

ವಿದೇಶಿ ವಸ್ತ್ರಕ್ಕೂ ಅಡಿಕೆ ಬಣ್ಣದ ಮೆರುಗು

ಒಂದನೇ ಪುಟದಿಂದ...

‘ಶಿವಮೊಗ್ಗ ಜಿಲ್ಲೆ ಹೆಗ್ಗೋಡಿನಲ್ಲಿರುವ ಪ್ರಸನ್ನ ಅವರ ಚರಕ ಸಂಸ್ಥೆಯವರು ಎರಡು ದಶಕಗಳಿಂದ ಚೊಗರಿನಿಂದ ನೈಸರ್ಗಿಕ ಬಣ್ಣ ತಯಾರಿಸಿ, ಅದನ್ನು ವಸ್ತ್ರೋದ್ಯಮದಲ್ಲಿ ವ್ಯಾಪಕವಾಗಿ ಬಳಸುತ್ತಿದ್ದಾರೆ. ಜಗತ್ತಿನ ಪ್ರಸಿದ್ಧ 50 ವಸ್ತ್ರೋತ್ಪಾದನಾ ಸಂಸ್ಥೆಗಳು ಅಡಿಕೆ ಬಣ್ಣ ಬಳಕೆ ಆರಂಭಿಸಿವೆ. ರೇಷ್ಮೆ ಬಟ್ಟೆಗೂ ಇದನ್ನು ಬಳಸಲಾಗುತ್ತಿದೆ. ತಮಿಳುನಾಡು ಮತ್ತು ಚನ್ನಪಟ್ಟಣದ ಗೊಂಬೆ ತಯಾರಕರಾದ ವೆಂಕಟೇಶ್ ಅವರು ಗೊಂಬೆಗಳಿಗೆ ಈ ಬಣ್ಣ ಬಳಸಲು ಮುಂದಾಗಿದ್ದಾರೆ. ಇದು ಆಶಾದಾಯಕ ಬೆಳವಣಿಗೆ’ ಎಂಬುದು ಅಡಿಕೆ ಕೃಷಿ ತಜ್ಞ ಶ್ರೀ ಪಡ್ರೆ ಅವರ ವಿವರಣೆ.

‘ಅಡಿಕೆಯಿಂದ ಬಣ್ಣ ತಯಾರಾಗುತ್ತದೆ ಎಂಬುದು ಅಡಿಕೆ ಬೆಳೆಯುವ ಶೇ80ರಷ್ಟು ರೈತರಿಗೆ ಗೊತ್ತಿಲ್ಲ. ಅಡಿಕೆ ಚೊಗರು (Areca syrup) ನೈಸರ್ಗಿಕ ಬಣ್ಣವಾಗಿ ಬಳಸಬಹುದು ಎಂಬುದು ಬಹುಪಾಲು ವಸ್ತ್ರೋದ್ಯಮಿಗಳ ಅರಿವಿಗೂ ಬಂದಿಲ್ಲ. ಈಗ ವರ್ಷಕ್ಕೆ ಅಂದಾಜು ಒಂದು ಲಕ್ಷ ಲೀಟರ್ ಚೊಗರು ಉತ್ಪಾದನೆಯಾಗುತ್ತಿದ್ದು, ವ್ಯವಸ್ಥಿತವಾಗಿ ಮಾಡಿದರೆ ನಾಲ್ಕು ಲಕ್ಷ ಲೀಟರ್‌ವರೆಗೆ ಉತ್ಪಾದಿಸುವ ಅವಕಾಶ ಇದೆ. ಚೊಗರು ಸಂಸ್ಕರಣೆ ಮತ್ತು ಅದರಿಂದ ಉತ್ಕೃಷ್ಟ ಗುಣಮಟ್ಟದ ನೈಸರ್ಗಿಕ ಬಣ್ಣ ತಯಾರಿಕೆಯ ಬಗ್ಗೆ ಇನ್ನಷ್ಟು ಸಂಶೋಧನೆ ನಡೆಯಬೇಕು. ಅದಕ್ಕೆ ರೈತರನ್ನೂ ಅಣಿಗೊಳಿಸಿದರೆ ಅಡಿಕೆಯ ಚೊಗರಿನಿಂದಲೂ ರೈತರು ಹೆಚ್ಚಿನ ಆದಾಯ ಗಳಿಸುವ; ಚೊಗರೇ ಮುಖ್ಯ ಉತ್ಪನ್ನವಾಗುವ ಅವಕಾಶ ಇದೆ’ ಎನ್ನುವುದು ಅವರ ವಿಶ್ವಾಸ.

> ತೊಗರಿನಲ್ಲಿ ಗೆದ್ದಲು ನಿಯಂತ್ರಕ ಅಂಶ ಇದೆ. ಪರ್ಯಾಯ ಬಣ್ಣ ಬಳಕೆಗೆ ಒತ್ತು ನೀಡಿ ಅಡಿಕೆಯನ್ನು ‘ಅಪರಾಧಿ ಪ್ರಜ್ಞೆ’ಯಿಂದ ಮುಕ್ತಗೊಳಿಸಬೇಕಿದೆ
>
> **ಶ್ರೀ ಪಡ್ರೆ,** ಅಡಿಕೆ ಕೃಷಿ ತಜ್ಞ

‘ಮಲೆನಾಡಿನಲ್ಲಿ ತಂಪು ವಾತಾವರಣದ ಪ್ರದೇಶದಲ್ಲಿ ಬೆಳೆಯುವ ಕೆಂಪಡಿಕೆಯಿಂದ ಚೊಗರು ಹೆಚ್ಚು ಉತ್ಪಾದನೆಯಾಗುತ್ತಿದೆ. ದ್ರವರೂಪದಲ್ಲಿ ಇರುವ ಅದನ್ನು ಖರೀದಿಸಿ, ಸಂಸ್ಕರಿಸಿ ಹರಳೆಣ್ಣೆ ಅಥವಾ ಜೋನಿ ಬೆಲ್ಲದ ಮಾದರಿಗೆ ತಂದು ಮಾರಾಟ ಮಾಡುತ್ತೇವೆ’ ಎಂದು ಹೆಗ್ಗೋಡಿನ ಶ್ರೀಕಾಂತ ಹೇಳಿದರು. ಈ ಬಣ್ಣದ ಬಳಕೆ ಚರಕ ಸಂಸ್ಥೆಯಲ್ಲಿ ಮಾತ್ರ ಹೆಚ್ಚಿನ ಪ್ರಮಾಣದಲ್ಲಿದೆ ಎಂದೂ ತಿಳಿಸಿದರು.

ಅಚ್ಚು ಹಾಕುವಲ್ಲಿಯೂ ಅಚ್ಚುಮೆಚ್ಚು

ನೂಲನ್ನು ಬಣ್ಣದಲ್ಲಿ ಅದ್ದುವ (ಯಾನ್ ಡ್ರೈಯಿಂಗ್) ವಿಧಾನಕ್ಕೆ ಅಡಿಕೆ ಬಣ್ಣ ಬಳಸುವ ವಿಧಾನ ಜನಪ್ರಿಯವಾಗಿದೆ. ಅಡಿಕೆಯಿಂದ ನೈಸರ್ಗಿಕ ಬಣ್ಣ ತಯಾರಿಸಿ, ವಸ್ತ್ರೋದ್ಯಮಕ್ಕೆ ಬಳಸುವ ವಿಧಾನದ ಕುರಿತು ಧಾರವಾಡದ ಕೃಷಿ ವಿಶ್ವವಿದ್ಯಾಲಯದಲ್ಲಿ 1996ರಲ್ಲೇ ಡಾ.ಗೀತಾ ಮಹಾಲೆ ಅವರು ಸಂಶೋಧನೆ ನಡೆಸಿದ್ದರು. ಅಚ್ಚು ಹಾಕುವ (ಫ್ಯಾಬ್ರಿಕ್ ಪ್ರಿಂಟಿಂಗ್) ವಿಧಾನದಲ್ಲಿಯೂ ಈ ಬಣ್ಣ ಬಳಕೆಯಾಗುತ್ತಿರುವುದು ಹೊಸ ಬೆಳವಣಿಗೆ.

‘ಅಡಿಕೆಯ ಚೊಗರಿನ ದ್ರವರೂಪದ ಬಣ್ಣ ಬಳಸಿ ಬಟ್ಟೆಗೆ ಅಚ್ಚುಹಾಕುವ ಪ್ರಯೋಗವನ್ನು ನಾವೂ ಆರಂಭಿಸಿದ್ದೇವೆ’ ಎಂದು ಗದಗ ಜಿಲ್ಲೆಯ ಹುಲಕೋಟಿಯ ರೂರಲ್ ಎಂಜಿನಿಯರಿಂಗ್ ಕಾಲೇಜಿನ ಟೆಕ್ಸ್‌ಟೈಲ್ ತಂತ್ರಜ್ಞಾನ ವಿಭಾಗ ಮುಖ್ಯಸ್ಥ ಪ್ರೊ. ಎಲ್.ಆರ್. ಸೋಮನಗೌಡರ ‘ಪ್ರಜಾವಾಣಿ’ಗೆ ತಿಳಿಸಿದರು.

ಶಾಸಕರ ಕಾರಿನಲ್ಲಿ ತೆರಳಿದ 'ಸೈಲೆಂಟ್' ● ಬಂಧನ ಕೈಬಿಟ್ಟ ಪೊಲೀಸರು!

ಬಿಜೆಪಿ ಸಂಸದರ ಜೊತೆ ರೌಡಿ ಸುನೀಲ್ ಪ್ರತ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಸಿಬಿ ಪೊಲೀಸರು ಮನೆ ಮೇಲೆ ದಾಳಿ ನಡೆಸಿದ್ದ ವೇಳೆ ನಾಪತ್ತೆಯಾಗಿದ್ದ ರೌಡಿ ಸೈಲೆಂಟ್ ಸುನೀಲ್, ಚಾಮರಾಜಪೇಟೆಯಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ಬಿಜೆಪಿ ಮುಖಂಡರ ಜೊತೆ ಪ್ರತ್ಯಕ್ಷನಾಗಿದ್ದಾನೆ. ಈ ಕಾರ್ಯಕ್ರಮದ ವಿಡಿಯೊ ಹಾಗೂ ಫೋಟೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

ಸೈಲೆಂಟ್ ಸುನೀಲ್ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಭದ್ರತೆ ನೀಡಿದ್ದ ಪೊಲೀಸರ ವರ್ತನೆಗೆ ಗರಂ ಆಗಿರುವ ಕಮಿಷನರ್ ಪ್ರತಾಪ್ ರೆಡ್ಡಿ, ಘಟನೆ ಬಗ್ಗೆ ಸ್ಪಷ್ಟನೆ ಸಹಿತ ಉತ್ತರ ನೀಡುವಂತೆ ಸೂಚಿಸಿದ್ದಾರೆಂದು ಗೊತ್ತಾಗಿದೆ.

ಮನೆಯಲ್ಲಿ ಪರಿಶೀಲಿಸಿದ್ದ ಸಿಸಿಬಿ: ಅಪರಾಧ ಚಟುವಟಿಕೆಗಳ ಮೇಲೆ ನಿಗಾ ವಹಿಸಿದ್ದ ಸಿಸಿಬಿ ಪೊಲೀಸರು, ಮುಂಜಾಗ್ರತಾ ಕ್ರಮವಾಗಿ ನಗರದ ಹಲವು ರೌಡಿಗಳ ಮನೆಗಳ ಮೇಲೆ ನ. 23ರಂದು ದಾಳಿ ಮಾಡಿದ್ದರು.

ಸೈಲೆಂಟ್ ಸುನೀಲ್ ಹಾಗೂ ಮತ್ತೊಬ್ಬ ರೌಡಿ ಒಂಟೆ ರೋಹಿತ್‌ನ ಕೊಡಿಗೇಹಳ್ಳಿ ಮನೆಗಳಿಗೂ ಹೋಗಿದ್ದ ಪೊಲೀಸರು, ಪರಿಶೀಲನೆ ನಡೆಸಿದ್ದರು. ಸುನೀಲ್‌ನ ಮನೆಯಲ್ಲಿ ಪತ್ನಿ ಮಾತ್ರ ಇದ್ದರು. 'ದಾಳಿ ಮಾಡಲು ವಾರಂಟ್ ಇದೆಯಾ' ಎಂದು ಪತ್ನಿ ಪ್ರಶ್ನಿಸಿದ್ದರು. ಮನೆಯಲ್ಲೆಲ್ಲ ಹುಡುಕಾಡಿದರೂ ಸುನೀಲ್ ಪತ್ತೆಯಾಗಿರಲಿಲ್ಲ. ಪರಾರಿಯಾಗಿರಬಹುದೆಂದು ಪೊಲೀಸರು ವಾಪಸು ಬಂದಿದ್ದರು.

ಮರುದಿನವೇ ಎಲ್ಲ ರೌಡಿಗಳಿಗೂ ನೋಟಿಸ್ ನೀಡಿ, ವಿಚಾರಣೆಗೆ ಬರುವಂತೆ ಸೂಚಿಸಿದ್ದರು. ಆದರೆ, ಕೆಲವರಷ್ಟೇ ವಿಚಾರಣೆಗೆ ಬಂದು ಮುಚ್ಚಳಿಕೆ ಬರೆದುಕೊಟ್ಟು ಹೋಗಿದ್ದರು. ಸೈಲೆಂಟ್ ಸುನೀಲ್ ಮಾತ್ರ ಬಂದಿರಲಿಲ್ಲ. ಆತನಿಗಾಗಿ ಹುಡುಕಾಟ ಮುಂದುವರಿದಿತ್ತು.

ಸಿಸಿಬಿ ಕಚೇರಿ ಬಳಿಯೇ ಕಾರ್ಯಕ್ರಮ: ಚಾಮರಾಜಪೇಟೆಯ ಮುಖ್ಯರಸ್ತೆಯಲ್ಲಿ ಸಿಸಿಬಿ ಕಚೇರಿ ಇದೆ. ಅದರ ಸಮೀಪದಲ್ಲಿರುವ 5ನೇ ಅಡ್ಡರಸ್ತೆಯ ಬಿ.ಎಸ್. ವೆಂಕಟರಾಮ್ ಕಲಾಭವನದಲ್ಲಿ ನ. 27ರಂದು ಸೈಲೆಂಟ್ ಸುನೀಲ್ ಬೃಹತ್ ರಕ್ತದಾನ ಶಿಬಿರ ಕಾರ್ಯಕ್ರಮ ಹಮ್ಮಿಕೊಂಡಿದ್ದ.

ಇದೇ ಕಾರ್ಯಕ್ರಮದಲ್ಲಿ ಸಂಸದರಾದ ಪಿ.ಸಿ. ಮೋಹನ್, ತೇಜಸ್ವಿಸೂರ್ಯ, ಶಾಸಕ ಉದಯ ಗರುಡಾಚಾರ್ ಮುಂತಾದವರು ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಸುನೀಲ್ ಇರುವ ಮಾಹಿತಿ ತಿಳಿಯುತ್ತಿದ್ದಂತೆ ಸಿಸಿಬಿ ಪೊಲೀಸರು ಸ್ಥಳಕ್ಕೆ ಹೋಗಿದ್ದರು. ಬಿಜೆಪಿ ಮುಖಂಡರ ಪಕ್ಕದಲ್ಲಿ ಕುಳಿತಿದ್ದರಿಂದ, ಕೆಲ ಹೊತ್ತಿನ ನಂತರ ಬಂಧಿಸೋಣವೆಂದು ಸುಮ್ಮನಾಗಿದ್ದರು. ಕಾರ್ಯಕ್ರಮ ಮುಗಿಯುತ್ತಿದ್ದಂತೆ ಶಾಸಕ ಉದಯ್ ಗರುಡಾಚಾರ್ ಅವರ ಕಾರನ್ನು ಹತ್ತಿ ಸೈಲೆಂಟ್ ಸುನೀಲ್ ಹೊರಟು ಹೋದನೆಂದು ಸಿಸಿಬಿ ಮೂಲಗಳು ಹೇಳಿವೆ.

17 ಪ್ರಕರಣಗಳಲ್ಲಿ ಆರೋಪಿ: 'ಬೆಕ್ಕಿನ ಕಣ್ಣು ರಾಜೇಂದ್ರ ಕೊಲೆ ಸೇರಿ 17 ಪ್ರಕರಣಗಳಲ್ಲಿ ಆರೋಪಿ ಆಗಿದ್ದ ಸೈಲೆಂಟ್ ಸುನೀಲ್‌ನ ಹೆಸರು ಹಲವು ಠಾಣೆಗಳ ರೌಡಿಪಟ್ಟಿಯಲ್ಲಿದೆ. ತಮ್ಮ ವಿರುದ್ಧದ 17 ಪ್ರಕರಣಗಳಿಗೂ ಸುನೀಲ್, ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾನೆ. ಯಾವುದೇ ವಾರಂಟ್‌ಗಳು ಬಾಕಿ ಇಲ್ಲ. ಬಿಬಿಎಂಪಿ ಕಸ ಸಾಗಣೆ ಹಾಗೂ ಇತರೆ ಕೆಲಸಗಳಲ್ಲಿ ತೊಡಗಿಸಿಕೊಂಡು ಹಣ ಮಾಡುತ್ತಿದ್ದಾನೆ. ಈಗ ಬಿಜೆಪಿ ಸೇರಿ ರಾಜಕೀಯಕ್ಕೆ ಬರಲು ಯೋಚಿಸುತ್ತಿದ್ದಾನೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

ಬಿಜೆಪಿಯವರಿಗೆ ರೌಡಿ ಸಿಕ್ಕಿದ್ದು ಹೇಗೆ: ಕಾಂಗ್ರೆಸ್ ಪ್ರಶ್ನೆ

'ಕ್ರಿಮಿನಲ್‌ಗಳೊಂದಿಗೆ ಬಿಜೆಪಿಯ ನೆಂಟಸ್ತಿಕೆ ಇರುವಾಗ ರಾಜ್ಯದಲ್ಲಿ ಅಪರಾಧ ಪ್ರಕರಣಗಳ ಸಂಖ್ಯೆ ಏರದಿರುತ್ತದೆಯೇ? ರೌಡಿಗಳನ್ನು ಹಿಡಿಯುವ ಯೋಗ್ಯತೆ ನಿಮ್ಮ ಇಲಾಖೆಗೆ ಇಲ್ಲವೇ ಅಥವಾ ನೀವೇ ಪೊಲೀಸರನ್ನು ಕಟ್ಟಿಹಾಕಿದ್ದೀರಾ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ರಾಜ್ಯ ಕಾಂಗ್ರೆಸ್ ಘಟಕ ಪ್ರಶ್ನಿಸಿದೆ.

'ಸಿಸಿಬಿ ಪೊಲೀಸರ ಕೈಗೆ ಸಿಗದ ರೌಡಿ ಬಿಜೆಪಿ ನಾಯಕರ ಕೈಗೆ ಸಿಕ್ಕಿದ್ದು ಹೇಗೆ? ಬಿಜೆಪಿಯ ಕೃಪಾಕಟಾಕ್ಷದಿಂದ 'ಸೈಲೆಂಟ್ ಸುನೀಲ್ ಎಂಬ ರೌಡಿ ಮುಂದೆ ಈಗ ಪೊಲೀಸರೇ ಸೈಲೆಂಟ್ ಆಗಿದ್ದಾರೆ. 'ಸೈಲೆಂಟ್ ಸುನೀಲ್ ಬಿಜೆಪಿ ನಾಯಕರೊಂದಿಗೆ ವೇದಿಕೆಯಲ್ಲಿದ್ದಾಗ ಅಲ್ಲಿ ಪೊಲೀಸರು ಇರಲಿಲ್ಲವೇ? ಬಂಧಿಸದಂತೆ ಪೊಲೀಸರನ್ನು ತಡೆದವರು ಯಾರು? ಪೊಲೀಸರಿಗಿಂತ ರೌಡಿಗಳೇ ಪ್ರಭಾವಿಗಳಾದರೆ' ಎಂದೂ ಕೆಣಕಿದೆ.

'ಸುನೀಲ್ ನನ್ನ ಸ್ನೇಹಿತ, ರೌಡಿ ಅನ್ನೋದು ಗೊತ್ತಿಲ್ಲ'

'ಸುನೀಲ್ ಹಲವು ವರ್ಷಗಳಿಂದ ಗೊತ್ತು. ಸ್ನೇಹಿತನೂ ಹೌದು. ಆದರೆ ಆತನೇ ಸೈಲೆಂಟ್ ಸುನೀಲ್ ಅಂತ ನನಗೆ ಗೊತ್ತಿಲ್ಲ' ಎಂದು ಚಿಕ್ಕಪೇಟೆ ಕ್ಷೇತ್ರದ ಬಿಜೆಪಿ ಶಾಸಕ ಉದಯ್ ಗರುಡಾಚಾರ್ ಪ್ರತಿಕ್ರಿಯಿಸಿದ್ದಾರೆ.

'ರಕ್ತದಾನ ಶಿಬಿರ ಕಾರ್ಯಕ್ರಮಕ್ಕೆ ನನ್ನನ್ನು ಕರೆದಿದ್ದರು. ಒಳ್ಳೆಯ ಕಾರ್ಯಕ್ರಮ ಅಂತ ಹೋಗಿದ್ದೆ. ಆದರೆ, ಸುನೀಲ್ ನನ್ನ ಜತೆ ಕಾರಿನಲ್ಲಿ ಬಂದಿದ್ದ ಎಂಬುದು ಸತ್ಯವಲ್ಲ. ಅವನ ಹಿನ್ನೆಲೆ ಗೊತ್ತಿಲ್ಲ' ಎಂದರು.

ಸಚಿವ ಅಶ್ವತ್ಥನಾರಾಯಣ ಸಮಜಾಯಿಷಿ...

'ಸಮಾಜದಲ್ಲಿ ಎಲ್ಲರಿಗೂ ಒಳ್ಳೆಯ ರೀತಿಯಲ್ಲಿ ಬದುಕಿ ಬಾಳಲು ಅವಕಾಶವಿದೆ. ಕಾನೂನಿನ ಪ್ರಕಾರ ಯಾರಾದರೂ ತಪ್ಪಿತಸ್ಥರಾಗಿದ್ದರೆ ಅವರು ತಪ್ಪಿತಸ್ಥರೇ. ಅವರನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

'ಸೈಲೆಂಟ್ ಸುನೀಲ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಿಜೆಪಿ ನಾಯಕರು ಭಾಗವಹಿಸಿದ್ದರ ಬಗೆಗೆ ಚರ್ಚೆ ನಡೆಯುತ್ತಿದೆ. ಯಾವುದೇ ರೀತಿಯ ಚಾರ್ಜ್‌ಶೀಟ್ ಆಗಿದ್ದರೆ ಅಥವಾ ಶಿಕ್ಷೆಯಲ್ಲಿದ್ದರೆ ಒಪ್ಪಿಕೊಳ್ಳಬಹುದು. ಏನೂ ಇಲ್ಲದ ವ್ಯಕ್ತಿಗಳಿಗೆ ಬದುಕಲು ಅವಕಾಶ ನೀಡದೇ ನಿಂದಿಸುವುದು ಸರಿಯಲ್ಲ. ಚಾರ್ಜ್‌ಶೀಟ್ ಆಗಿದ್ದರೆ ಚುನಾವಣೆಯಲ್ಲಿ ಸ್ಪರ್ಧಿಸಲೂ ಆಗುವುದಿಲ್ಲ' ಎಂದು ತಿಳಿಸಿದರು.

ಬಟ್ಟೆ ವ್ಯಾಪಾರಿಯಿಂದ ₹43 ಲಕ್ಷ ಸುಲಿಗೆ

ಹನಿಟ್ರ್ಯಾಪ್: ಅಂಗಡಿಯಲ್ಲಿ ಕೆಲಸಕ್ಕಿದ್ದ ಯುವತಿ, ಸಂಬಂಧಿಕರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ್ತಪೇಟೆಯ ಬಟ್ಟೆ ಅಂಗಡಿಯೊಂದರ ಮಾಲೀಕರನ್ನು ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿಸಿ ₹43 ಲಕ್ಷ ಸುಲಿಗೆ ಮಾಡಲಾಗಿದ್ದು, ಅಂಗಡಿಯಲ್ಲಿ ಕೆಲಸಕ್ಕಿದ್ದ ಯುವತಿ ಸೇರಿ ಮೂವರ ವಿರುದ್ಧ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'43 ವರ್ಷದ ಬಟ್ಟೆ ವ್ಯಾಪಾರಿ ದೂರು ನೀಡಿದ್ದಾರೆ. ಆರೋಪಿಗಳು ಎನ್ನಲಾದ 26 ವರ್ಷದ ಯುವತಿ, ಅವರ ಇಬ್ಬರು ಸಂಬಂಧಿಕರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹಲವು ವರ್ಷಗಳಿಂದ ಬಟ್ಟೆ ಅಂಗಡಿ ನಡೆಸುತ್ತಿರುವ ದೂರುದಾರ, 2020ರಲ್ಲಿ ಯುವತಿಯನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದರು. ಕೆಲ ತಿಂಗಳ ನಂತರ ಸಹೋದರನಿಗೆ ಅಪಘಾತವಾಗಿರುವುದಾಗಿ ಹೇಳಿದ್ದ ಯುವತಿ, ₹ 2 ಲಕ್ಷ ಸಾಲ ಪಡೆದಿದ್ದರು. ಹಲವು ತಿಂಗಳಾದರೂ ಹಣ ವಾಪಸು ಕೊಟ್ಟಿರಲಿಲ್ಲ. ಹಣ ನೀಡುವುದಾಗಿ ಹೇಳುತ್ತಲೇ ದೂರುದಾರರ ಜೊತೆ ಸಲುಗೆ ಬೆಳೆಸಿದ್ದ ಯುವತಿ, ಹಲವು ಬಾರಿ ಖಾಸಗಿ ಕ್ಷಣಗಳನ್ನು ಕಳೆದಿದ್ದರು.'

'ಸಂಬಂಧಿಕರ ಜೊತೆ ಮಾತನಾಡಬೇಕೆಂದು ಹೇಳಿದ್ದ ಯುವತಿ, ದೂರುದಾರರನ್ನು ಕೆ.ಜಿ. ರಸ್ತೆಯಲ್ಲಿರುವ ಹೋಟೆಲೊಂದಕ್ಕೆ ಕರೆಸಿದ್ದರು. ಅದೇ ಸಂದರ್ಭದಲ್ಲೇ ಹೋಟೆಲ್‌ಗೆ ಬಂದಿದ್ದ ಸಂಬಂಧಿಕರಿಬ್ಬರು, 'ಯುವತಿ ಜೊತೆ ಸಂಬಂಧ ಇಟ್ಟುಕೊಂಡಿದ್ದೀಯಾ. ಇದಕ್ಕೆ ಸಂಬಂಧಪಟ್ಟ ಪುರಾವೆಗಳು ನಮ್ಮ ಬಳಿ ಇವೆ. ಕೇಳಿದಷ್ಟು ಹಣ ಕೊಡದಿದ್ದರೆ ನಿಮ್ಮ ಮಾನ ಹರಾಜು ಹಾಕುತ್ತೇವೆ' ಎಂದು ಬ್ಲ್ಯಾಕ್‌ಮೇಲ್ ಮಾಡಿದ್ದರು. ಇದರಿಂದ ಹೆದರಿದ್ದ ದೂರುದಾರ, ಹಂತ ಹಂತವಾಗಿ ₹ 43 ಲಕ್ಷ ನೀಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿಗಳು ಮತ್ತಷ್ಟು ಹಣಕ್ಕೆ ಬೇಡಿಕೆ ಇರಿಸಿದ್ದರು. ಬೇಸತ್ತ ವ್ಯಾಪಾರಿ ಠಾಣೆಗೆ ಬಂದು ದೂರು ನೀಡಿದ್ದಾರೆ. ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಹೇಳಿವೆ.

ಅಪಘಾತ: 9 ವರ್ಷಗಳ ಬಳಿಕ ಸಿಕ್ಕಿಬಿದ್ದ ಅಪರಾಧಿ

ಬೆಂಗಳೂರು: ಎನ್.ಆರ್. ರಸ್ತೆಯಲ್ಲಿ ಅಪಘಾತವನ್ನುಂಟುಮಾಡಿ ಹನುಮಂತಪ್ಪ (43) ಎಂಬುವರ ಸಾವಿಗೆ ಕಾರಣನಾಗಿ ತಲೆಮರೆಸಿಕೊಂಡಿದ್ದ ಅಪರಾಧಿ ರಘುನಾಥ್ ಪಾಸ್ವಾನ್ (32), ಒಂಬತ್ತು ವರ್ಷಗಳ ಬಳಿಕ ಹಲಸೂರು ಗೇಟ್ ಸಂಚಾರ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

'ಹೊಯ್ಸಳ ನಗರದ ನಿವಾಸಿ ರಘುನಾಥ್, 2009ರ ನ. 17ರಂದು ತನ್ನ ಕಾರನ್ನು ಅತಿ ವೇಗವಾಗಿ ನಿರ್ಲಕ್ಷ್ಯದಿಂದ ಚಲಾಯಿಸಿದ್ದ. ಇದರಿಂದಾಗಿ ಕಾರು, ಪಾದಚಾರಿ ಹನಮಂತಪ್ಪ ಅವರಿಗೆ ಗುದ್ದಿತ್ತು. ತೀವ್ರ ಗಾಯಗೊಂಡು ಹನುಮಂತಪ್ಪ ಮೃತಪಟ್ಟಿದ್ದರು' ಎಂದು ಪೊಲೀಸರು ಹೇಳಿದರು.

'ರಘುನಾಥ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ವಿಚಾರಣೆ ನಡೆಸಿದ್ದ ನ್ಯಾಯಾಲಯ, ಆರು ತಿಂಗಳು ಕಠಿಣ ಕಾರಾಗೃಹ ಶಿಕ್ಷೆ ಸಹ ವಿಧಿಸಿತ್ತು. ಇದನ್ನು ಪ್ರಶ್ನಿಸಿದ್ದ ರಘುನಾಥ್, ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದ. ಶಿಕ್ಷೆಯನ್ನು ಹೈಕೋರ್ಟ್ ಎತ್ತಿಹಿಡಿದಿತ್ತು.'

'ಜೈಲಿಗೆ ಹೋಗಿ ಶಿಕ್ಷೆ ಅನುಭವಿಸಬೇಕಿದ್ದ ರಘುನಾಥ್, ಏಕಾಏಕಿ ತಲೆಮರೆಸಿಕೊಂಡಿದ್ದ. ಈತನ ಪತ್ತೆಗಾಗಿ ಹಲವು ವರ್ಷಗಳಿಂದ ತನಿಖೆ ಮುಂದುವರಿಸಲಾಗಿತ್ತು. ಇತ್ತೀಚೆಗೆ ಸಿಕ್ಕಿಬಿದ್ದ ಈತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಅಲ್ಲಿಂದ ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಬಿಟ್ಟು ಬರಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಎಫ್‌ಡಿಎ ಆಮಿಷ: ₹ 6.55 ಲಕ್ಷ ವಂಚನೆ

ಬೆಂಗಳೂರು: ಸರ್ಕಾರಿ ಕಾಲೇಜಿನಲ್ಲಿ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹುದ್ದೆ ಕೊಡಿಸುವುದಾಗಿ ಹೇಳಿ ₹ 6.55 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಜಯನಗರ ಒಂದನೇ ಹಂತದ ನಿವಾಸಿ ಕೆ. ಸತೀಶ್ ಅವರು ವಂಚನೆ ಸಂಬಂಧ ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ಆರ್.ಪಿ. ಉಮಾದೇವಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಸದ್ಯ ಅವರು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಸತೀಶ್ ಅವರ ಮಗ ಎಂಜನಿಯರಿಂಗ್ ವ್ಯಾಸಂಗ ಮಾಡಿದ್ದು, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಮಗನಿಗೆ ಸರ್ಕಾರಿ ಕೆಲಸ ಕೊಡಿಸುವುದಕ್ಕಾಗಿ ಸತೀಶ್ ಪ್ರಯತ್ನಿಸುತ್ತಿದ್ದರು. ಅವರಿಗೆ ಸ್ನೇಹಿತರೊಬ್ಬರ ಮೂಲಕ ಆರೋಪಿ ಉಮಾದೇವಿ ಪರಿಚಯವಾಗಿತ್ತು. ಕಾಲೇಜೊಂದರ ಪ್ರಾಂಶುಪಾಲರೆಂದು ಹೇಳಿದ್ದ ಉಮಾದೇವಿ, ತಮಗೆ ಸರ್ಕಾರದ ಹಿರಿಯ ಅಧಿಕಾರಿಗಳ ಪರಿಚಯವಿರುವುದಾಗಿ ಹೇಳಿದ್ದರು. ಹಣ ನೀಡಿದರೆ, ಸರ್ಕಾರಿ ಕಾಲೇಜಿನಲ್ಲಿ ಎಫ್‌ಡಿಎ ಹುದ್ದೆ ಕೊಡಿಸುವುದಾಗಿ ಆಮಿಷವೊಡ್ಡಿದ್ದರು. ನಂತರ, ಹಂತ ಹಂತವಾಗಿ ಸತೀಶ್ ಅವರಿಂದ ₹ 6.55 ಲಕ್ಷ ಪಡೆದು ವಂಚಿಸಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಮಧುಮೇಹ: ಜಾಗೃತಿ ಇಂದು

ಬೆಂಗಳೂರು: ಮಧುಮೇಹ ನಿಯಂತ್ರಣ ಹಾಗೂ ಜೀವನ ಶೈಲಿ ಕುರಿತ ಜಾಗೃತಿ ಕಾರ್ಯಕ್ರಮವನ್ನು ಬಿಜಿಎಸ್ ಗ್ಲೋಬಲ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನ ಜನರಲ್ ಮೆಡಿಸಿನ್ ವಿಭಾಗದಿಂದ ನ.29ರಂದು ಆಯೋಜಿಸಲಾಗಿದೆ.

ವಿಶ್ವ ಮಧುಮೇಹ ದಿನದ ಅಂಗವಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜನರಲ್ ಮೆಡಿಸಿನ್ ವಿಭಾಗದ ಮುಖ್ಯಸ್ಥರಾದ ಡಾ.ಜಿ. ಬಾಲಚಂದ್ರ ತಿಳಿಸಿದ್ದಾರೆ.

ಅಂದು ಬೆಳಿಗ್ಗೆ 10ಗಂಟೆಗೆ ಬಿಜಿಎಸ್ ಜಿಮ್ಸ್ ಆಸ್ಪತ್ರೆಯ ನೆಲಮಹಡಿಯಲ್ಲಿ ಕಾರ್ಯಕ್ರಮ ನಡೆಯಲಿದೆ. ಮಧುಮೇಹಿಗಳು ಸೇವಿಸಬಹುದಾದ ಮತ್ತು ಸೇವಿಸಲೇಬಾರದ ಆಹಾರ ಪದಾರ್ಥಗಳ ಪ್ರದರ್ಶನ ಆಯೋಜಿಸಲಾಗಿದೆ. ಜತೆಗೆ, ತಜ್ಞ ವೈದ್ಯರು ಆರೋಗ್ಯ ರಕ್ಷಣೆ ಬಗ್ಗೆ ಮಾಹಿತಿ ನೀಡಲಿದ್ದಾರೆ.

ಏಷ್ಯಾ ಪೆಸಿಫಿಕ್ ಸಾಹಿತ್ಯೋತ್ಸವದಲ್ಲಿ ದೇವದತ್ತ ಪಟ್ಟನಾಯಕ್ ಸಲಹೆ

'ಸಾಹಿತ್ಯದ ಅಭಿರುಚಿ ಬೆಳೆಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

ಆನೇಕಲ್: ಪಟ್ಟಣ ಸಮೀಪದ ಅಲಯನ್ಸ್ ವಿಶ್ವವಿದ್ಯಾಲಯದಲ್ಲಿ ಏಷ್ಯಾ ಪೆಸಿಫಿಕ್ ಸಾಹಿತ್ಯೋತ್ಸವನ್ನು ಲೇಖಕ ದೇವದತ್ತ ಪಟ್ಟನಾಯಕ್ ಸೋಮವಾರ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು ಸಾಹಿತ್ಯ, ಸಂಸ್ಕೃತಿ ಈ ದೇಶದ ಆಸ್ತಿಯಾಗಿದೆ. ಹಲವು ದಶಕಗಳು ಕಳೆದರೂ ಪರಂಪರೆ, ಸಾಂಸ್ಕೃತಿಕ ವಾತಾವರಣ ಪ್ರಚಲಿತದಲ್ಲಿದೆ. ಯುವ ಸಮುದಾಯ ಸಾಹಿತ್ಯದ ಅಭಿರುಚಿಯನ್ನು ಬೆಳೆಸಿಕೊಳ್ಳಬೇಕು. ಪುರಾಣಗಳ ಮಹತ್ವವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಲಯನ್ಸ್ ವಿಶ್ವವಿದ್ಯಾಲಯದ ಸಹ ಕುಲಪತಿ ಅಭಯ್ ಜಿ. ಚೆಬ್ಬಿ ಮಾತನಾಡಿ, ಸಾಹಿತ್ಯವನ್ನು ಸಮುದಾಯಕ್ಕೆ ಪಸರಿಸುವ ನಿಟ್ಟಿನಲ್ಲಿ ಏಷ್ಯಾ ಪೆಸಿಫಿಕ್ ಸಾಹಿತ್ಯೋತ್ಸವ ಆಯೋಜಿಸಲಾಗಿದೆ. ವಿವಿಧ ದೇಶದ ವಿಷಯ ತಜ್ಞರು ಈ ಹಬ್ಬದಲ್ಲಿ ಪಾಲ್ಗೊಂಡಿದ್ದಾರೆ. ಅವರ ಅನುಭವಗಳು ಇಂದಿನ ಯುವಪೀಳಿಗೆಗೆ ಆದರ್ಶವಾಗಲಿದೆ. ಸಾಹಿತ್ಯ ಹಬ್ಬದ ಪ್ರಯುಕ್ತ ಕಾರ್ಯಾಗಾರ ಆಯೋಜಿಸಲಾಗಿದೆ ಎಂದರು.


ಆನೇಕಲ್ ಸಮೀಪದ ಅಲಯನ್ಸ್ ವಿಶ್ವವಿದ್ಯಾಲಯದಲ್ಲಿ ನಡೆದ ಏಷ್ಯಾ ಪೆಸಿಫಿಕ್ ಸಾಹಿತ್ಯೋತ್ಸವದಲ್ಲಿ ಲೇಖಕ ದೇವದತ್ತ ಪಟ್ಟನಾಯಕ್ ಅವರನ್ನು ಸನ್ಮಾನಿಸಲಾಯಿತು

ಸಾಹಿತ್ಯೋತ್ಸವ ಅಂಗವಾಗಿ ಸೋಮವಾರ ಪತ್ರಕರ್ತ ವಿಕ್ಟರ್ ಮಲೆಟ್ ಅವರು ಜೀವ ನದಿಗಳ ಕುರಿತು ಮಾತನಾಡಿದರು. 'ಕವಿತೆ ಮತ್ತು ಕಾವ್ಯ' ವಿಚಾರ ಸಂಕಿರಣದಲ್ಲಿ ಶಿನಿ ಅಂಥೋಣಿ, ಜೋಸ್ ವರ್ಗೀಸ್, ಜೆನ್ನಿಫರ್, ಮಾರ್ಷಲ್ ಗಾಸ್, ರೆಬಾಕಾ ಪಾಲ್ಗೊಂಡಿದ್ದರು.

'ಭಾರತದಲ್ಲಿ ಕಾದಂಬರಿಗಳ ಪ್ರಕಟಣೆ' ವಿಚಾರ ಸಂಕಿರಣದಲ್ಲಿ ಲೇಖಕ ಅಶ್ವನಿ ಕುಮಾರ್, ಅರಿಂದಮ್ ರಾಯ್, ಬಿಟನ್ ಚಕ್ರಬರ್ತಿ, ನೀತಾ ಗುಪ್ತಾ ಪಾಲ್ಗೊಂಡಿದ್ದರು. 'ದಿ ಆರ್ಟ್ ಆಫ್ ಕ್ಯಾಲಿಗ್ರಫಿ' ಕುರಿತ ಕಾರ್ಯಾಗಾರ ಆಯೋಜಿಸಲಾಗಿತ್ತು. ಲೇಖಕ ಟಿಮ್ ಬಕರ್ ಅವರು ಸರ್ಫ್ ರೈಟಿಂಗ್ ಸಂವಾದದಲ್ಲಿ ಪಾಲ್ಗೊಂಡಿದ್ದರು.

ಕುಲಪತಿ ಡಾ.ಅನುಬಾ ಸಿಂಗ್, ಡಾ.ಅನಿರುದ್ಧ್ ಶ್ರೀಧರ್, ಸುರೇಖಾ ಶೆಟ್ಟಿ ಹಾಜರಿದ್ದರು.

ಬಿಬಿಎಂಪಿ: ಡಿಸೆಂಬರ್ 10ರೊಳಗೆ 100 ಕ್ಲಿನಿಕ್ ಆರಂಭಿಸಲು ಪ್ರಯತ್ನ

'ನಮ್ಮ ಕ್ಲಿನಿಕ್': ವೈದ್ಯರ ನಿರಾಸಕ್ತಿ

• ಆರ್. ಮಂಜುನಾಥ್



ಪ್ರಜಾವಾಣಿ ವಿಶೇಷ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಆರಂಭವಾಗುವ 'ನಮ್ಮ ಕ್ಲಿನಿಕ್'ನತ್ತ ವೈದ್ಯರು ಆಸಕ್ತಿ ತೋರುತ್ತಿಲ್ಲ. ಮೂರು ತಿಂಗಳಿಂದ ನೇಮಕ ಪ್ರಕ್ರಿಯೆ ನಡೆಯುತ್ತಿದ್ದರೂ ಈವರೆಗೆ 80 ವೈದ್ಯರಷ್ಟೇ ನೇಮಕವನ್ನು ಒಪ್ಪಿಕೊಂಡಿದ್ದಾರೆ.

ಬಿಬಿಎಂಪಿಯ 243 ವಾರ್ಡ್‌ಗಳಲ್ಲೂ 'ನಮ್ಮ ಕ್ಲಿನಿಕ್' ಸ್ಥಾಪಿಸಲು ಉದ್ದೇಶಿಸಲಾಗಿದೆ. ಪ್ರಥಮ ಹಂತವಾಗಿ ಡಿ.10ರೊಳಗೆ 100 ಕ್ಲಿನಿಕ್‌ಗಳಿಗೆ ಚಾಲನೆ ನೀಡಲು ಬಿಬಿಎಂಪಿ ಆರೋಗ್ಯ ವಿಭಾಗ ಪ್ರಯತ್ನಪಡುತ್ತಿದೆ. ಕಟ್ಟಡ ಕಾಮಗಾರಿ ಅಂತಿಮ ಹಂತದಲ್ಲಿದ್ದರೂ ಅಗತ್ಯ ಇರುವಷ್ಟು ವೈದ್ಯರು ಮಾತ್ರ ಸಿಗುತ್ತಿಲ್ಲ.

ಪ್ರತಿ 'ನಮ್ಮ ಕ್ಲಿನಿಕ್'ನಲ್ಲಿ ವೈದ್ಯ, ನರ್ಸಿಂಗ್ ಸಿಬ್ಬಂದಿ, ಲ್ಯಾಬ್ ಟೆಕ್ನೀಷಿಯನ್, ಸಹಾಯಕ ಹುದ್ದೆಗಳಿವೆ. ವೈದ್ಯರನ್ನು ಹೊರತುಪಡಿಸಿ ಇನ್ನುಳಿದ ಎಲ್ಲ ಹುದ್ದೆಗಳಿಗೂ ನೇಮಕವಾಗಿದೆ. ಅವರೆಲ್ಲ ಹಾಜರಾತಿಯನ್ನು ಖಚಿತಪಡಿಸಿದ್ದಾರೆ. ಆದರೆ, ವೈದ್ಯರು ಮಾತ್ರ 'ನಮ್ಮ ಕ್ಲಿನಿಕ್'ಗೆ ಆಸಕ್ತಿ ತೋರಿಲ್ಲ. ನೇಮಕಾತಿ ಆದೇಶ ಪಡೆದವರಲ್ಲಿ ಎಲ್ಲರೂ ಕರ್ತವ್ಯಕ್ಕೆ ಹಾಜರಾಗುವ ಬಗ್ಗೆ ಖಾತರಿ ವ್ಯಕ್ತಪಡಿಸಿಲ್ಲ. ವೈದ್ಯರಿಗೆ ₹47 ಸಾವಿರ, ನರ್ಸಿಂಗ್ ಹಾಗೂ ಲ್ಯಾಬ್ ಟೆಕ್ನೀಷಿಯನ್‌ಗೆ ತಲಾ ₹15 ಹಾಗೂ ಸಹಾಯಕರಿಗೆ ₹10 ಸಾವಿರ ವೇತನ ನಿಗದಿ ಮಾಡಲಾಗಿದೆ. ಸರ್ಕಾರಿ ಆಸ್ಪತ್ರೆಗಳಿಗೂ ವೈದ್ಯರು ಬರುತ್ತಿಲ್ಲ. ಅದರಂತೆಯೇ ಬಿಬಿಎಂಪಿ ಹೊಸದಾಗಿ ಆರಂಭಿಸಲಿರುವ 'ನಮ್ಮ ಕ್ಲಿನಿಕ್'ಗೂ ಆರಂಭದಲ್ಲೇ ವೈದ್ಯರ ಕೊರತೆ ಎದುರಾಗಿದೆ.

243 ವಾರ್ಡ್‌ಗಳಲ್ಲಿಯೂ 'ನಮ್ಮ ಕ್ಲಿನಿಕ್'ಗೆ ಸ್ಥಳವನ್ನು ಗುರುತಿಸಲಾಗಿದೆ. ನಾಲ್ಕು ಜನ ಸಿಬ್ಬಂದಿ ಇರುವ ಈ ಕ್ಲಿನಿಕ್‌ನಲ್ಲಿ ಪ್ರಾಥಮಿಕ ಚಿಕಿತ್ಸೆ ಹಾಗೂ ಪ್ರಾಥಮಿಕ ತಪಾಸಣೆಯ ಸಲಕರಣೆಗಳನ್ನು ಇರಿಸಲಾಗುತ್ತಿದೆ. ಕಟ್ಟಡ ಹಾಗೂ ಒಳಾಂಗಣ ವಿನ್ಯಾಸದ ಕಾಮಗಾರಿಗಳು ನಡೆಯುತ್ತಿವೆ. ಪ್ರಥಮ ಹಂತವಾಗಿ 100 ಕ್ಲಿನಿಕ್‌ಗಳು ಮಾತ್ರ ಡಿ.10ರೊಳಗೆ ಆರಂಭವಾಗಲಿದ್ದು, ಅವುಗಳ ಸಿದ್ಧತೆ ವೇಗ ಪಡೆದುಕೊಂಡಿದೆ. ಪ್ರತಿ ವಲಯದಲ್ಲಿ 10ರಿಂದ 15 ಕ್ಲಿನಿಕ್ ಆರಂಭವಾಗಲಿವೆ. ಇನ್ನುಳಿದ ಕ್ಲಿನಿಕ್‌ಗಳನ್ನು ಡಿಸೆಂಬರ್ ಅಂತ್ಯದಲ್ಲಿ ಆರಂಭಿಸಲು ಬಿಬಿಎಂಪಿ ಯೋಜಿಸಿದೆ. ಆದರೆ, ವೈದ್ಯರಿಲ್ಲದೆ ಕ್ಲಿನಿಕ್ ಆರಂಭಿಸಲು ಸಾಧ್ಯವಿಲ್ಲ. ಹೀಗಾಗಿ, ಎರಡನೇ ಹಂತದಲ್ಲಿ ಕ್ಲಿನಿಕ್‌ಗಳ ಆರಂಭ ಮುಂದಕ್ಕೆ ಹೋಗುವ ಸಾಧ್ಯತೆ ಇದೆ.

'ನಮ್ಮ ಕ್ಲಿನಿಕ್'ಗೆ ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದಲ್ಲಿ ನೇರವಾಗಿ ನೇಮಿಸಿಕೊಳ್ಳಲು ನ.28ರಂದು ಬಿಬಿಎಂಪಿ ಅರ್ಜಿ ಆಹ್ವಾನಿಸಿದೆ.

'ವೈದ್ಯರ ಕೊರತೆ ಎದುರಾಗಿರುವುದು ನಿಜ. ಎಂಬಿಬಿಎಸ್ ಮುಗಿಸಿದ ಬಹುತೇಕರು ಪಿಜಿಗೆ ಪ್ರಯತ್ನಪಡುತ್ತಿರುತ್ತಾರೆ. ನಾವು ಹೊಸಬರನ್ನೇ ತೆಗೆದುಕೊಳ್ಳುವುದು. ಸಂದರ್ಶನಗಳನ್ನು ನಡೆಸಿ 122 ಮಂದಿಗೆ ನೇಮಕಾತಿ ಪತ್ರ ನೀಡಿದ್ದೆವು. ಅದರಲ್ಲಿ ಎಲ್ಲರೂ ಒಪ್ಪಿಗೆ ಸೂಚಿಸಿಲ್ಲ' ಎಂದರು.

ಪರ್ಯಾಯ ಯೋಜನೆ...

'ವೈದ್ಯರ ನೇಮಕದ ಸಂಬಂಧ ಸಾಕಷ್ಟು ಪ್ರಕ್ರಿಯೆಗಳನ್ನು ಮುಗಿಸಿದ್ದೇವೆ. ಇನ್ನೂ ಹಲವು ರೀತಿಯ ಪ್ರಯತ್ನಗಳಾಗುತ್ತಿವೆ. ಪರ್ಯಾಯ ಯೋಜನೆಗಳತ್ತಲೂ ಯೋಚನೆ ಮಾಡುತ್ತಿದ್ದೇವೆ. ಎಲ್ಲ ವಾರ್ಡ್‌ಗಳಲ್ಲೂ ಜನರಿಗೆ ಆರೋಗ್ಯ ಸೇವೆ ಕೊಡಬೇಕು ಎಂಬುದು ನಮ್ಮ ಮೂಲ ಉದ್ದೇಶವಾಗಿದೆ' ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ. ತ್ರಿಲೋಕ ಚಂದ್ರ ಅವರು ಹೇಳಿದರು.

ವೈದ್ಯರ ನೇಮಕ

185; ಸಂದರ್ಶನಕ್ಕೆ ಬಂದವರು
122; ನೇಮಕಾತಿ ಆದೇಶ ಪಡೆದವರು
80; ನೇಮಕಾತಿ ಆದೇಶ ಒಪ್ಪಿದವರು

30 ವರ್ಷ ಮೇಲಿನವರಿಗೆ ಮಧುಮೇಹ ತಪಾಸಣೆ

ಬೆಂಗಳೂರು: ರಾಜ್ಯದ 'ನಮ್ಮ ಕ್ಲಿನಿಕ್' ಮೂಲಕ 30 ವರ್ಷ ವಯಸ್ಸು ಮೇಲ್ಪಟ್ಟ ಪ್ರತಿ ವ್ಯಕ್ತಿಗೂ ಮಧುಮೇಹದ ತಪಾಸಣೆ ಮಾಡಲಾಗುವುದು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

ಆರೋಗ್ಯ ಸಿಟಿ ಸಮಿಟ್‌ನಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಾಂಕ್ರಾಮಿಕವಲ್ಲದ ರೋಗಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಇದರ ನಿರ್ವಹಣೆಗಾಗಿ ವಿವಿಧ ನಗರಗಳಲ್ಲಿ 438 'ನಮ್ಮ ಕ್ಲಿನಿಕ್'ಗಳನ್ನು ಆರಂಭಿಸಲು ತೀರ್ಮಾನಿಸಲಾಗಿದೆ ಎಂದರು.

'ಕೊಳೆಗೇರಿ, ಬಡ ಜನರು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿ ಇಂತಹ ಕ್ಲಿನಿಕ್‌ಗಳನ್ನು ಆರಂಭಿಸಿ ಜನರಿಗೆ ತಪಾಸಣೆಗೆ ವ್ಯವಸ್ಥೆ ಮಾಡಲಾಗುತ್ತದೆ. ಒಟ್ಟು ಮಧುಮೇಹಿಗಳಲ್ಲಿ ಶೇ 75 ರಷ್ಟು ಜನ ಚಿಕಿತ್ಸೆಯನ್ನೇ ಪಡೆಯುತ್ತಿಲ್ಲ. ಆದ್ದರಿಂದ 30 ವರ್ಷ ವಯಸ್ಸು ಮೇಲ್ಪಟ್ಟ ಪ್ರತಿಯೊಬ್ಬರನ್ನು ತಪಾಸಣೆ ಮಾಡಿ ಮಧಮೇಹ ಪತ್ತೆ ಮಾಡಲು ಪ್ರಯತ್ನಿಸಲಾಗುತ್ತಿದೆ' ಎಂದು ಅವರು ತಿಳಿಸಿದರು.

'6,500 ಕ್ಕೂ ಅಧಿಕ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನು ಈಗಾಗಲೇ ಆರಂಭಿಸಲಾಗಿದೆ. ಇವುಗಳ ಮೂಲಕವೂ ಮಧುಮೇಹ ತಪಾಸಣೆ ಮಾಡಲಾಗುವುದು' ಎಂದೂ ತಿಳಿಸಿದರು.

'30 ವರ್ಷ ವಯಸ್ಸಿನ ಮಧುಮೇಹಿಯೊಬ್ಬರು ಗ್ಯಾಂಗ್ರೀನ್‌ನಿಂದ ಕಾಲಿಗೆ ಹಾನಿ ಮಾಡಿಕೊಂಡಿದ್ದರು. ಆದರೆ, ಅವರಿಗೆ ಮಧುಮೇಹ ಇದೆ ಎಂಬುದೇ ಗೊತ್ತಿರಲಿಲ್ಲ. ಇಂತಹ ನಿರ್ಲಕ್ಷ್ಯ, ಜಾಗೃತಿಯ ಕೊರತೆ ಎಲ್ಲೆಡೆ ಕಂಡು ಬರುತ್ತಿದೆ. ಪ್ರತಿ ವರ್ಷ ಆರೋಗ್ಯ ತಪಾಸಣೆಯನ್ನೂ ಕೂಡ ಮಾಡಿಕೊಳ್ಳುವುದಿಲ್ಲ. ಜನರು ವರ್ಷಕ್ಕೊಮ್ಮೆ ಕಡ್ಡಾಯವಾಗಿ ಸಂಪೂರ್ಣ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು' ಎಂದು ಸಚಿವರು ಸಲಹೆ ನೀಡಿದರು.

'ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಶೇ 50 ರಷ್ಟು ಜನರನ್ನು ಸಾಂಕ್ರಾಮಿಕವಲ್ಲದ ರೋಗಗಳ ತಪಾಸಣೆಗೆ ಒಳಪಡಿಸಲಾಗಿದೆ. ಮುಂದಿನ 18 ತಿಂಗಳಲ್ಲಿ ರಾಜ್ಯದ ಶೇ 100 ರಷ್ಟು ಜನರಿಗೆ ಆರೋಗ್ಯ ತಪಾಸಣೆ ಮಾಡಿಸಬೇಕು ಎಂಬುದು ನನ್ನ ಗುರಿಯಾಗಿದೆ' ಎಂದು ಸುಧಾಕರ್ ತಿಳಿಸಿದರು.

'ಕಾಶ್ಮೀರ್ ಫೈಲ್ಸ್' ಅಸಭ್ಯ, ಕೀಳು ಅಭಿರುಚಿಯ ಚಿತ್ರ'

ಪ್ರಜಾವಾಣಿ ವಾರ್ತೆ

ಪಣಜಿ: 'ಕಾಶ್ಮೀರ್ ಫೈಲ್ಸ್' ಅಸಭ್ಯ, ಕೀಳು ಅಭಿರುಚಿಯ ಚಿತ್ರ. ಪ್ರಚಾರದ ಉದ್ದೇಶದ ಈ ಚಿತ್ರವು ಭಾರತದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಸ್ಪರ್ಧಿಸಲು ಸೂಕ್ತವಾದುದಲ್ಲ' ಎಂದು ಐಎಫ್‌ಎಫ್‌ಐ ಅಂತರರಾಷ್ಟ್ರೀಯ ಸ್ಪರ್ಧೆ ವಿಭಾಗದ ತೀರ್ಪುಗಾರರಾದ ನಾಡವ್ ಲ್ಯಾಪಿಡ್ ಹೇಳಿದ್ದಾರೆ.

ಬಾಲಿವುಡ್ ನಿರ್ದೇಶಕ ವಿವೇಕ್ ಅಗ್ನಿಹೋತ್ರಿ ಈ ಚಿತ್ರದ ನಿರ್ದೇಶಕರು. ಇಲ್ಲಿ ನಡೆದ ಒಂಭತ್ತು ದಿನಗಳ ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವದ ಕಡೆಯ ದಿನವಾದ ಸೋಮವಾರ ಲ್ಯಾಪಿಡ್ ಈ ಮಾತು ಹೇಳಿದರು. ವಿವಾದಕ್ಕೆ ಕಾರಣವಾಗಿದ್ದ ಈ ಚಿತ್ರ ದೇಶವ್ಯಾಪಿ ತೀವ್ರ ಚರ್ಚೆಗೂ ಗ್ರಾಸವಾಗಿತ್ತು.

'ಸ್ಪರ್ಧೆಗೆ ಬಂದಿದ್ದ 15ರಲ್ಲಿ 14ಕ್ಕೆ ಚಲನಚಿತ್ರದ ಲಕ್ಷಣಗಳಿದ್ದು, ಚರ್ಚೆಗೆ ಒಳಪಟ್ಟವು. 15ನೇ ಚಿತ್ರ, 'ಕಾಶ್ಮೀರ್ ಫೈಲ್ಸ್' ವೀಕ್ಷಣೆಯ ನಂತರ ನಾವು ದಿಗ್ಭ್ರಮೆಗೊಂಡಿದ್ದು, ವಿಚಲಿತರಾದೆವು. ಇದು, ಇಂತಹ ಪ್ರತಿಷ್ಠಿತ ಚಿತ್ರೋತ್ಸವದಲ್ಲಿ ಪ್ರದರ್ಶನಕ್ಕೆ ಬಂದ ಪ್ರಚಾರದ ಉದ್ದೇಶದ, ಅಸಭ್ಯ ಚಿತ್ರ' ಎಂದು ಹೇಳಿದರು.

ಗೋಲ್ಡನ್, ಪೀಕಾಕ್ಸ್ ಪ್ರಶಸ್ತಿಗೆ ಸೇರಿದಂತೆ ಅತ್ಯುತ್ತಮ ಚಿತ್ರಗಳನ್ನು ಆಯ್ಕೆ ಮಾಡುವ ಹೊಣೆ ತೀರ್ಪುಗಾರ ಮಂಡಳಿಯದಾಗಿತ್ತು. 'ನಮಗಾದ ಅನುಭವವನ್ನು ನಿಮ್ಮ ಜೊತೆ ಹಂಚಿಕೊಳ್ಳಲು ಮುಕ್ತವಾಗಿದ್ದೇನೆ. ಕಲೆ, ಬದುಕಿಗೆ ಅಗತ್ಯವಾಗಿರುವ ವಿಮರ್ಶೆ ಸ್ವೀಕರಿಸುವುದು ಅಗತ್ಯ' ಎಂದರು.

'ಇವಿಎಂ ಕುರಿತು ಹೇಳಿಕೆ: ಪರಿಣಾಮಗಳ ಅರಿವು ಇರಲಿ'

ನವದೆಹಲಿ (ಪಿಟಿಐ): ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ತಿರುಚಲಾಗಿದೆ ಎಂದು 'ಆಧಾರರಹಿತ ಹೇಳಿಕೆ' ನೀಡುವವವರಿಗೆ, ಅದರ ಪ್ರತಿಕೂಲ ಪರಿಣಾಮಗಳ ಅರಿವೂ ಇರಬೇಕು ಎಂದು ಸುಪ್ರೀಂ ಕೋರ್ಟ್ ಸೋಮವಾರ ಅಭಿಪ್ರಾಯಪಟ್ಟಿತು.

ಲಾಲ್‌ಬಾಗ್‌ನಲ್ಲಿನ ಸಮಸ್ಯೆಗಳ ಕುರಿತು ಜನರಿಗೆ ಪರಿಹಾರ ಒದಗಿಸಬಹುದೆಂಬ 'ಪ್ರಜಾವಾಣಿ'ಯ ವಿನಂತಿಗೆ ತೋಟಗಾರಿಕಾ ಸಚಿವ ಮುನಿರತ್ನ ಒಪ್ಪಿಗೆ ನೀಡಲಿಲ್ಲ. ಅಂತಹ ಜನದನಿಗೆ ಪತ್ರಿಕೆಯು ಈ ಮೂಲಕ ವೇದಿಕೆ ಒದಗಿಸಿದೆ.

'ದೂರುಗಳಲ್ಲಿ ಕೆಲವನ್ನಾದರೂ ಪರಿಹರಿಸಲಿ'

ಇಲಾಖೆಯೊಂದಿಗೆ ಕೈ ಜೋಡಿಸಿ



ಪ್ರತಿನಿತ್ಯ ಲಾಲ್‌ಬಾಗ್ ಬಗ್ಗೆ ವಿವಿಧ ಬಗೆಯ ದೂರು ಮತ್ತು ಸಲಹೆಗಳು ಬರುತ್ತಿವೆ. ಇದರಲ್ಲಿ ಕೆಲವಾದರೂ ಸುಧಾರಣೆಯಾಗಬೇಕು. ಇದುವರೆಗೂ ಆಡಳಿತ ನಡೆಸಿದ ಪಕ್ಷಗಳು ಸಾಕಷ್ಟು ಸುಧಾರಣೆಗಳನ್ನು ಮಾಡಿದ್ದು, ಅದನ್ನು ನಾವು ಎಷ್ಟೋ ಕಾಪಾಡಿದ್ದೇವೆ ಎಂಬುದನ್ನು ಪ್ರಶ್ನಿಸಿಕೊಳ್ಳಬೇಕು. ಮರ–ಗಿಡಗಳಿಗೆ ಹಾನಿ, ಎಲ್ಲೆಂದರಲ್ಲಿ ಕಸವನ್ನು ಹಾಕುವುದನ್ನು ನಿಲ್ಲಿಸಬೇಕು. ಈ ನಿಟ್ಟಿನಲ್ಲಿ ತೋಟಗಾರಿಕೆ ಇಲಾಖೆಯೊಂದಿಗೆ ಕೈ ಜೋಡಿಸಿ ಸಹಕರಿಸಿದರೇ ಸಸ್ಯಕಾಶಿಯನ್ನು ಇನ್ನೂ ಅತ್ಯುತ್ತಮಗೊಳಿಸಬಹುದು.

ರಾ.ಬಾ. ವರದರಾಜನ್, ವೆಂಕಟೇಶ್ವರ ಲೇಔಟ್, ಅಬ್ಬಿಗೆರೆ, ಚಿಕ್ಕಬಾಣಾವರ

ಉಚಿತ ಪ್ರವೇಶ ನೀಡಿ



ಲಾಲ್‌ಬಾಗ್ ಉದ್ಯಾನಕ್ಕೆ ತಿಂಗಳಲ್ಲಿ ಒಂದು ದಿನದ ಉಚಿತ ಪ್ರವೇಶ ಕಲ್ಪಿಸಬೇಕು. ಪ್ರತಿವರ್ಷ ನಡೆಯುವ ಫಲಪುಷ್ಪ ಪ್ರದರ್ಶನದಲ್ಲಿ ತೋಟಗಾರಿಕೆ ಇಲಾಖೆಗೆ ಕೋಟ್ಯಂತರ ಆದಾಯ ಬರುತ್ತದೆ. ಆದ್ದರಿಂದ ತಿಂಗಳಲ್ಲಿ ಒಂದು ದಿನ ಉಚಿತ ಪ್ರವೇಶ ನೀಡಿದರೆ ಯಾವುದೇ ರೀತಿಯ ನಷ್ಟವಾಗುವುದಿಲ್ಲ. ಉದ್ಯಾನದಲ್ಲಿ ಪರಿಸರದ ಬಗ್ಗೆ ಸಪ್ತಾಹ ಕಾರ್ಯಕ್ರಮಗಳನ್ನು ಏರ್ಪಡಿಸಿ ಉಚಿತ ಮಾರ್ಗದರ್ಶನ ನೀಡುವ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕು.

ಸಾಗರ್ ದ್ರಾವಿಡ್, ಗೋವಿಂದರಾಜನಗರ

ರಸ್ತೆ ನಿರ್ಮಿಸಿ



ಬೆಂಗಳೂರು ನಗರದ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಇರುವುದರಿಂದ ವೃದ್ಧರಿಗೆ ಹಾಗೂ ಸೈಕಲ್ ಸವಾರರಿಗೆ ರಸ್ತೆಗಳಲ್ಲಿ ಓಡಾಡುವುದು ಕಷ್ಟವಾಗಿದೆ. ಆದ್ದರಿಂದ ಲಾಲ್‌ಬಾಗ್ ಉದ್ಯಾನದಲ್ಲಿ 10 ಅಡಿ ಅಗಲದ ರಸ್ತೆಯನ್ನು ನಿರ್ಮಿಸಬೇಕು. ಇದರಿಂದ ವಾಯುವಿಹಾರಿಗಳಿಗೆ ಮತ್ತು ಸೈಕಲ್ ಸವಾರರಿಗೆ ಅನುಕೂಲವಾಗುತ್ತದೆ.

ಬಿ.ಎಂ.ತಿಮ್ಮೇಶ್, ಬೊಮ್ಮೇನಹಳ್ಳಿ

ಪ್ರಜಾವಾಣಿ@75

ಲಾಲ್‌ಬಾಗ್‌ನಲ್ಲಿ ನೀವು ಕಂಡ, ಅನುಭವಿಸಿದ ಸಮಸ್ಯೆಗಳ ಕುರಿತು ಸಂಕ್ಷಿಪ್ತವಾಗಿ ಬರೆದು ನಮಗೆ ವಾಟ್ಸ್‌ಆ್ಯಪ್ ಮಾಡಿ. ಜೊತೆಗೆ ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊವನ್ನು 'ಪ್ರಜಾವಾಣಿ'ಗೆ ಕಳಿಸಿ. ಆಯ್ದ ಅನುಭವಗಳು ಪ್ರಕಟವಾಗಲಿವೆ.

9606038256

ನಕ್ಷತ್ರ, ಆಕಾಶಗಂಗೆಗಳ ಸ್ವರೂಪದ ಸುಳಿವು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರಹ್ಮಾಂಡದ ಉಗಮದ ಹಂತದಲ್ಲಿ ಹುಟ್ಟಿದ ಮೊದಲ ನಕ್ಷತ್ರಗಳು ಮತ್ತು ಆಕಾಶಗಂಗೆಗಳ ಸ್ವರೂಪಗಳ ಬಗ್ಗೆ 'ಸರಾಸ್–3' (ಎಸ್‌ಎಆರ್‌ಎಎಸ್–3) ರೇಡಿಯೊ ದೂರದರ್ಶಕ ಸುಳಿವು ನೀಡಿದೆ ಎಂದು ರಾಮನ್ ಸಂಶೋಧನಾ ಸಂಸ್ಥೆ ತಿಳಿಸಿದೆ.

ದೇಶೀಯವಾಗಿ ಅಭಿವೃದ್ಧಿಪಡಿಸಿದ, ರಾಮನ್ ಸಂಶೋಧನಾ ಸಂಸ್ಥೆಯಲ್ಲಿ ನಿರ್ಮಿಸಿದ 'ಸರಾಸ್–3' ರೇಡಿಯೊ ದೂರದರ್ಶಕವನ್ನು ದಂಡಿಗಾನಹಳ್ಳಿ ಕೆರೆ ಮತ್ತು ಶರಾವತಿ ಹಿನ್ನೀರಿನಲ್ಲಿ 2020ರಲ್ಲಿ ಅಳವಡಿಸಲಾಗಿತ್ತು. ಈ ದೂರದರ್ಶಕ ಮೂಲಕ 20 ಕೋಟಿ ವರ್ಷಗಳ ಹಿಂದೆ 'ಮಹಾಸ್ಫೋಟದಿಂದಾಗಿ (ಬಿಗ್ ಬ್ಯಾಂಗ್) ಬ್ರಹ್ಮಾಂಡದ ಉಗಮದ ಸಂದರ್ಭದ ವಿದ್ಯಮಾನ, ಆ ಬಳಿಕ ಹುಟ್ಟಿದ ನಕ್ಷತ್ರಗಳು ಮತ್ತು ಸೃಷ್ಟಿಯಾದ ಆಕಾಶಗಂಗೆಗಳ ಸ್ವರೂಪಗಳ ಬಗ್ಗೆ ವಿಜ್ಞಾನಿಗಳು ಅಧ್ಯಯನ ನಡೆಸಿದ್ದಾರೆ.



ಶರಾವತಿ ಹಿನ್ನೀರಿನಲ್ಲಿ 'ಸರಾಸ್–3' ದೂರದರ್ಶಕದ ಪ್ರಯೋಗ

ಸಂಸ್ಥೆಯ ಸಂಶೋಧಕರಾದ ಸೌರಭ ಸಿಂಗ್ ಮತ್ತು ಆಸ್ಟ್ರೇಲಿಯಾದ ಕಾಮನ್‌ವೆಲ್ತ್ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಸಂಸ್ಥೆಯ (ಸಿಎಸ್‌ಐಆರ್‌ಒ) ರವಿ ಸುಬ್ರಹ್ಮಣ್ಯ ಅವರು ಸಾರ್ಸ್–3ದಿಂದ ದೊರೆತ ಮಾಹಿತಿಯನ್ನು ವಿಶ್ಲೇಷಿಸಿದ್ದಾರೆ.

ಪ್ರೊ.ಎಚ್. ಟಿ. ಪೋತೆ ಅವರ ಕೃತಿಗಳ ಅವಲೋಕನ ಕಾರ್ಯಕ್ರಮ

ಪ್ರಾಕೃತ ಭಾಷೆಯ ಸಂಶೋಧನೆ ನಡೆಯುತ್ತಿಲ್ಲ: ಹಂಪನಾ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸ್ಕೃತದಷ್ಟೇ ಪ್ರಾಚೀನವಾದ ಪ್ರಾಕೃತ ಮತ್ತು ಪಾಲಿ ಭಾಷೆಯ ಬಗ್ಗೆ ಸಂಶೋಧನೆಗಳು ನಡೆಯುತ್ತಿಲ್ಲ' ಎಂದು ಸಾಹಿತಿ ಹಂ.ಪ. ನಾಗರಾಜಯ್ಯ ಬೇಸರ ವ್ಯಕ್ತಪಡಿಸಿದರು.

ಸಪ್ನ ಬುಕ್ ಹೌಸ್, ಕನ್ನಡ ಜನಶಕ್ತಿ ಕೇಂದ್ರ ಹಾಗೂ ಪ್ರೊ. ಮಲ್ಲೇಪುರಂ ಸಾಂಸ್ಕೃತಿಕ ಪ್ರತಿಷ್ಠಾನದ ಸಹಯೋಗದಲ್ಲಿ ಸೋಮವಾರ ನಗರದಲ್ಲಿ ಆಯೋಜಿಸಿದ್ದ ಪ್ರೊ.ಎಚ್. ಟಿ. ಪೋತೆ ಅವರ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತ 'ಅಂಬೇಡ್ಕರ್ ಭಾರತ, ಸಮಾಜೋಜಾನಪದ, ಜಾನಪದ ಜ್ಞಾನ ವಿಜ್ಞಾನ, ಬಯಲೆಂಬೊ ಬಯಲು' ಕೃತಿಗಳ ಅವಲೋಕನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪ್ರಾಚೀನ ಭಾಷೆಗಳಾದ ಪ್ರಾಕೃತ ಹಾಗೂ ಪಾಲಿ ಭಾಷೆಗಳು ಕಷ್ಟವಾಗಿರುವುದರಿಂದ ಸಂಶೋಧನೆ ಕೈಗೊಳ್ಳಲು ಯಾರು ಮುಂದೆ ಬರುತ್ತಿಲ್ಲ' ಎಂದು ಹೇಳಿದರು.

'ಪ್ರೊ. ಎಚ್.ಟಿ. ಪೋತೆ ಅವರು ಸಾಹಿತ್ಯದ ಎಲ್ಲ ಪ್ರಕಾರಗಳನ್ನು ಬರೆದಿದ್ದಾರೆ. ಪೋತೆ ಅವರ ಕೃತಿಗಳು ಬಹುಮುಖಿ ಚಿಂತನೆಗಳನ್ನು ವಿಸ್ತರಿಸಿವೆ. ಈ ನಾಲ್ಕು ಕೃತಿಗಳು ಅನನ್ಯ' ಎಂದು ವಿವರಿಸಿದರು.



ಕಾರ್ಯಕ್ರಮದಲ್ಲಿ ಡಾ. ಮುದೇನೂರು ನಿಂಗಪ್ಪ, ಸಾಹಿತಿ ಹಂ.ಪ. ನಾಗರಾಜಯ್ಯ, ಪ್ರೊ.ಎಚ್.ಟಿ. ಪೋತೆ, ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಹಿ.ಚಿ. ಬೋರಲಿಂಗಯ್ಯ ಮತ್ತು ಸಹ ಪ್ರಾಧ್ಯಾಪಕ ಶಿವರಾಜ ಬ್ಯಾಡರಹಳ್ಳಿ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರು, 'ಬುದ್ಧ, ಅಂಬೇಡ್ಕರ ಅವರ ಆದರ್ಶದ ಬದುಕು ಪೋತೆ ಅವರ ಕೃತಿಗಳಲ್ಲಿ ಅನಾವರಣಗೊಂಡಿದೆ' ಎಂದು ಹೇಳಿದರು.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ. ಮುದೇನೂರು ನಿಂಗಪ್ಪ ಅವರು ಮಾತನಾಡಿ, 'ಸೃಜನಶೀಲ ಕೃತಿ ನಮ್ಮ ನಡುವೆ ಕನಿಷ್ಠವೆಂದರೂ ಹತ್ತು ವರ್ಷಗಳ ಕಾಲ ಬಾಳಬೇಕು. ತನ್ನ ಚರ್ಚೆ, ಸಂವಾದ, ಮಾತುಗಳ ವಿವೇಕದಿಂದ ನಮ್ಮನ್ನು ಬಾಳಿಸುವ, ಲೇಖಕನನ್ನೂ ಬಾಳಿಸುವ ಸಹೃದಯ ಗುಣ ಕೃತಿಗಿರಬೇಕು. ಅಂತಹ ಗುಣ ಮತ್ತು ವೈಚಾರಿಕ ವಿವೇಕ 'ಬಯಲೆಂಬೊ ಬಯಲು' ಕಾದಂಬರಿಗಿದೆ' ಎಂದು ವಿವರಿಸಿದರು.

ಸಾಹಿತಿ ಮಲ್ಲೇಪುರಂ ವೆಂಕಟೇಶ್, ಎಚ್.ಟಿ. ಪೋತೆ ಉಪಸ್ಥಿತರಿದ್ದರು.

ಕ್ಷೇಮ ಕುಶಲ



> ನಮ್ಮ ಆತ್ಮೀಯರಲ್ಲಿ ಯಾರಾದರೂ ಹಿಂಸಾತ್ಮಕ ಪ್ರವೃತ್ತಿಗೆ ಬಲಿಯಾಗುತ್ತಿದ್ದಾರೆ ಎಂದರೆ ಅದರ ಜವಾಬ್ದಾರಿ ನಮ್ಮದೇ ಆಗಬೇಕು.

ಹಿಂಸೆ ಎಂಬ ಕಾಯಿಲೆ

ಡಾ. ಕಿರಣ್ ವಿ. ಎಸ್.

ಕಳೆದ ಕೆಲವು ದಶಕಗಳಿಂದ ಜಗತ್ತಿನ ಎಲ್ಲೆಡೆ ಹಿಂಸಾತ್ಮಕ ಮತ್ತು ಆಕ್ರಮಣಕಾರಿ ಪ್ರವೃತ್ತಿಗಳು ಹೆಚ್ಚುತ್ತಿರುವ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆ ಕಳವಳಗೊಂಡಿದೆ. 'ಹಿಂಸೆಯೆನ್ನುವುದು ಆಕ್ರಮಣಕಾರಿ ಪ್ರವೃತ್ತಿಯ ತೀವ್ರ ಸ್ವರೂಪ' - ಎಂದು ಮಾನಸಿಕ ತಜ್ಞರ ಅಭಿಮತ. ಇಂತಹ ಪ್ರವೃತ್ತಿಗೆ ಹಲವಾರು ಕಾರಣಗಳನ್ನು ಗುರುತಿಸಲಾಗಿದೆ. ಕೋಪ, ದುಃಖ, ಹತಾಶೆಗಳನ್ನು ಸರಿಯಾದ ದಾರಿಯಲ್ಲಿ ಅಭಿವ್ಯಕ್ತಗೊಳಿಸಲು ಸಾಧ್ಯವಾಗದ ಮಂದಿ ಹಿಂಸೆಗೆ ಇಳಿಯುತ್ತಾರೆ. ದೃಶ್ಯಮಾಧ್ಯಮಗಳಲ್ಲಿ ವೈಭವೀಕರಿಸುವ ಹಿಂಸೆ ಯುವಜನರಲ್ಲಿ ತಪ್ಪು ಸಂದೇಶಗಳನ್ನು ಹರಡುತ್ತದೆ. ಮನೆಯ, ನೆರೆಹೊರೆಯ ವಾತಾವರಣದಲ್ಲಿ ಪ್ರೀತಿ-ವಿಶ್ವಾಸಗಳಿಗೆ ಪ್ರತಿಯಾಗಿ ದ್ವೇಷ, ಅಸೂಯೆ, ಪ್ರತೀಕಾರಗಳ ಮನೋಭಾವಗಳು ತುಂಬಿದ್ದರೆ ಬೆಳೆಯುವ ಮಕ್ಕಳಿಗೆ ಹಿಂಸೆ ಸಹಜವೆನ್ನುವ ಭಾವನೆ ಮೂಡುತ್ತದೆ. ಋಣಾತ್ಮಕ ಆಲೋಚನೆಗಳು ಕಾಡುವವರಿಗೆ ಪ್ರತಿಯೊಂದು ಸಂಗತಿಯಲ್ಲೂ ತಪ್ಪೇ ಎದ್ದುಕಾಣುತ್ತದೆ. ಇಂತಹವರಲ್ಲಿ ಹಿಂಸಾತ್ಮಕ ಪ್ರವೃತ್ತಿ ಹೆಚ್ಚು. ಇದರ ಜೊತೆಗೆ ಮದ್ಯಪಾನ, ಮಾದಕ ವಸ್ತುಗಳ ಸೇವನೆಗಳು ಮಾನಸಿಕ ನಿಯಂತ್ರಣವನ್ನು ತಗ್ಗಿಸಿ ಹಿಂಸೆಗೆ ಆಸ್ಪದವೀಯುತ್ತವೆ.

ಉದ್ದೇಶಪೂರ್ವಕವಾಗಿ ವ್ಯಕ್ತಿಗಳಿಗೆ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹಾನಿ ಮಾಡುವುದು ಹಿಂಸೆಯ ಒಂದು ಪರಿಭಾಷೆ. ಇದು ಈಚಿನ ದಿನಗಳಲ್ಲಿ ಅಧಿಕವಾಗುತ್ತಿದೆ. ಹಿಂಸೆಯ ಮಾರ್ಗದಿಂದ ತಮಗೆ ಬೇಕಾದ್ದನ್ನು ದಕ್ಕಿಸಿಕೊಳ್ಳುವ ಪ್ರಸಂಗಗಳು ವೈಯಕ್ತಿಕ ಮತ್ತು ಸಾಂಘಿಕ ಮಟ್ಟದಲ್ಲಿ ಕಾಣುತ್ತಿವೆ. ಹುನ್ನಾರ ಮಾಡಿ, ತಮಗೆ ವಿರುದ್ಧವಾಗಿರುವವರ ಜೊತೆ ಸೇಡು ತೀರಿಸಿಕೊಳ್ಳುವ ನಿಟ್ಟಿನಲ್ಲೂ ಹಿಂಸೆ ಬಳಕೆಯಾಗುತ್ತಿದೆ. ಹಿಂಸೆಯ ಬಳಕೆಯಿಂದ ತಾತ್ಕಾಲಿಕವಾಗಿ ಮೇಲುಗೈ ಸಾಧಿಸುವುದು; ಹಿಂಸೆಗೆ ಪ್ರತಿಯಾಗಿ ತಕ್ಕ ಶೀಘ್ರ ಶಿಕ್ಷೆಯಾಗದಿರುವುದು; ಸಾತ್ತ್ವಿಕ ಜನರು ಹಿಂಸೆಯನ್ನು ಪ್ರತಿಭಟಿಸಲಾಗದೆ ಸೋಲುವುದು; ವ್ಯವಸ್ಥೆಯು ಸಜ್ಜನರ ರಕ್ಷಣೆಗೆ ಬಾರದಿರುವುದು; ಇತರರ ಮೇಲಿನ ಹಿಂಸೆಯ ಫಲಾನುಭವಿಗಳು ದುರ್ಜನರ ಕ್ರೌರ್ಯಕ್ಕೆ ಬೆಂಬಲವಾಗಿ ನಿಲ್ಲುವುದು, ಮೊದಲಾದುವು ದಿನದಿನವೂ ಹಿಂಸೆಯ ಬಳಕೆಯನ್ನು ಹೆಚ್ಚಿಸುತ್ತಿವೆ. ಇದರ ಕಾರಣದಿಂದ ಭ್ರಮನಿರಸನಗೊಳ್ಳುವ ಸಜ್ಜನರ ಹತಾಶೆ ಸಮಾಜದ ಒಟ್ಟಾರೆ ಅಶಾಂತಿಗೆ ಕಾರಣವಾಗುತ್ತದೆ.

ಹಿಂಸಾಮಾರ್ಗವನ್ನು ಅನುಸರಿಸುವ ಅನೇಕ ಮಂದಿಗೆ ಪರ್ಯಾಯಗಳ ಅರಿವು ಇರುವುದಿಲ್ಲ. ಕ್ರೋಧ ಮಾನವಸಹಜ ಭಾವಗಳಲ್ಲಿ ಒಂದು. ಅದನ್ನು ವ್ಯಕ್ತಪಡಿಸುವ ಹಲವಾರು ಸುರಕ್ಷಿತ ವಿಧಾನಗಳಿವೆ. ಆದರೆ, ಎಷ್ಟೋ ಮಂದಿಗೆ ಇಂತಹ ಮಾರ್ಗಗಳ ಪರಿಚಯ ಇರುವುದಿಲ್ಲ. ಬಹುತೇಕ ಒಳ್ಳೆಯ ಜನರು ತುಂಬಿರುವ ಸಮಾಜಗಳಲ್ಲಿ ಹಿಂಸಾತ್ಮಕ ಮಾರ್ಗ ಅನುಸರಿಸುವ ಬೆರಳೆಣಿಕೆಯ ಮಂದಿ ಇತರರಲ್ಲಿ ಭೀತಿಯನ್ನು ಹುಟ್ಟಿಸಿ, ಅದನು ತಮ್ಮ ಕಾರ್ಯಸಾಧನೆಗೆ ಬಳಸಿಕೊಳ್ಳಬಲ್ಲರು. ಇದು ಕೂಡ ಹಿಂಸೆಯ ಪ್ರಚೋದನೆಗೆ ಸಾಧನವಾಗುತ್ತದೆ. ಈ ರೀತಿಯ ವರ್ತನೆ ಯಾವುದೇ ಪ್ರತಿರೋಧವಿಲ್ಲದೆ ಎಗ್ಗಿಲ್ಲದೆ ನಡೆದರೆ, ಅದು ಹಲವಾರು ಕಿರಿಯರಿಗೆ ಸ್ಫೂರ್ತಿಯಾಗಿ ನಿಲ್ಲುವ ಅಪಾಯವಿದೆ.

ಸಾಧಕರನ್ನು, ಹಿರಿಯರನ್ನು, ಜ್ಞಾನಿಗಳನ್ನು ಗೌರವಿಸುವ ಪರಂಪರೆ ಒಂದು ಸಮಾಜದಲ್ಲಿ ಸತತವಾಗಿ ಹರಿದು ಬರುವುದು ಒಟ್ಟಾರೆ ಸಮಷ್ಟಿಯ ಶ್ರೇಯಸ್ಸಿಗೆ ಕಾರಣವಾಗುತ್ತದೆ. ಇಂತಹ ಮೌಲ್ಯಗಳು ಯಾವುದಾದರೂ ಕಾರಣದಿಂದ ನಿಂತುಹೋದರೆ, ಆಯಾ ಸಮಾಜದಲ್ಲಿ ಹಿಂಸಾತ್ಮಕ ಪ್ರವೃತ್ತಿಗಳು ಹೆಚ್ಚುವುದನ್ನು ಸಾಮಾಜಿಕ ವಿಜ್ಞಾನಿಗಳು ಗುರುತಿಸಿದ್ದಾರೆ. ಮೌಲ್ಯಗಳು ಕುಸಿಯುವುದನ್ನು ತಡೆಯುವುದು ಸಮಾಜದ ಹಿರಿಯರ, ಬಲಾಢ್ಯರ, ನಾಯಕರ ಸಾಮಾಜಿಕ ಜವಾಬ್ದಾರಿ. ಆಧುನಿಕ ಕಾಲದಲ್ಲಿ ಹಿಂಸೆಯ ಮೂಲಕವೇ ಉನ್ನತ ಸ್ಥಾನಗಳನ್ನು ಆಕ್ರಮಿಸುತ್ತಿರುವ ಪ್ರಸಂಗಗಳು ಅಧಿಕವಾಗುತ್ತಿವೆ. ಇಂತಹ ಸಮಾಜಗಳು ಸಹಜವಾಗಿಯೇ ಹಿಂಸಾತ್ಮಕ ಪ್ರವೃತ್ತಿಯನ್ನು ಅನುಸರಿಸುತ್ತವೆ. ಮೌಲ್ಯಗಳನ್ನು ಮತ್ತೆ ಸ್ಥಾಪಿಸಬಲ್ಲ ನಿಯಂತ್ರಕ ಶಕ್ತಿಗಳ ಅಭಾವ ಹೆಚ್ಚಿದಂತೆಲ್ಲ ಈ ಪ್ರವೃತ್ತಿ ಬೆಳೆಯುತ್ತಲೇ ಹೋಗುತ್ತದೆ. 'ಕೆಟ್ಟದು ಕೆಟ್ಟದ್ದನ್ನು ಬೆಳೆಸುತ್ತದೆ' ಎನ್ನುವ ಮಾತಿಗೆ ಪುಷ್ಟಿ ನೀಡಿದಂತಾಗುತ್ತದೆ.

ಹಿಂಸೆಯ ಪೋಷಣೆಗೆ ಕೀಳರಿಮೆಯೂ ಮತ್ತೊಂದು ಕಾರಣ. ತನ್ನ ಅರ್ಹತೆಗೆ ಸಹಜವಾಗಿ ಲಭಿಸಬೇಕಾದ ಗೌರವ, ಮರ್ಯಾದೆಗಳು ಲಭಿಸದಿದ್ದರೆ ಉದ್ಭವಿಸುವ ಕೀಳರಿಮೆ ಸಮಾಜದ ಪ್ರತಿಯಾಗಿ ಹಿಂಸಾತ್ಮಕ ಸ್ವರೂಪ ಪಡೆಯಬಹುದು. ಅಂತೆಯೇ, ಬೆಳೆಯುವ ವಯಸ್ಸಿನಲ್ಲಿ ಅನುಭವಿಸಿದ ಶೋಷಣೆ, ನಿರ್ಲಕ್ಷ್ಯಗಳು ಹಿಂಸಾತ್ಮಕ ಪ್ರವೃತ್ತಿಗೆ ದಾರಿಯಾಗಬಹುದು. ಕೆಲವು ಮುಂದುವರೆದ ದೇಶಗಳಲ್ಲಿ ಬಂದೂಕಿನಂತಹ ಶಸ್ತ್ರಗಳನ್ನು ಸರಾಗವಾಗಿ ಹೊಂದಬಹುದು. ಈ ರೀತಿಯ ಅವಕಾಶಗಳು ಹಿಂಸೆಯ ಅಭಿವ್ಯಕ್ತಿಗೆ ಸುಲಭ ದಾರಿಯಾಗುತ್ತವೆ.

ಒಮ್ಮೆ ಹಿಂಸೆಯ ಹಾದಿ ಹಿಡಿದವರಿಗೆ ನಂತರದ ಬದುಕಿನಲ್ಲಿ ತಮ್ಮ ಭಾವನೆಗಳ ಮೇಲೆ ನಿಯಂತ್ರಣ ಹೊಂದುವುದು ಬಹಳ ಕಷ್ಟವಾಗುತ್ತದೆ. ಸಮಾಜದಿಂದ ಇದಕ್ಕೆ ಯಾವುದೇ ಪ್ರತಿರೋಧ ಬಾರದಿದ್ದರೆ ಹಿಂಸೆಯ ಪ್ರವೃತ್ತಿ ತೀವ್ರಗೊಳ್ಳುತ್ತಾ ಹೋಗುತ್ತದೆ. ಹೀಗಾಗಿ, ಈ ಮಾರ್ಗ ಹಿಡಿಯದಿರುವುದೇ ವ್ಯಕ್ತಿಗೆ ಮತ್ತು ಸಮಾಜಕ್ಕೆ ಶ್ರೇಯಸ್ಕರ. ಹಿಂಸೆಯ ದಾರಿ ಹಿಡಿದವವರನ್ನು ಶೀಘ್ರವಾಗಿ ಗುರುತಿಸಿ, ಮತ್ತೊಮ್ಮೆ ಅವರನ್ನು ಸರಿಯಾದ ಮಾರ್ಗಕ್ಕೆ ಕರೆತರುವುದು ಸಮಾಜದ ಎಲ್ಲರ ಗುರುತರ ಜವಾಬ್ದಾರಿ. ಇಂತಹವರನ್ನು ಗುರುತಿಸುವುದು ಸಮಸ್ಯಾತ್ಮಕವೇ ಆದರೂ, ಕೆಲವು ಸೂಚನೆಗಳು ಉಪಯುಕ್ತವಾಗುತ್ತವೆ.

ಹಿಂಸೆಗೆ ಇಳಿದ ಬಹುತೇಕರು ಆಯುಧಗಳನ್ನು ಹುಡುಕುತ್ತಾರೆ. ಇತರರನ್ನು ನೋಯಿಸಬಲ್ಲ ಆಯುಧಗಳ ಬಗ್ಗೆ ಹೆಚ್ಚಿನ ಆಸಕ್ತಿ ತೋರುವವರ ಬಗ್ಗೆ ನಿಗಾ ಇರಬೇಕು. ಪ್ರಾಣಿಗಳ ಬೇಟೆಯ ಬಗ್ಗೆ ಏಕಾಏಕಿ ಆಸಕ್ತಿ ತೋರುವವರ ಬಗ್ಗೆಯೂ ಸಂಶಯಪಡುವುದು ಸೂಕ್ತ. ಮಾತಿನ ವೇಳೆ ತೀವ್ರ ಬೆದರಿಕೆ ಹಾಕುವವರು, ಇತರರನ್ನು ಹಿಂಸಿಸುವ ಯೋಜನೆಗಳನ್ನು ಚರ್ಚಿಸುವವರು ಹಿಂಸೆಗೆ ಇಳಿಯುವ ಸಾಧ್ಯತೆಗಳು ಅಧಿಕ. ಸಣ್ಣ ಪುಟ್ಟ ಸೇಡುಗಳಿಗೂ ಅಧಿಕ ಮಟ್ಟದ ಕ್ರೌರ್ಯವನ್ನು ತೋರುವವರು, ಚಿಕ್ಕ ಪ್ರತೀಕಾರಕ್ಕೆ ಕೂಡ ಅಪಾಯಕಾರಿ ಮಾರ್ಗಗಳನ್ನು ಅನುಸರಿಸುವವರಲ್ಲಿ ಹಿಂಸಾತ್ಮಕ ಪ್ರವೃತ್ತಿ ಮನೆಯಾಗಿರಬಹುದು. ಕೋಪವನ್ನು ನಿಯಂತ್ರಿಸಲಾಗದೆ ಬೆಲೆಬಾಳುವ ವಸ್ತುಗಳನ್ನು ನಾಶಮಾಡುವವರು, ತನ್ನದೋ ಪರರದ್ದೋ ಎನ್ನುವ ವಿವೇಚನೆಯಿಲ್ಲದೆ ವಿಧ್ವಂಸಕ ಕೃತ್ಯಗಳಲ್ಲಿ ಭಾಗಿಯಾಗುವವರು, ಸಿಟ್ಟಿನ ಭಾವಗಳನ್ನು ಸಮರ್ಥವಾಗಿ ನಿಯಂತ್ರಿಸಲು ಶಕ್ಯವಿಲ್ಲದವರು ಹಿಂಸೆಯ ಮಾರ್ಗಕ್ಕೆ ಇಳಿಯುತ್ತಾರೆ. ಇಂತಹವರ ಬಗ್ಗೆ ಮನೆಯವರು, ಬಂಧುಗಳು, ಗೆಳೆಯರು ಹೆಚ್ಚಿನ ಗಮನ ವಹಿಸುವುದು ಮುಖ್ಯವಾಗುತ್ತದೆ. ಈ ಹಿಂದೆ ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗಿಕೊಂಡವರಿಗೆ ಪುನಃ ಅದೇ ಮಾರ್ಗಕ್ಕೆ ಹಿಂದಿರುಗಲು ಹೆಚ್ಚಿನ ಉತ್ತೇಜನ ಬೇಕಿಲ್ಲ. ಅಂತಹವರನ್ನು ಬಹಳ ಎಚ್ಚರದಿಂದ ಕಾಯಬೇಕಾಗುತ್ತದೆ. ಅವರಿಗೆ ಸುಲಭವಾಗಿ ಆಯುಧಗಳು ಲಭ್ಯವಾಗದಂತೆ ನೋಡಿಕೊಳ್ಳಬೇಕು. ಏಕಾಂಗಿತನ ಅವರಲ್ಲಿ ಮತ್ತೊಮ್ಮೆ ಹಿಂಸೆಯ ಬಗ್ಗೆ ಆಲೋಚಿಸಲು ಆಸ್ಪದವೀಯುತ್ತದೆ. ಹೀಗಾಗಿ, ಅಂತಹವರನ್ನು ಯಾವುದೋ ಕೆಲಸದಲ್ಲಿ ವ್ಯಸ್ಥವಾಗಿರುವಂತೆ, ಸಾಧ್ಯವಾದಷ್ಟೂ ಆತ್ಮೀಯರೊಡನೆ ಸುತ್ತುವರೆದಿರುವಂತೆ ನೋಡಿಕೊಳ್ಳುವುದು ಸೂಕ್ತ. ಅವರ ಭೂತಕಾಲದ ಬಗ್ಗೆ ಲಘುವಾಗಿ ಮಾತನಾಡುವುದು, ಅವರ ನ್ಯೂನತೆಗಳನ್ನು ಎತ್ತಿ ತೋರುವುದು, ಅವರ ಬಗ್ಗೆ ತಿರಸ್ಕಾರ ಪ್ರದರ್ಶಿಸುವುದು ಸಲ್ಲದು.

ನಮ್ಮ ಆತ್ಮೀಯರಲ್ಲಿ ಯಾರಾದರೂ ಹಿಂಸಾತ್ಮಕ ಪ್ರವೃತ್ತಿಗೆ ಬಲಿಯಾಗುತ್ತಿದ್ದಾರೆ ಎಂದರೆ ಅದರ ಜವಾಬ್ದಾರಿ ನಮ್ಮದೇ ಆಗಬೇಕು. ಈ ಸಮಸ್ಯೆಯನ್ನು ಹೊರಗಿನಿಂದ ಯಾರೋ ಬಂದು ನಿವಾರಿಸಲಾರರು. ಇದರ ಪರಿಹಾರೋಪಾಯಗಳನ್ನು ನಾವೇ ಕಂಡುಕೊಳ್ಳಬೇಕು. ತಡ ಮಾಡಿದಷ್ಟೂ ಪರಿಸ್ಥಿತಿ ಗಂಭೀರವಾಗಬಹುದು. ಹೀಗಾಗಿ, ಪರಿಹಾರಗಳ ಚಿಂತನೆ ಮತ್ತು ಅವನ್ನು ಕಾರ್ಯಗತಗೊಳಿಸುವ ಪ್ರಕ್ರಿಯೆಗಳು ಶೀಘ್ರವಾಗಿಯೂ ಸಮರ್ಥವಾಗಿಯೂ ಆಗಬೇಕು. ಈ ನಿಟ್ಟಿನಲ್ಲಿ ನಮ್ಮ ಸುರಕ್ಷತೆಯೂ ಮುಖ್ಯ. ಹಿಂಸೆಯ ನಶೆಯಲ್ಲಿರುವವರಿಗೆ ವಿವೇಚನೆ ಕಡಿಮೆ. ಅಂತಹವರು ಕೋಪದ ಭರದಲ್ಲಿ ಅಸಾಧುವಾದ ಕೆಲಸಗಳನ್ನು ಮಾಡಬಲ್ಲರು. ಈ ಎಚ್ಚರ ಎಲ್ಲರಲ್ಲೂ ಇರಬೇಕು. ಇಂತಹ ನಿರ್ವಹಣೆಯಲ್ಲಿ ಹೆಚ್ಚಿನ ಸಮಾನಮನಸ್ಕರು ಇರುವುದು ಕ್ಷೇಮಕರ. ಅಪಾಯಕಾರಿ ಆಯುಧಗಳು ಇರಬಹುದಾದ ಸನ್ನಿವೇಶದಲ್ಲಿ ಕಾನೂನುಪಾಲಕರ ಬೆಂಬಲ ಪಡೆಯಬೇಕು. ಹಿಂಸಾತ್ಮಕ ಪ್ರವೃತ್ತಿಯ ನಿರ್ವಹಣೆ ಮತ್ತು ನಿಗ್ರಹಕ್ಕೆ ಮಾನಸಿಕ ತಜ್ಞರು ನೆರವಾಗುತ್ತಾರೆ. ಅಂತಹ ಸಂದರ್ಭಗಳಲ್ಲಿ ಮುಚ್ಚುಮರೆಯಿಲ್ಲದೆ ಅವರ ಸಹಾಯ ಪಡೆಯಬೇಕು. ಸ್ವಸ್ಥ ಸಮಾಜ ನಮ್ಮೆಲ್ಲರ ಜವಾಬ್ದಾರಿ. ❖

ಚುಳ್ ಎನ್ನುವ ಹಲ್ಲುಗಳು!



ಡಾ. ಕೆ. ಎಸ್. ಚೈತ್ರಾ

ಚಳಿಗಾಲದಲ್ಲಿ ಹಲ್ಲಿನಲ್ಲಿ ನೋವು ಅಥವಾ ಜುಂ ಎನ್ನುವ ಅನುಭವ ಬಹಳಷ್ಟು ಜನರಲ್ಲಿ ಕಂಡುಬರುತ್ತದೆ. ಅದಕ್ಕೆ ಮುಖ್ಯವಾದ ಕಾರಣಗಳು ಹೀಗಿವೆ.

ಹಲ್ಲು ಎನಾಮೆಲ್, ಡೆಂಟೀನ್ ಮತ್ತು ತಿರುಳು ಎಂಬ ಪದರಗಳಿಂದ ಕೂಡಿದೆ. ಪ್ರತಿ ಪದರದ ರಚನೆ ಮತ್ತು ಕೆಲಸಗಳು ಭಿನ್ನವಾಗಿವೆ. ಹೊರಗಿನ ತಣ್ಣನೆ ಗಾಳಿ ಬಾಯಿಯನ್ನು ಹೊಕ್ಕು ಹಲ್ಲಿನ ವಿವಿಧ ಪದರಗಳನ್ನು ಸಂಕುಚನಗೊಳಿಸುತ್ತದೆ. ಹಲ್ಲಿನ ಗಟ್ಟಿ ಹೊರಪದರ ಎನಾಮೆಲ್ ಮತ್ತು ಒಳಗಿನ ಮೆದುಪದರ ಡೆಂಟೀನ್ ಸಂಕುಚನಗೊಳ್ಳುವ ಸಮಯದಲ್ಲಿ ವ್ಯತ್ಯಾಸವಿದೆ. ಇದು ಹಲ್ಲಿನ ಮೇಲೆ ಒತ್ತಡ ಬೀರಿ ನೋವಿನ ಅನುಭವವನ್ನು ಉಂಟುಮಾಡುತ್ತದೆ.

ಚಳಿ ಇದ್ದಾಗ ನಾಲಿಗೆ ಬಿಸಿಬಿಸಿಯಾದ ಆಹಾರವನ್ನು ಬಯಸುತ್ತದೆ. ಹೀಗೆ ಬಾಯಿಗೆ ರುಚಿ ನೀಡಿ ಉಷ್ಣತೆ ಹೆಚ್ಚಿಸುವುದು ನಿಜವಾದರೂ ಹೊರಗಿನ ವಾತಾವರಣಕ್ಕೆ ವಿರುದ್ಧವಾದ ಈ ಬಿಸಿಯಿಂದ ಹಲ್ಲಿನ ಒಳಪದರದ ನರತಂತುಗಳು ಪ್ರಚೋದನೆಗೆ ಒಳಗಾಗುತ್ತವೆ. ಇದು ಜುಂ ಅಥವಾ ನೋವಿನ ರೂಪದಲ್ಲಿ ಪ್ರಕಟವಾಗುತ್ತದೆ.

ನೆಗಡಿಯಾಗಿ ಸೈನಸೈಟಿಸ್ ತೊಂದರೆ ಇರುವವರಲ್ಲಿ ಕೆನ್ನೆ, ಹಣೆ ಭಾರವೆನಿಸುವುದರ ಜತೆ ಹಲ್ಲುನೋವು ಇರುತ್ತದೆ. ಸೈನಸೈಟಿಸ್ ಕಡಿಮೆಯಾದಂತೆ ಹಲ್ಲುನೋವು ತಾನಾಗಿ ಕಡಿಮೆಯಾಗುತ್ತದೆ. ಕೆಲವರಲ್ಲಿ ಮೊದಲಿನಿಂದಲೂ ಹಲ್ಲಿನ ದವಡೆಗಳಲ್ಲಿ (ಟೆಂಪರೋಮ್ಯಾಂಡಿಬುಲಾರ್ ಜಾಯಿಂಟ್) ಸಮಸ್ಯೆ ಇರುತ್ತದೆ. ಚಳಿಗಾಲದಲ್ಲಿ ಅದು ಹೆಚ್ಚಾಗುವ ಸಾಧ್ಯತೆ ಹೆಚ್ಚು.

ಹೊರಗೆ ತೀರಾ ಚಳಿ ಇರುವಾಗ ದೇಹದೊಳಗೆ ಉಷ್ಣತೆ ಹೆಚ್ಚಿಸಲು ಮಾಂಸಖಂಡಗಳು ತೀವ್ರವಾಗಿ ಕೆಲಸ ಮಾಡುತ್ತವೆ. ಮುಖದ ಸ್ನಾಯುಗಳು ಇದಕ್ಕೆ ಹೊರತಲ್ಲ. ಇವುಗಳ ಚಟುವಟಿಕೆಯಿಂದ ಹಲ್ಲುಗಳು ಸತತವಾಗಿ ಕಟಕಟ ಎಂದು ಒಂದನ್ನೊಂದು ಘರ್ಷಿಸುತ್ತವೆ. ಇದರಿಂದ ಹಲ್ಲಿನ ಗಟ್ಟಿ ಮೇಲ್ಪದರ ಸವೆದು ರಕ್ಷಣೆ ಇಲ್ಲವಾಗುತ್ತದೆ. ಹೊರಗಿನ ಗಾಳಿ ತೀವ್ರವಾಗಿ ಹಲ್ಲನ್ನು ಬಾಧಿಸುತ್ತದೆ. ಚಳಿಗಾಲದಲ್ಲಿ ಸೂರ್ಯನ ಬೆಳಕು ಕಡಿಮೆ ಮತ್ತು ಜನರು ಒಳಗಿರುವುದೇ ಹೆಚ್ಚು. ಹಲ್ಲನ್ನು ಬಲಶಾಲಿಯಾಗಿಡಲು ವಿಟಮಿನ್ ಡಿ ಅಗತ್ಯ. ಸೂರ್ಯನ ಬಿಸಿಲು ಇದರ ಅತ್ಯುತ್ತಮ ಮೂಲ. ಅದಿಲ್ಲದೇ ಇದ್ದಾಗ ವಿಟಮಿನ್ ಡಿ ಕೊರತೆಯಿಂದ ಹಲ್ಲುಗಳು ದುರ್ಬಲವಾಗುತ್ತವೆ. ಹಲ್ಲು ಮುರಿಯುವ, ಬಿರುಕು ಬಿಡುವ ಸಾಧ್ಯತೆ ಹೆಚ್ಚು.

ಚಳಿಗಾಲದಲ್ಲಿ ಸಾಧಾರಣವಾಗಿ ಆಹಾರ ಸೇವನೆ ಹೆಚ್ಚು. ಹೀಗಾಗಿ ಹಲ್ಲುಗಳು ಹಾಳಾದರೆ ಎಂಬ ಭಯದಿಂದ ಅದನ್ನು ತಡೆಯಲು ಹೆಚ್ಚು ಸಲ, ಜೋರಾಗಿ ಹಲ್ಲುಗಳನ್ನು ಉಜ್ಜುವುದೂ ಸಾಮಾನ್ಯ. ಇದು ಹಲ್ಲಿನ ಮೇಲ್ಪದರದ ಸವೆತಕ್ಕೆ ಕಾರಣವಾಗುತ್ತದೆ. ಇದರಿಂದ ಜುಂ ಎನ್ನುವ ಅಸಹನೀಯ ಅನುಭವವೂ ಸಾಮಾನ್ಯ.

ಪರಿಹಾರಗಳು

- ಮೂಗಿನಿಂದ ಉಸಿರಾಡಬೇಕು. ಬಾಯಿಯಿಂದ ಉಸಿರಾಡಿದಲ್ಲಿ ಶುಷ್ಕ ಬಾಯಿ ಉಂಟಾಗಿ ವಸಡಿನ ಉರಿಯೂತ, ಹಲ್ಲಿನ ಹುಳುಕು ಆಗುವ ಸಾಧ್ಯತೆಯೂ ಹೆಚ್ಚು.
- ಸರಿಯಾದ ಕ್ರಮದಲ್ಲಿ ಹಲ್ಲುಜ್ಜುವಿಕೆ; ದಿನಕ್ಕೆರಡು ಬಾರಿ ಮೂರು ಬಾರಿ ಹಲ್ಲುಜ್ಜಿದರೆ ಸಾಕು. ಅನಗತ್ಯ ರಭಸ ಕೂಡದು. ಎರಡು ತಿಂಗಳಿಗೊಮ್ಮೆ ಬ್ರಶ್ ಬದಲಿಸಿ. ಮೃದುವಾದ ಎಳೆಗಳುಳ್ಳ ಹಲ್ಲಿನ ಬ್ರಶ್ ಬಳಕೆ ಸೂಕ್ತ. ಹಲ್ಲುಜ್ಜಿದ ನಂತರ ವಸಡಿನ ಭಾಗವನ್ನು ಮಸಾಜ್ ಮಾಡಬೇಕು. ನಾಲಿಗೆಯನ್ನು ಶುಚಿಗೊಳಿಸಬೇಕು.
- ದಂತವೈದ್ಯರ ಸಲಹೆಯ ಮೇರೆಗೆ ಫ್ಲೋರೈಡ್‌ಯುಕ್ತ ಟೂತ್ ಪೇಸ್ಟ್ , ಮೌತ್ ವಾಶ್ ಬಳಕೆ.
- ಸಿಹಿತಿಂಡಿಗಳ ಸೇವನೆ ಮಿತವಾಗಿರಲಿ. ಆಹಾರದಲ್ಲಿ ವಿಟಮಿನ್ ಡಿ ಹೆಚ್ಚಿರುವ ಅಣಬೆ, ಮೀನು, ಮೊಟ್ಟೆ, ಹಾಲು-ಮೊಸರು ಮುಂತಾದವು ಒಳಗೊಂಡಿರಲಿ.
- ಓಡಾಡುವಾಗ, ವ್ಯಾಯಾಮ ಮಾಡುವಾಗ ಆದಷ್ಟೂ ತಣ್ಣಗಿನ ಗಾಳಿ, ಬಾಯಿ ಸೇರದಂತೆ ಎಚ್ಚರ ವಹಿಸಿ, ತಲೆ-ಬಾಯಿಗೆ ಬೆಚ್ಚಗಿನ ಹೊದಿಕೆ ಧರಿಸುವುದು ಒಳ್ಳೆಯದು.
- ಚಳಿಗಾಲದಲ್ಲೂ ಶುದ್ಧನೀರು ದೇಹಕ್ಕೆ ಬೇಕು. ನೀರಿನ ಪ್ರಮಾಣ ಕಡಿಮೆಯಾದರೆ ಜೊಲ್ಲುರಸದ ಪ್ರಮಾಣವೂ ಕಡಿಮೆಯಾಗುತ್ತದೆ. ಅದರಿಂದ ಹಲ್ಲು ಹುಳುಕಾಗಿ ನೋವು ಕಾಣಿಸಿಕೊಳ್ಳಬಹುದು.

ಯಾವುದೇ ರೀತಿಯ ಹಲ್ಲುನೋವು ಬಂದಾಗ ಅದಕ್ಕೆ ನಿಖರ ಕಾರಣ ಪತ್ತೆ ಹಚ್ಚುವುದು ಮುಖ್ಯ. ಈ ನಿಟ್ಟಿನಲ್ಲಿ ನೋವು ಹೇಗೆ, ಯಾವಾಗ, ಎಷ್ಟು ಸಮಯ ಇರುತ್ತದೆ ಎಂಬ ಮಾಹಿತಿಯೊಡನೆ ದಂತವೈದ್ಯರ ಭೇಟಿ ಮಾಡಿ, ಸೂಕ್ತ ಚಿಕಿತ್ಸೆ ಪಡೆಯಬೇಕಾಗುತ್ತದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ಗಣಿತ

ಎಸ್ಸೆಸ್ಸೆಲ್ಸಿ

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಟ್ಟಿದೆ. ಅವುಗಳಲ್ಲಿ ಸರಿಯಾದ ಮತ್ತು ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟ ಜಾಗದಲ್ಲಿಯೇ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ

1) ಒಂದು ಸಮಾಂತರ ಶ್ರೇಢಿಯ 3ನೇ ಮತ್ತು 9ನೇ ಪದಗಳು ಕ್ರಮವಾಗಿ 4 ಮತ್ತು –8 ಆದರೆ ಅದರ ಎಷ್ಟನೇ ಪದ ಸೊನ್ನೆಯಾಗಿದೆ?

A) 5 B) 2
C) 10 D) 15

ಉತ್ತರ : (A) 5

ವಿವರಣೆ– ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ,

3ನೇ ಪದ= 4

$a + (3-1)d = 4 \quad (\because a_n = a + (n-1)d)$

$a + 2d = 4$.............. (1)

9ನೇ ಪದ = - 8

$a + (9-1)d = -8$

$a + 8d = -8$.......................(2)

(1) ಮತ್ತು (2)ನ್ನು ಬಿಡಿಸುವುದರಿಂದ

$a = 8 \qquad d = -2$

ಸಮಾಂತರ ಶ್ರೇಢಿಯ nನೇ ಪದ ಶೂನ್ಯವಾದಾಗ

$a + (n-1)d = 0 \quad (\because a_n = a + (n-1)d)$

$= 8 + (n-1)(-2) = 0$

$= -2(n-1) = -8$

$= 2(n-1) = 8$

$n-1 = 8/2 = 4$

$n = 4+1 = 5$

5ನೇ ಪದ ವು ಶೂನ್ಯವಾಗಿದೆ

2) ಸಂಭವನೀಯತೆಯ ಸಿದ್ಧಾಂತದ ಮೂಲವು 16 ನೇ ಶತಮಾನವಾಗಿದೆ. ಇಟಲಿಯ ಭೌತಶಾಸ್ತ್ರಜ್ಞನಾದ ....ರವರ 'The book on Games of Chance' ಎಂಬುದು ಈ ವಿಷಯದ ಮೊಟ್ಟ ಮೊದಲನೆ ಪುಸ್ತಕವಾಗಿದೆ

A) ಜೆ. ಕಾರ್ಡನ್ (J.Cardan) B) ಜೆ. ಲಿಟ್ಟನ್
C) ಎಂ. ಜಸ್ಟಿನ್ D) ಎಂ. ರಿಪ್ಪನ್

ಉತ್ತರ : (A) ಜೆ. ಕಾರ್ಡನ್ (J.Cardan)

3) $\Delta ABC \sim \Delta DEF$ ಮತ್ತು ಅವುಗಳ ವಿಸ್ತೀರ್ಣಗಳು ಕ್ರಮವಾಗಿ $64 cm^2$ ಮತ್ತು $121 cm^2$ ಗಳಾಗಿದ್ದು EF=15.4 cm ಆದರೆ BC ಯ ಬೆಲೆ................

A) 13 .5 B) 15.6
C) 11.2 D) 10

ಉತ್ತರ : (C) 11.2

{ವಿವರಣೆ– $\Delta ABC \sim \Delta DEF$ ದತ್ತ

ΔABC ವಿಸ್ತೀರ್ಣ = $64 cm^2$

ΔDEF ವಿಸ್ತೀರ್ಣ = $121 cm^2$

EF = 15.4 cm

$\therefore \frac{Area\ of\ \Delta ABC}{Area\ of\ \Delta DEF} = \frac{AB^2}{DE^2}$

$\frac{AC^2}{DF^2} = \frac{BC^2}{EF^2} \qquad \frac{64}{121} = \frac{BC^2}{EF^2}$

$\left(\frac{8}{11}\right)^2 = \left(\frac{BC}{15.4}\right)^2 \qquad \frac{8}{11} = \frac{BC}{15.4}$

$\Rightarrow BC = 8 \times 15.4/11$

$\Rightarrow BC = 8 \times 1.4$

$\Rightarrow BC = 11.2$ cm }

4) ಎರಡು ಸಂಖ್ಯೆಗಳ ಮೊತ್ತ 27 ಮತ್ತು ಗುಣಲಬ್ಧ 182 ಆದರೆ ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ.

A) 15 ಮತ್ತು 14 B) 16 ಮತ್ತು 15
C) 12 ಮತ್ತು 11 D) 14 ಮತ್ತು 13

ಉತ್ತರ : (D) 14 ಮತ್ತು 13

{ವಿವರಣೆ:–ಒಂದು ಸಂಖ್ಯೆ $27-x$ ಆಗಿರಲಿ (ಎರಡೂ ಸಂಖ್ಯೆಗಳ ಮೊತ್ತ 27)

ಆ ಸಂಖ್ಯೆಗಳ ಗುಣಲಬ್ಧ $= x(27-x)$

$x(27-x) = 182$

$x^2 - 27x + 182 = 0$

$x^2 - 13x - 14x + 182 = 0$

$x(x-13) - 14(x-13) = 0$

$(x-13)(x-14) = 0$

$x - 13 = 0$ ಅಥವಾ $x - 14 = 0$

$x = 13, 14$

$27x = 14, 13$

ಹೀಗಾಗಿ ಆ ಎರಡು ಸಂಖ್ಯೆಗಳು 14 ಮತ್ತು 13}

II ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

9) 10m ಎತ್ತರವಿರುವ ಏಣಿಯು ನೆಲದಿಂದ 8m ಎತ್ತರದಲ್ಲಿ ಗೋಡೆಯಲ್ಲಿರುವ ಕಿಟಕಿಯನ್ನು ಮುಟ್ಟುತ್ತದೆ ಹಾಗಾದರೆ ಏಣಿಯ ಪಾದವು ನೆಲದಿಂದ ಎಷ್ಟು ದೂರದಲ್ಲಿದೆ?

ಪರಿಹಾರ:– 10m ಎತ್ತರವಿರುವ ಏಣಿಯು ನೆಲದಿಂದ 8m ಎತ್ತರದಲ್ಲಿ ಗೋಡೆಯಲ್ಲಿರುವ ಕಿಟಕಿಯನ್ನು ಮುಟ್ಟುತ್ತದೆ (ದತ್ತ)



ಗೋಡೆಯ ಗೋಡೆ BA ಆಗಿರಲಿ ಮತ್ತು ACಯು ಏಣಿಯಾಗಿರಲಿ ಆದ್ದರಿಂದ ಪೈಥಾಗೋರಸ್ ಪ್ರಮೇಯದಂತೆ

$AC^2 = AB^2 + BC^2$

$10^2 = 8^2 + BC^2$

$BC^2 = 100 - 64$

$BC^2 = 36$

$BC = 6m$

ಏಣಿಯ ಪಾದವು ನೆಲದಿಂದ 6 ಮೀಟರ್ ದೂರದಲ್ಲಿದೆ

2) ಯಾವುದೇ ಧನ ಸಮ ಸಂಖ್ಯೆಯು 4q ಅಥವಾ 4q + 2 ರೂಪದಲ್ಲಿರುತ್ತದೆಂದು ತೋರಿಸಿ, ಇಲ್ಲಿ q ಒಂದು ಪೂರ್ಣ ಸಂಖ್ಯೆ.

ಪರಿಹಾರ:- aಯು ಒಂದು ಧನ ಪೂರ್ಣಾಂಕವಾಗಿದ್ದಾಗ ಭಾಗಾಕಾರ ಅಲ್ಗಾರಿಥಂನ್ನು a ಮತ್ತು b ಗಳಿಗೆ ಅನ್ವಯಿಸಿ b = 4 ಆಗಿರಲಿ. ಭಾಗಾಕಾರ ಅನುಪ್ರಮೇಯದಂತೆ q ಮತ್ತು r ಎರಡು ಪೂರ್ಣಾಂಕಗಳಾದಾಗ,

$a = 4q + r$, ಇಲ್ಲಿ $0 \le r < 4$ ಮತ್ತು q ಒಂದು ಪೂರ್ಣಾಂಕ.

$0 \le r < 4$

$\Rightarrow r = 0, 1, 2, 3.$

$\Rightarrow a = 4q$ ಅಥವಾ $a = 4q + 1$ ಅಥವಾ $a = 4q + 2$ ಅಥವಾ $a = 4q + 3$

ಆದರೆ a ಯು ಒಂದು ಧನ ಪೂರ್ಣಾಂಕ

$\therefore a = 4q$ ಅಥವಾ $a = 4q + 2$

ಆದರೆ $a \neq 4q + 1$ ಅಥವಾ $a \neq 4q + 3$

ಆದ್ದರಿಂದ ಯಾವುದೇ ಧನ ಪೂರ್ಣಾಂಕವು 4q ಅಥವಾ 4q + 2 ರೂಪದಲ್ಲಿದ್ದು ಇಲ್ಲಿ $q \in w$

ಮುಂದುವರಿಯುವುದು

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಮಾದರಿ ಪ್ರಶ್ನೋತ್ತರ

ರಸಾಯನಶಾಸ್ತ್ರ

ಪಿಯುಸಿ

1) ಆವಿ ಒತ್ತಡದ ಇಳಿಕೆಗೆ ಸಂಬಂಧಿಸಿದಂತೆ ದ್ರಾವಣಗಳಿಗೆ ಅನೇಕ ಗುಣಲಕ್ಷಣಗಳಿವೆ ಅವುಗಳನ್ನು ತಿಳಿಸಿ

ಉತ್ತರ:- ಆವಿಶೀಲ ದ್ರಾವಕವೊಂದಕ್ಕೆ ಆವಿಶೀಲವಲ್ಲದ ದ್ರಾವ್ಯವೊಂದನ್ನು ಸೇರಿಸಿದಾಗ ದ್ರಾವಣದ ಆವಿ ಒತ್ತಡವು ಕಡಿಮೆಯಾಗುತ್ತದೆ ಈ ಆವಿ ಒತ್ತಡದ ಇಳಿಕೆಗೆ ಸಂಬಂಧಿಸಿದಂತೆ ದ್ರಾವಣಗಳಿಗೆ ಅನೇಕ ಗುಣಲಕ್ಷಣಗಳಿವೆ. ಅವುಗಳೆಂದರೆ

ಅ) ದ್ರಾವಕದ ಆವಿ ಒತ್ತಡದ ಸಾಪೇಕ್ಷ ಇಳಿಕೆ (Relative lowering of vapour pressure)

ಬ) ದ್ರಾವಕದ ಘನೀಕರಣ ಬಿಂದುವಿನ ಕುಸಿತ (Depression of freezing point of the solvent)

ಕ) ದ್ರಾವಕದ ಕುದಿ ಬಿಂದುವಿನ ಏರಿಕೆ (Elevation of boiling point of the solventಣ) ಮತ್ತು

ಡ) ದ್ರಾವಣದ ಪರಾಸರಣ ಒತ್ತಡ (Osmotic pressure of the solution)

2) ಯಾವುದನ್ನು ಕ್ರಿಯೆಯೊಂದರ ಅರ್ಧಾಯು ಎನ್ನುವರು.

ಉತ್ತರ:- ಒಂದು ಕ್ರಿಯಾಕಾರಕದ ಸಾರತೆಯನ್ನು ಆರಂಭಿಕ ಸಾರತೆಯ ಅರ್ಧದಷ್ಟು ಕಡಿಮೆ ಮಾಡಲು ತೆಗೆದುಕೊಳ್ಳುವ ಸಮಯವನ್ನು (ಕಾಲಾವಧಿಯನ್ನು) ಕ್ರಿಯೆಯೊಂದರ ಅರ್ಧಾಯು ಎನ್ನುವರು. ಇದನ್ನು t1/2 ಎಂದು ಸೂಚಿಸಲಾಗುತ್ತದೆ.

3) ಹ್ಯಾಲೋ ಆಲ್ಕೇನ್ ಮತ್ತು ಹ್ಯಾಲೋ ಅರೀನ್ ಉಪಯೋಗಗಳನ್ನು ಬರೆಯಿರಿ

ಉತ್ತರ:- ಹ್ಯಾಲೋಆಲ್ಕೇನಲ್ಲಿರುವ ಹ್ಯಾಲೋಜನ್ ಪರಮಾಣುವು ಆಲ್ಕೈಲ್ ಗುಂಪಿನ SP_2 ಸಂಕರಣದ ಕಾರ್ಬನ್ ಪರಮಾಣುವಿನೊಂದಿಗೆ ಬಂಧಿಸಲ್ಪಟ್ಟಿದೆ. ಆದರೆ ಹ್ಯಾಲೋ ಆರೀನ್‌ನಲ್ಲಿರುವ ಹ್ಯಾಲೋಜನ್ ಪರಮಾಣುವು ಆಲ್ಕೈಲ್ ಗುಂಪಿನ SP2 ಸಂಕರಣದ ಕಾರ್ಬನ್ ಪರಮಾಣುವಿಗೆ ಬಂಧಿಸಲ್ಪಟ್ಟಿದೆ.

ನಿಸರ್ಗದಲ್ಲಿ ಬಹಳಷ್ಟು ಹ್ಯಾಲೋಜನ್ ಸಂಯುಕ್ತಗಳಿವೆ. ಮತ್ತು ಅವುಗಳಲ್ಲಿ ಹಲವು ವೈದ್ಯಕೀಯ ಚಿಕಿತ್ಸೆಗೆ ಉಪಯುಕ್ತವಾಗಿವೆ. ಹ್ಯಾಲೋಜನ್ ಸಂಯುಕ್ತಗಳು ವ್ಯಾಪಕವಾಗಿ ಕೈಗಾರಿಕೆ ಮತ್ತು ನಿತ್ಯಜೀವನದಲ್ಲಿ ಉಪಯುಕ್ತವಾಗಿವೆ. ಇವುಗಳನ್ನು ಸಾಪೇಕ್ಷವಾದ ಅಧ್ರುವೀಯ ಸಂಯುಕ್ತಗಳಿಗೆ ದ್ರಾವಕವಾಗಿಯೂ ಮತ್ತು ಅನೇಕ ಸಾವಯವ ಸಂಯುಕ್ತಗಳ ಸಂಶ್ಲೇಷಣೆಯಲ್ಲಿ ಆರಂಭಿಕ ವಸ್ತುವಾಗಿಯೂ ಬಳಸುತ್ತಾರೆ. ಮಣ್ಣಿನ ಸೂಕ್ಷ್ಮಾಣು ಜೀವಿಯಿಂದ ಪಡೆದ 'ಕ್ಲೋರಾಂಫಿನಿಕಾಲ್' ಎಂಬ ಜೀವ ನಿರೋಧಕ ವಿಷಮಶೀತಜ್ವರದ ಚಿಕಿತ್ಸೆಗೆ ಅತ್ಯಂತ ಪರಿಣಾಮಕಾರಿಯಾಗಿದೆ. ನಮ್ಮ ದೇಹವು ಅಯೋಡಿನ್ ಯುಕ್ತ 'ಥೈರೋಕ್ಸಿನ್' ಎಂಬ ಹಾರ್ಮೋನನ್ನು ಉತ್ಪತ್ತಿ ಮಾಡುತ್ತದೆ. ಇದರ ಕೊರತೆಯು ಗಾಯಿಟರ್ ರೋಗವನ್ನು ಉಂಟುಮಾಡುತ್ತದೆ. ಸಂಶ್ಲೇಷಿತ ಹ್ಯಾಲೋಜನ್ ಸಂಯುಕ್ತಗಳಾದ 'ಕೋರೋಕ್ವಿನ್' ನನ್ನು ಮಲೇರಿಯಾದ ಚಿಕಿತ್ಸೆಯಲ್ಲಿಯೂ, ಶಸ್ತ್ರಚಿಕಿತ್ಸೆಯಲ್ಲಿ 'ಹ್ಯಾಲೋಥೇನ್'ನ್ನು ಅರೆವಳಿಕೆಯಾಗಿಯೂ (ಅನಸ್ತೇಷಿಯಾ) ಬಳಸುತ್ತಾರೆ. ಸಂಪೂರ್ಣ ಫ್ಲೋರಿನ್‌ಯುಕ್ತ ಕೆಲವು ಸಂಯುಕ್ತಗಳು ಇಂದಿಗೂ ಶಸ್ತ್ರಚಿಕಿತ್ಸೆಯಲ್ಲಿ 'ಬದಲಿ ರಕ್ತ ಸಾಮರ್ಥ್ಯ'ವುಳ್ಳವುಗಳು (potential blood substitutes) ಎಂದು ಪರಿಗಣಿಸಲಾಗಿದೆ.

4) ಯಾವ ಕ್ರಿಯೆಯನ್ನು 'ಫಿಂಕಲ್‌ಸ್ಟೀನ್ ಕ್ರಿಯೆ' ಎನ್ನುವರು?

ಉತ್ತರ: ಕೆಲವೊಮ್ಮೆ ಆಲ್ಕೈಲ್ ಕ್ಲೋರೈಡ್/ಬ್ರೋಮೈಡ್ ಅನ್ನು ಶುಷ್ಕ ಅಸಿಟೋನ್‌ನಲ್ಲಿ NaIನೊಂದಿಗೆ ಕ್ರಿಯೆ ನಡೆಸಿ ಆಲ್ಕೈಲ್ ಅಯೋಡೈಡ್‌ಗಳನ್ನು ತಯಾರಿಸುತ್ತದೆ. ಈ ಕ್ರಿಯೆಯನ್ನು "ಫಿಂಕಲ್‌ಸ್ಟೀನ್ ಕ್ರಿಯೆ" ಎನ್ನುವರು.

5) ಯಾವ ರಾಸಾಯನಿಕ ಕ್ರಿಯೆಯನ್ನು 'ಸ್ವಾರ್ಟ್ಸ್' ಕ್ರಿಯ ಎನ್ನುವರು?

ಉತ್ತರ:- ಆಲ್ಕೈಲ್ ಕ್ಲೋರೈಡ್ /ಬ್ರೋಮೈಡ್‌ಗಳನ್ನು ಲೋಹೀಯ ಫ್ಲೋರೈಡ್‌ಗಳಾದ AgF.HgF2 CoF2 ಅಥವಾ SbF3 ಸಾನಿಧ್ಯದಲ್ಲಿ ಕಾಯಿಸಿ, ಆಲ್ಕೈಲ್ ಫ್ಲೋರೈಡ್‌ಗಳನ್ನು ಉತ್ತಮವಾಗಿ ಸಂಶ್ಲೇಷಿಸಬಹುದು. ಈ ರಾಸಾಯನಿಕ ಕ್ರಿಯೆಯನ್ನು 'ಸ್ವಾರ್ಟ್ಸ್' ಕ್ರಿಯ ಎನ್ನುವರು.

6) ಹ್ಯಾಲೋ ಆಲ್ಕೇನ್‌ಗಳು ನೀರಿನಲ್ಲಿ ಅತ್ಯಂತ ಅಲ್ಪ ಪ್ರಮಾಣದಲ್ಲಿ ಕರಗುತ್ತವೆ . ಏಕೆ?


ಉತ್ತರ: ಹ್ಯಾಲೋ ಆಲ್ಕೇನ್‌ಗಳು ನೀರಿನಲ್ಲಿ ಅತ್ಯಂತ ಅಲ್ಪ ಪ್ರಮಾಣದಲ್ಲಿ ಕರಗುತ್ತವೆ. ಹ್ಯಾಲೋ ಆಲ್ಕೇನ್‌ಗಳನ್ನು ನೀರಿನಲ್ಲಿ ಕರಗುವಂತೆ ಮಾಡಲು ಹ್ಯಾಲೋಆಲ್ಕೇನ್ ಅಣುಗಳ ನಡುವಿನ ಆಕರ್ಷಣಾ ಬಲವನ್ನು ತಡೆದು ಮತ್ತು ನೀರಿನ ಅಣುವಿನಲ್ಲಿರುವ ಹೈಡ್ರೋಜನ್ ಬಂಧವನ್ನು ಒಡೆಯಬೇಕಾಗುತ್ತದೆ. ಇದಕ್ಕೆ ಶಕ್ತಿಯ ಅಗತ್ಯವಿರುತ್ತದೆ. ಹ್ಯಾಲೋಆಲ್ಕೇನ್ ಮತ್ತು ನೀರಿನ ಅಣುವಿನ ನಡುವೆ ಹೊಸ ಆಕರ್ಷಣೆ ಉಂಟಾದಂತೆ ಕಡಿಮೆ ಶಕ್ತಿ ಬಿಡುಗಡೆಯಾಗುವುದು. ಈ ಬಂಧವು ನೀರಿನಲ್ಲಿರುವ ಮೂಲ ಹೈಡ್ರೋಜನ್ ಬಂಧದಷ್ಟು ಪ್ರಬಲವಾಗಿಲ್ಲ. ಹಾಗಾಗಿ ನೀರಿನಲ್ಲಿ ಹ್ಯಾಲೋಆಲ್ಕೇನ್‌ಗಳ ವಿಲೀನತೆ ಅತ್ಯಂತ ಕಡಿಮೆ.

7) ಡಿ.ಡಿ.ಟಿ(ಡೈಕ್ಲೋರೋಡೈ ಫಿನಾಯಿಲ್ ಟ್ರೈಕ್ಲೋರೋ ಈಥೇನ್) ಅದರ ಉಪಯುಕ್ತತೆ ಹಾಗೂ ಅದರ ದುಷ್ಪರಿಣಾಮ ಸಹಿತ ಇತರೇ ಅಂಶಗಳನ್ನು ಬರೆಯಿರಿ.

ಉತ್ತರ:- 1873ರಲ್ಲಿ ಕ್ಲೋರಿನೀಕರಣಗೊಂಡ ಪ್ರಪ್ರಥಮ ಸಾವಯವ ಕೀಟನಾಶಕ ಡಿ.ಡಿ.ಟಿಯನ್ನು ತಯಾರಿಸಿದ್ದರೂ. ಅದರ ಪರಿಣಾಮಕಾರಿ ಕೀಟನಾಶಕತೆಯನ್ನು 1939ರಲ್ಲಿ ಸ್ವಿಟ್ಜರ್‌ಲೆಂಡ್‌ನ ಔಷಧಿ ತಯಾರಿಕಾ ಘಟಕದ ಪೌಲ್ ಮುಲ್ಲರ್ ಕಂಡುಹಿಡಿದರು. ಈ ಆವಿಷ್ಕಾರಕ್ಕಾಗಿ ಪೌಲ್ ಮುಲ್ಲರ್ 1948ರಲ್ಲಿ ವೈದ್ಯಕೀಯ ಮತ್ತು ಶಾರೀರಿಕ ವಿಜ್ಞಾನದ ನೊಬೆಲ್ ಬಹುಮಾನವನ್ನು ಪಡೆದರು.

ಟೈಫಾಯಿಡ್ ಮತ್ತು ಮಲೇರಿಯಾ ರೋಗವನ್ನು ಹರಡುವ ಸೊಳ್ಳೆಯ ವಿರುದ್ಧದ ಪ್ರಭಾವಕಾರಿ ಪರಿಣಾಮದಿಂದಾಗಿ ಪ್ರಪಂಚದ ಎರಡನೇ ಮಹಾಯುದ್ಧದ ನಂತರ ಡಿ.ಡಿ.ಟಿಯನ್ನು ವಿಶ್ವದಾದ್ಯಂತ ಅಗಾಧವಾಗಿ ಬಳಸಲಾಗುತ್ತಿದೆ. 1940ರ ನಂತರ ಡಿ.ಡಿ.ಟಿ ಯ ಅತಿಯಾದ ಬಳಕೆಯಿಂದ ಉಂಟಾದ ಸಮಸ್ಯೆಗಳು ಕಾಣತೊಡಗಿದವು. ಹಲವಾರು ಪ್ರಬೇಧಗಳು ಡಿ.ಡಿ.ಟಿ ಪ್ರತಿರೋಧಿಸುವ ಸಾಮರ್ಥ್ಯಪಡೆದುದಲ್ಲದೆ, ಅದು ಮೀನುಗಳಿಗೆ ಅತ್ಯಂತ ವಿಷಯುಕ್ತವಾಗಿರುವುದು ಸಂಶೋಧನೆಯಿಂದ ಕಂಡು ಬಂದಿದೆ.

ಡಿ.ಡಿ.ಟಿ.ಯು ರಾಸಾಯನಿಕವಾಗಿ ಸ್ಥಿರವಾಗಿದ್ದು, ಕೊಬ್ಬನ್ನು ವಿಲೀನಗೊಳಿಸುವ ಸಂಯುಕ್ತವಾಗಿರುವುದು ಸಮಸ್ಯೆಯಾಗಿದೆ. ಡಿ.ಡಿ.ಟಿಯು ಪ್ರಾಣಿಗಳಲ್ಲಿ ಬೇಗ ಚಯಾಪಚ ಯಗೊಳ್ಳದೆ ಕೊಬ್ಬಿನ ಅಂಗಾಂಶಗಳಲ್ಲಿ ಸಂಗ್ರಹವಾಗುತ್ತ, ಸಂಚಯನಗೊಳ್ಳುತ್ತದೆ. ಹೀಗೆ ಆಹಾರದ ಮೂಲಕ ಡಿ.ಡಿ.ಟಿ ಸೇವನೆ ಮಾಡುತ್ತ ಹೋದರೆ ಪ್ರಾಣಿಗಳ ದೇಹದಲ್ಲಿ ನಿರಂತರವಾಗಿ ಶೇಖರಗೊಳ್ಳುತ್ತದೆ. 1973ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನವು ಡಿ.ಡಿ.ಟಿಯ ಬಳಕೆಯನ್ನು ನಿಷೇಧಿಸಿದ್ದರೂ ಪ್ರಪಂಚದ ವಿವಿಧ ಭಾಗಗಳಲ್ಲಿ ಅದರ ಬಳಕೆ ಈಗಲೂ ಮುಂದುವರಿದಿದೆ.



ಸುಭಾಷಿತ

ಜಗತ್ತಿನಲ್ಲಿ ಹೇಳುವವರಿಗಿಂತ, ಹೇಳಿದಂತೆ ನಡೆಯುವವರ ಯೋಗ್ಯತೆ ಹೆಚ್ಚಿನದು.

–ಗಳಗನಾಥ

ಪಾಕ್ ಸೇನಾ ಮುಖ್ಯಸ್ಥರಾಗಿ ಮುನೀರ್ ನಾಯಕತ್ವ ಗುಣಕ್ಕೆ ಅಗ್ನಿಪರೀಕ್ಷೆ

ಪಾಕಿಸ್ತಾನದ ಸೇನೆಯ ಮುಖ್ಯಸ್ಥ ಜನರಲ್ ಖಮರ್ ಜಾವೇದ್ ಬಾಜ್ವಾ ಅವರ ಉತ್ತರಾಧಿಕಾರಿ ಯಾರಾಗುತ್ತಾರೆ ಎಂಬ ಕುರಿತು ಕೆಲ ತಿಂಗಳುಗಳಿಂದ ಇದ್ದ ಊಹಾಪೋಹಕ್ಕೆ ತೆರೆಬಿದ್ದಿದೆ. ಲೆಫ್ಟಿನೆಂಟ್ ಜನರಲ್ ಅಸೀಮ್ ಮುನೀರ್ ಅವರನ್ನು ಸೇನೆಯ ಮುಖ್ಯಸ್ಥರನ್ನಾಗಿ ಅಲ್ಲಿನ ಪ್ರಧಾನಿ ಶೆಹಬಾಜ್ ಷರೀಫ್ ನೇಮಿಸಿದ್ದಾರೆ. ಮುನೀರ್ ಅವರು ಸೇನಾ ಗುಪ್ತಚರ ವಿಭಾಗ ಮತ್ತು ಗುಪ್ತಚರ ಸಂಸ್ಥೆ ಇಂಟರ್ ಸರ್ವಿಸಸ್ ಇಂಟೆಲಿಜೆನ್ಸ್‌ನ (ಐಎಸ್‌ಐ) ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ಮುನೀರ್ ಅವರು ಬಾಜ್ವಾ ಅವರಿಗೆ ನಿಷ್ಠರಾಗಿದ್ದ ಸೇನಾಧಿಕಾರಿ. ಸೇನೆಯ ಅತ್ಯುನ್ನತ ಹುದ್ದೆಗೆ ಸರ್ಕಾರವು ಪರಿಗಣನೆಗೆ ತೆಗೆದುಕೊಂಡ ಆರು ಜನರಲ್‌ಗಳಲ್ಲಿ ಮುನೀರ್ ಅವರೇ ಅತ್ಯಂತ ಹಿರಿಯರಾಗಿದ್ದರು. ಮುನೀರ್ ಅವರು ಅತ್ಯಂತ ದಕ್ಷವಾದ ಸೇವಾ ದಾಖಲೆಯನ್ನು ಹೊಂದಿದ್ದಾರೆ ಎಂದೂ ಹೇಳಲಾಗುತ್ತಿದೆ. ಸೇನೆಯ ಮುಂದಿನ ಮುಖ್ಯಸ್ಥರನ್ನಾಗಿ ಮುನೀರ್ ಅವರನ್ನು ಆಯ್ಕೆ ಮಾಡುವಲ್ಲಿ ಅಲ್ಲಿನ ಸರ್ಕಾರವು ಹಿರಿತನ ಮತ್ತು ಪ್ರತಿಭೆಗೆ ಮಣೆ ಹಾಕಿದೆ ಎಂಬುದು ಮೇಲ್ನೋಟಕ್ಕೆ ಕಾಣಿಸುತ್ತದೆ. ಎಲ್ಲ ರಾಜಕೀಯ ಪಕ್ಷಗಳೂ ಈ ನೇಮಕಕ್ಕೆ ಸಹಮತ ಸೂಚಿಸಿವೆ ಎಂದೂ ವರದಿಯಾಗಿದೆ. ಪಾಕಿಸ್ತಾನದ ರಾಜಕಾರಣವು ಸಂಪೂರ್ಣವಾಗಿ ಧ್ರುವೀಕರಣಗೊಂಡಿದೆ; ರಾಜಕೀಯದ ಭಾಗವೇ ಆಗಿದ್ದ ಸೇನೆಯು ತಾನು ರಾಜಕಾರಣದಲ್ಲಿ ಆಸಕ್ತಿಯನ್ನೇ ಹೊಂದಿಲ್ಲ ಎಂದು ಪದೇ ಪದೇ ಘೋಷಿಸಿದೆ; ಈ ಹೊತ್ತಿನಲ್ಲಿ ಸೇನಾ ಮುಖ್ಯಸ್ಥನ ಆಯ್ಕೆಯು ಸರ್ವಸಮ್ಮತವಾಗಿ ಆಗಿದೆ. ಹಾಗಿದ್ದರೂ ಮುನೀರ್ ಅವರ ಆಯ್ಕೆಯು ಎಲ್ಲ ಪ್ರಮುಖ ರಾಜಕೀಯ ಪಕ್ಷಗಳಿಗೂ ಒಪ್ಪಿತವಾಗಿದೆ ಎಂದು ನಂಬುವುದು ಕಷ್ಟ. ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಮುನೀರ್ ಅವರ ನೇಮಕವು ಪಥ್ಯವಾಗಿಲ್ಲ. ಬಾಜ್ವಾ ಮತ್ತು ಇಮ್ರಾನ್ ನಡುವೆ ಇತ್ತೀಚೆಗೆ ಸಂಘರ್ಷ ಏರ್ಪಟ್ಟಿತ್ತು. ಹೀಗಾಗಿ, ಬಾಜ್ವಾ ಅವರಿಗೆ ನಿಷ್ಠರಾಗಿರುವ ಮುನೀರ್ ನೇಮಕವನ್ನು ಇಮ್ರಾನ್ ಒಪ್ಪಿಕೊಳ್ಳುವುದು ಕಷ್ಟ.



ಭಾರತದ ಜೊತೆಗಿನ ಸಂಬಂಧವನ್ನು ಉತ್ತಮಪಡಿಸಿಕೊಳ್ಳುವ ದಿಸೆಯಲ್ಲಿ ಸರ್ಕಾರವು ಕೆಲಸ ಮಾಡಲು ಮುನೀರ್ ಅವರು ಅವಕಾಶ ಕೊಡಬಹುದೇ?

ಸೇನಾ ಮುಖ್ಯಸ್ಥರಾಗಿ ಮುನೀರ್ ಅವರು ಅಧಿಕಾರ ವಹಿಸಿಕೊಳ್ಳುತ್ತಿರುವ ಈ ಸನ್ನಿವೇಶವು ಅತ್ಯಂತ ಸವಾಲಿನದ್ದಾಗಿದೆ. ತಮ್ಮ ಪ್ರತಿಭಟನಾ ಜಾಥಾವನ್ನು ಕೈಬಿಡುವುದಾಗಿ ಇಮ್ರಾನ್ ಅವರು ಈಗ ಹೇಳಿದ್ದಾರೆ. ಆದರೆ, ಎಲ್ಲ ಶಾಸನಸಭೆಗಳಲ್ಲಿರುವ ತಮ್ಮ ಪಕ್ಷದ ಪ್ರತಿನಿಧಿಗಳಿಗೆ ರಾಜೀನಾಮೆ ನೀಡಲು ಸೂಚಿಸುವ ಮೂಲಕ ಚುನಾವಣೆಯನ್ನು ಅನಿವಾರ್ಯವಾಗಿಸುವ ಕಾರ್ಯತಂತ್ರವನ್ನು ಇಮ್ರಾನ್ ಹೆಣೆದಿದ್ದಾರೆ. ಇಮ್ರಾನ್ ಅವರ ಕಾರ್ಯತಂತ್ರವು ರಾಜಕೀಯ ಬಿಕ್ಕಟ್ಟು ಸೃಷ್ಟಿಸಿದರೆ, ಅದು ಮುನೀರ್ ಅವರು ಎದುರಿಸಬೇಕಾಗುವ ಮೊದಲ ಸವಾಲು ಆಗಬಹುದು. ಮಧ್ಯಪ್ರವೇಶಿಸುವ ಪ್ರಲೋಭನೆಯನ್ನು ನಿಯಂತ್ರಿಸಿಕೊಳ್ಳುವುದು ಅವರಿಗೆ ಸಾಧ್ಯವಾಗಬಹುದೇ? ಅವರು ಈ ಅವಕಾಶವನ್ನು ಸೇಡು ತೀರಿಸಿಕೊಳ್ಳಲು ಬಳಸಿಕೊಳ್ಳಬಹುದೇ? ದೇಶವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಬಹುದೇ? ಪಾಕಿಸ್ತಾನದ ಆಂತರಿಕ ಸುರಕ್ಷತೆಯು ಶೋಚನೀಯ ಸ್ಥಿತಿಯಲ್ಲಿದೆ. ತೆಹ್ರೀಕ್ ಎ ತಾಲಿಬಾನ್ ಪಾಕಿಸ್ತಾನ (ಟಿಟಿಪಿ) ಉಗ್ರ ಸಂಘಟನೆಯು ಗಂಭೀರವಾದ ಬೆದರಿಕೆಯಾಗಿದೆ. ಇದು ಅಫ್ಗಾನಿಸ್ತಾನದ ತಾಲಿಬಾನ್ ಸರ್ಕಾರದ ಜೊತೆಗೆ ಪಾಕಿಸ್ತಾನದ ಸಂಬಂಧದ ಮೇಲೆಯೂ ಕರಿಛಾಯೆ ಬೀರುತ್ತದೆ. ಟಿಟಿಪಿ ಮತ್ತು ಬಲೂಚ್ ಪ್ರದೇಶದಲ್ಲಿನ ಭಯೋತ್ಪಾದನೆಯ ವಿಚಾರದಲ್ಲಿ ಪಾಕಿಸ್ತಾನ ಸರ್ಕಾರ ತೆಗೆದುಕೊಳ್ಳುವ ನಿರ್ಧಾರಗಳನ್ನು ಸೇನೆಯು ಬೆಂಬಲಿಸಬಹುದೇ? ಭಾರತದ ಜೊತೆಗಿನ ಸಂಬಂಧದ ಕುರಿತೂ ಗಮನ ಹರಿಸಬೇಕಿದೆ. ಭಾರತದ ಜೊತೆಗಿನ ಸಂಬಂಧವನ್ನು ಉತ್ತಮಪಡಿಸಿಕೊಳ್ಳುವ ದಿಸೆಯಲ್ಲಿ ಸರ್ಕಾರವು ಕೆಲಸ ಮಾಡಲು ಮುನೀರ್ ಅವರು ಅವಕಾಶ ಕೊಡಬಹುದೇ? ಅಥವಾ ಕದನವಿರಾಮ ಉಲ್ಲಂಘನೆ ಮತ್ತು ಉಗ್ರರನ್ನು ಭಾರತಕ್ಕೆ ಕಳುಹಿಸುವ ಐಎಸ್‌ಐ ಮತ್ತು ಸೇನೆಯ ಈ ಹಿಂದಿನ ಕುತಂತ್ರವನ್ನೇ ಮುನೀರ್ ಅವರೂ ಅನುಸರಿಸಲಿದ್ದಾರೆಯೇ?

ಸ್ವಾತಂತ್ರ್ಯ ಬಂದಾಗಿನಿಂದಲೂ ಪಾಕಿಸ್ತಾನದಲ್ಲಿ ಆಳ್ವಿಕೆ ನಡೆಸಿರುವ ಎಲ್ಲ ಸರ್ಕಾರಗಳೂ ಸೇನೆಯ ಮೇಲೆ ಒಂದು ಕಣ್ಣಿಟ್ಟುಕೊಂಡೇ ಇದ್ದವು. ಗಡಿಯಲ್ಲಿನ ಸುರಕ್ಷತೆಯನ್ನು ಖಾತರಿಪಡಿಸುವುದು ಮುನೀರ್ ಅವರ ಹೊಣೆಗಾರಿಕೆಯಾಗಿದೆ. ಪಾಕಿಸ್ತಾನವು ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದೆ. ಸೇನಾ ವೆಚ್ಚವನ್ನು ಕಡಿತಗೊಳಿಸುವ ಮೂಲಕ ಮುನೀರ್ ಅವರು ಸಕಾರಾತ್ಮಕ ಸಂದೇಶ ರವಾನಿಸಬಹುದು. ಈ ಮೂಲಕ ಜನರಿಗೆ ಹೆಚ್ಚು ಉತ್ತರದಾಯಿ ಎನಿಸಿಕೊಳ್ಳಬಹುದು.

ದಿನದ ಟ್ವೀಟ್

ಸಂಕಥನ ಕಟ್ಟುವವರು

ಸಂಕಥನವೊಂದನ್ನು ಚೆನ್ನಾಗಿ ಕಟ್ಟಲು ಸಾಧ್ಯವಾಗುವ ರಾಜಕಾರಣಿ ಯಶಸ್ಸನ್ನು ಕಾಣುವ ಕಾಲಘಟ್ಟ ಇದು. ಆಡಳಿತದ ಬಗ್ಗೆ ಯಾರಿಗೂ ಈಗ ಆಸಕ್ತಿ ಇಲ್ಲ.



ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ

ಸಿಬಿಐ, ಎನ್‌ಐಎ, ಇ.ಡಿ. ಮತ್ತು ಐ.ಟಿ. ಇಲಾಖೆಯ ರೀತಿಯಲ್ಲೇ ಇಡೀ ದೇಶಕ್ಕೆ ಅನ್ವಯವಾಗುವ, ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ ಡಿಜಿಟಲ್ ಸುರಕ್ಷತಾ ಪಡೆಯೊಂದು ನಮಗೆ ಬೇಕಾಗಿದೆ. ಕಾನೂನುಬದ್ಧ ಮುಟ್ಟುಗೋಲು, ತಟಸ್ಥಗೊಳಿಸುವಿಕೆ, ಕೃತಕ ಬುದ್ಧಿಮತ್ತೆ ಬಳಕೆ ಜೊತೆಗೆ ಹ್ಯಾಕಿಂಗ್ ವಿರೋಧಿ ಕ್ರಮಗಳನ್ನು ಬಳಸಿ ನಮ್ಮ ಪ್ರಮುಖ ಡಿಜಿಟಲ್ ಸ್ವತ್ತುಗಳನ್ನು ರಕ್ಷಿಸಲು ಇದು ಬೇಕಾಗಿದೆ. ಡಿಜಿಟಲ್ ಕಾನೂನು ಜಾರಿ ವ್ಯವಸ್ಥೆ ನಮಗೆ ಬೇಕು. ಡಿಜಿಟಲ್ ಅಪರಾಧಿಗಳು ಭವಿಷ್ಯದಲ್ಲಿ ಹೆಚ್ಚಾಗಲಿದ್ದಾರೆ.



ಭಾಸ್ಕರ್ ರಾವ್, ಎಎಪಿ ಮುಖಂಡ

25 ವರ್ಷಗಳ ಹಿಂದೆ

ಶನಿವಾರ, 29-11-1997

• ಕಾಂಗ್ರೆಸ್ ಬೆಂಬಲ ವಾಪಸ್; ಗುಜ್ರಾಲ್ ರಾಜೀನಾಮೆ

ನವದೆಹಲಿ, ನವೆಂಬರ್ 28– ಸಂಯುಕ್ತರಂಗ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಕಾಂಗ್ರೆಸ್ ಇಂದು ಸಂಜೆ ವಾಪಸು ಪಡೆದಿದ್ದರಿಂದಾಗಿ ಪ್ರಧಾನಿ ಐ.ಕೆ. ಗುಜ್ರಾಲ್ ನೇತೃತ್ವದ 7 ತಿಂಗಳ ಸರ್ಕಾರ ಪತನವಾಯಿತು. ಪ್ರಧಾನಿ ಗುಜ್ರಾಲ್ ಅವರು ಸಲ್ಲಿಸಿದ ರಾಜೀನಾಮೆಯನ್ನು ರಾಷ್ಟ್ರಪತಿ ಅವರು ರಾತ್ರಿ ಅಂಗೀಕರಿಸಿದರು.

ಗುಜ್ರಾಲ್ ಅವರು ತಮ್ಮ ರಾಜೀನಾಮೆ ಪತ್ರವನ್ನು ರಾಷ್ಟ್ರಪತಿಗೆ ಇಂದು ರಾತ್ರಿ ಸಲ್ಲಿಸಿದ್ದಾರೆ. ಅವರ ರಾಜೀನಾಮೆಯನ್ನು ಅಂಗೀಕರಿಸಿದ ರಾಷ್ಟ್ರಪತಿ ಅವರು ಮುಂದಿನ ವ್ಯವಸ್ಥೆಯಾಗುವವರೆಗೆ ಅಧಿಕಾರದಲ್ಲಿ ಮುಂದುವರಿಯಲು ಗುಜ್ರಾಲ್ ಅವರಿಗೆ ಸೂಚಿಸಿದ್ದಾರೆ ಎಂದು ರಾಷ್ಟ್ರಪತಿ ಭವನದ ಪ್ರಕಟಣೆ ತಿಳಿಸಿದೆ.

• ಯಾವ ಪಕ್ಷದ ಸರ್ಕಾರಕ್ಕೂ ಸಂಯುಕ್ತರಂಗದ ಬೆಂಬಲವಿಲ್ಲ

ನವದೆಹಲಿ, ನವೆಂಬರ್ 28– ಅಧಿಕಾರ ಕಳೆದುಕೊಂಡ 160 ಸದಸ್ಯ ಬಲವುಳ್ಳ ಹದಿನಾಲ್ಕು ಪಕ್ಷಗಳ ಸಂಯುಕ್ತರಂಗವು ಬಿಜೆಪಿ ಅಥವಾ ಕಾಂಗ್ರೆಸ್ ಅಥವಾ ಬಿಜೆಪಿ ಬೆಂಬಲ ಪಡೆದು ರಚಿಸುವ ಯಾವುದೇ ಸರ್ಕಾರಕ್ಕೂ ತನ್ನ ಬೆಂಬಲವನ್ನು ನೀಡದಿರಲು ನಿರ್ಧರಿಸಿದೆ.

ಸಂಯುಕ್ತರಂಗದಲ್ಲಿನ ಪ್ರತಿಯೊಂದು ಪಕ್ಷದಿಂದ ಪಡೆದಿರುವ ಈ ಲಿಖಿತ ನಿರ್ಧಾರವನ್ನು ರಂಗದ ಸಂಚಾಲಕ ಎನ್.ಚಂದ್ರಬಾಬು ನಾಯ್ಡು ಅವರು, ರಂಗದ ಎಲ್ಲ ನಾಯಕರ ನಿಯೋಗವನ್ನು ರಾಷ್ಟ್ರಪತಿ ಭವನಕ್ಕೆ ಕರೆದೊಯ್ದು ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರಿಗೆ ಪತ್ರವೊಂದನ್ನು ಸಲ್ಲಿಸುವ ಮೂಲಕ ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 29-11-1972

• ಅಭಾವದ ಜಿಲ್ಲೆಗಳ ಸ್ಥಿತಿ ಅಧ್ಯಯನಕ್ಕೆ ಶಾಸಕರ ತಂಡ

ಬೆಂಗಳೂರು, ನವೆಂಬರ್ 28– ಘೋಷಣೆ, ದೂಷಣೆಗಳ ಗೊಂದಲದ ನಡುವೆ ವಿರೋಧ ಪಕ್ಷದ ಸದಸ್ಯರು ಯಶಸ್ವಿಯಾಗಿ ನಡೆಸಿದ ಧರಣಿ ಸತ್ಯಾಗ್ರಹವನ್ನನುಸರಿಸಿ, ಅಭಾವ ಪೀಡಿತ ಜಿಲ್ಲೆಗಳ ಖುದ್ದು ಅಧ್ಯಯನಕ್ಕಾಗಿ ಶಾಸಕರ ತಂಡವೊಂದನ್ನು ರಚಿಸಿ ಕಳುಹಿಸಲು, ಸರ್ಕಾರ ಇಂದು ವಿಧಾನಸಭೆಯಲ್ಲಿ ಒಪ್ಪಿಕೊಂಡಿತು.

ಕಲ್ಬುರ್ಗಿ, ಬೀದರ, ಬಿಜಾಪುರ, ಬೆಳಗಾವಿ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ನಾಲ್ಕೈದು ದಿನಗಳ ಕಾಲ ಪ್ರವಾಸ ಮಾಡಿ, ಒಂದು ವಾರದಲ್ಲಿ ಚರ್ಚೆಗೆ ವರದಿ ಸಲ್ಲಿಸಲಿರುವ ಹತ್ತು ಮಂದಿ ಸದಸ್ಯರ ಸಮಿತಿಯನ್ನು ವಿರೋಧ ಪಕ್ಷದ ನಾಯಕರೊಂದಿಗೆ ಸಮಾಲೋಚಿಸಿ, ನಾಳೆ ಮುಖ್ಯಮಂತ್ರಿ ದೇವರಾಜ ಅರಸು ಅವರು ಪ್ರಕಟಿಸಲಿದ್ದಾರೆ.

• ಭಾರತ-ಪಾಕಿಸ್ತಾನ್ ಮುಖ್ಯ ದಂಡನಾಯಕರ ಮಾತುಕತೆ ವಿಫಲ

ನವದೆಹಲಿ, ನವೆಂಬರ್ 28– ಶಿಮ್ಲಾ ಒಪ್ಪಂದದ ಜಾರಿಗೆ ತಡೆಯುಂಟು ಮಾಡಿರುವ ಠಾಕೂರ್ ಚೌಕ್ ಪ್ರಶ್ನೆಯನ್ನು ಬಗೆಹರಿಸಲು ಭಾರತ ಮತ್ತು ಪಾಕಿಸ್ತಾನದ ಪ್ರಧಾನ ದಂಡನಾಯಕರು ಇಂದು ವಿಫಲರಾಗಿ ಪ್ರಶ್ನೆಯನ್ನು ತಂತಮ್ಮ ಸರ್ಕಾರಗಳಿಗೆ ಮತ್ತೆ ಪರಿಶೀಲನೆಗೆ ಒಪ್ಪಿಸಲು ನಿರ್ಧರಿಸಿದರು.

ಲಾಹೋರಿನಲ್ಲಿ ನಡೆದ ಈ ಮಾತುಕತೆಗಳಿಗೆ ಹೋಗಿದ್ದ ಭಾರತದ ಪ್ರಧಾನ ದಂಡನಾಯಕ ಜನರಲ್ ಮಾಣೆಕ್ ಷಾ ಅವರು ಪಾಕಿಸ್ತಾನದ ಪ್ರಧಾನ ದಂಡನಾಯಕ ಜನರಲ್ ಟಿಕ್ಕಾಖಾನ್‌ರ ಜತೆ ಚರ್ಚೆ ನಡೆಸಿದ ನಂತರ ಸಂಜೆ ಆರಕ್ಕೆ ಮುಂಚೆಯೇ ದೆಹಲಿಗೆ ವಾಪಸ್ ಆದರು.

ಮತಭಿಕ್ಷೆಗೆ ಹೊರಟುನಿಂತ ರಾಜಕೀಯ ಪಕ್ಷಗಳ ಮುಖಂಡರಿಗೊಂದು ಪತ್ರ

ಕುಚೇಲರ ಕನಸುಗಳು ಹೆಚ್ಚೇನಿಲ್ಲ!



ಅನುಸಂಧಾನ

ರವೀಂದ್ರ ಭಟ್ಟ

ಪ್ರಿಯ ರಾಜಕಾರಣಿಗಳೇ,

ನನಗೆ ಗೊತ್ತು. ಇನ್ನೇನು ವಿಧಾನಸಭೆ ಚುನಾವಣೆ ಬಂದೇ ಬಿಡ್ತು. ನೀವು ನಮ್ಮ ಮನೆಯ ಬಾಗಿಲಿಗೆ ಬರ್ತೀರಿ. ಭೂಮಿ ಉದ್ದಕ್ಕೂ ಮೈ ಬಗ್ಗಿಸುತ್ತೀರಿ. ಅಂಗೈಯಲ್ಲಿ ಆಕಾಶ ತೋರಿಸ್ತೀರಿ. ಮುಂಗೈಯಲ್ಲಿ ಮ್ಯಾಜಿಕ್ ಮಾಡ್ತೀರಿ. ಚಿಟಿಕೆ ಹೊಡೆಯುವುದರಲ್ಲಿ ನಮ್ಮ ಕನಸು ನನಸು ಮಾಡುವ ಭರವಸೆ ಕೊಡ್ತೀರಿ. ಸಾಲ ಕೊಡ್ತೀವಿ ಅಂತೀರಿ. ಸಬ್ಸಿಡಿ ಕೊಡ್ತೀವಿ ಅಂತೀರಿ. ಮನೆ ಕಟ್ಟಿಸಿಕೊಡ್ತೀವಿ ಅಂತೀರಿ. ನಮ್ಮ ಒಂದು ಮತಕ್ಕಾಗಿ ಮನಸೋ ಇಚ್ಛೆ ಮಾತನಾಡುತ್ತೀರಿ. ಮತ ಕೊಟ್ಟಾದ ಮೇಲೆ ಕೊಟ್ಟವ ಕೋಡಂಗಿ ಅಂತೀರಿ. ಬೆಲೆ ಏರಿಸಲ್ಲ ಅಂತೀರಿ. ಉಚಿತವಾಗಿಯೇ ಏನೇನೋ ಕೊಡ್ತೀವಿ ಅಂತೀರಿ. ಆಮೇಲೆ ನಾವು ತಿನ್ನುವ ಅನ್ನದ ಬಟ್ಟಲಿಗೆ ಬೆಲೆ ಏರಿಕೆಯ ಬಿಸಿ ತಾಗಿದರೆ 'ಡಾಲರ್ ಬಲಗೊಳ್ಳುತ್ತಿದೆ ಏನ್ ಮಾಡ್ಲಿ' ಅಂತೀರಿ. ಅದೆಲ್ಲ ಬಿಟ್ಟುಬಿಡಿ. ನಮ್ಮ ಕನಸುಗಳಿಗೂ ಕೊಂಚ ಬೆಲೆ ಕೊಡಿ ಪ್ಲೀಸ್.

ನೀವು ಈಗಾಗಲೇ ನಮ್ಮ ಮನೆಯ ಕಡೆಗೆ ಹೊರಟು ನಿಂತಿದ್ದೀರಿ ಅಂತಲೂ ಗೊತ್ತು. ಅದು ಭಾರತ ಜೋಡೊ ಯಾತ್ರೆ ನೆಪದಲ್ಲಿ, ಜನಸಂಕಲ್ಪ ಯಾತ್ರೆ ಹೆಸರಿನಲ್ಲಿ, ಪಂಚರತ್ನದ ವರಸೆಯಲ್ಲಿ ಬರ್ತಾ ಇದ್ದೀರಿ. ಬನ್ನಿ, ಬನ್ನಿ. ನಿಮ್ಮ ಮಾತುಗಳನ್ನು ನಾವು ಕೇಳ್ತೀವಿ. ಆದರೆ ನಿಮ್ಮ ಭಾಷಣಗಳಲ್ಲಿ ಬರೀ ನಿಮ್ಮ ಕನಸುಗಳೇ ತುಂಬಿವೆ. ಬಣ್ಣ ಬಣ್ಣದ ಮಾತಲ್ಲಿ ನಿಮ್ಮ ಸಾಧನೆ ವರ್ಣಿಸ್ತೀರಿ. ನಮಗಾಗಿ ಸ್ವರ್ಗ ಧರೆಗಿಳಿಸುತ್ತೀವಿ ಎನ್ನುತ್ತೀರಿ. ಆದರೆ ಅದರಲ್ಲಿ ನಮಗೆ ಜಾಗವೇ ಇಲ್ಲವಲ್ಲ. ನೀವು ವೇದಿಕೆಯಲ್ಲಿ ಹರಿಸುವ ಕಣ್ಣೀರು, ಮಾತಿನಲ್ಲಿ ಕಾರುವ ಗೊಬ್ಬರ ನಿಮಗೆ ಮತದ ಫಸಲನ್ನು ಕೊಡಬಹುದು. ನಿಮ್ಮ ಕನಸುಗಳೂ ನನಸಾಗಬಹುದು. ಆದರೆ ನಮ್ಮ ಕಣ್ಣೀರು ನಿಮ್ಮ ಕಣ್ಣಿಗೆ ಕಾಣುವುದಿಲ್ಲ. ನಮ್ಮ ಕಣ್ಣೀರು ಭೂಮಿಗೆ ಸೇರಿದರೂ ಫಸಲು ಸಿಗುವುದಿಲ್ಲ. ಸಾಗರವನ್ನೂ ತಲುಪುವುದಿಲ್ಲ. ಈಗಲಾದರೂ ನಮ್ಮ ಅಹವಾಲನ್ನು ಒಂದಿಷ್ಟು ಕೇಳಿ. ನಾವು ಕುಚೇಲರು. ನಮ್ಮ ಕನಸುಗಳು ಹೆಚ್ಚೇನಿಲ್ಲ.

ನೀವು, ಇತಿಹಾಸ ಬದಲಿಸುತ್ತೀವಿ ಎನ್ನುತ್ತೀರಿ. ಸಂವಿಧಾನದ ತಪ್ಪುಗಳನ್ನು ಸರಿಪಡಿಸುತ್ತೀವಿ ಎನ್ನುತ್ತೀರಿ. ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುತ್ತೀವಿ ಎನ್ನುತ್ತೀರಿ. ಶಾಲಾ ಪಠ್ಯದಲ್ಲಿ ಭಾರತೀಯ ಸಂಸ್ಕೃತಿ ಬಿಂಬಿಸುತ್ತೇವೆ ಎನ್ನುತ್ತೀರಿ. ಟಿಪ್ಪುವಿನ ನಿಜಕನಸುಗಳನ್ನು ಬಯಲು ಮಾಡುವುದಾಗಿ ಹೇಳುತ್ತೀರಿ. ರಾಮಮಂದಿರ ಕಟ್ಟುತ್ತೀವಿ ಎನ್ನುತ್ತೀರಿ. ಕಾಶ್ಮೀರ ವಿಮೋಚನೆ ಮಾಡುತ್ತೀವಿ ಎನ್ನುತ್ತೀರಿ. ಭಯೋತ್ಪಾದನೆ ನಿಗ್ರಹಿಸುತ್ತೀವಿ ಎನ್ನುತ್ತೀರಿ. ಸತ್ಯ ಹೇಳಲಾ, ನೀವೇ ಭಯೋತ್ಪಾದಕರಂತೆ ಕಾಣಿಸುತ್ತೀರಿ.

ಮಕ್ಕಳ ತಲೆಯ ಮೇಲಿರುವ ಹಿಜಾಬ್ ತೆಗೆಸುತ್ತೇವೆ ಎನ್ನುತ್ತೀರಿ. ಒಂದು ದೇಶ ಒಂದು ಕಾರ್ಡ್, ಒಂದು ದೇಶ ಒಂದು ಚುನಾವಣೆ, ಒಂದು ದೇಶ ಒಂದು ಸಮವಸ್ತ್ರ ಎಂದೆಲ್ಲಾ ಡಂಗುರ ಸಾರುತ್ತೀರಿ. ಇತಿಹಾಸ ಮರುಸೃಷ್ಟಿ ಮಾಡುತ್ತೀವಿ ಎನ್ನುತ್ತೀರಿ. ಮೀಸಲಾತಿ ಹೆಚ್ಚಿಸುತ್ತೀವಿ ಎನ್ನುತ್ತೀರಿ. ಈ ಹೊತ್ತಲ್ಲೇ ಕುಕ್ಕರ್ ಸ್ಫೋಟ ಆಗುತ್ತದೆ. ಎಲ್ಲಾ ಓಕೆ. ನಮ್ಮದೊಂದು ಕೋರಿಕೆ. ಕನಿಷ್ಠ ಮುಂದಿನ ಐದು ವರ್ಷ ನೀವು ಏನೂ ಮಾಡದೆ ಸುಮ್ಮನಿದ್ದುಬಿಡಿ. ಯಾವುದನ್ನೂ ಬದಲಿಸಬೇಡಿ. ಯಾರನ್ನೂ ಬದಲಿಸಬೇಡಿ. ಎಲ್ಲದೂ ಅದರಷ್ಟಕ್ಕೆ ಅದು ನಡೆದುಕೊಂಡು ಹೋಗುವುದಕ್ಕೆ ವ್ಯವಸ್ಥೆ ಮಾಡಿ. ನೀವು ಇಷ್ಟು ಮಾಡಿದರೆ ಸಾಕು. ನೀವು ಮಾತನಾಡದಿದ್ದರೆ, ನೀವು ತೆರೆಮರೆಯಲ್ಲಿ ತಯಾರಿ ನಡೆಸದಿದ್ದರೆ, ನೀವು ತ್ರಿಶೂಲ ತಿರುಗಿಸದೇ ಇದ್ದರೆ, ನೀವು ಪರಸ್ಪರ ಕಚ್ಚಾಡದಿದ್ದರೆ, ನೀವು ಎಲ್ಲರೊಳಗೆ ಒಂದಾಗುವಂತಿದ್ದರೆ ಅದೇ ಒಂದು ಇತಿಹಾಸ ಸೃಷ್ಟಿಸುತ್ತದೆ. ಸುಮ್ಮನಿರುವುದಕ್ಕೂ ಸಂಯಮ ಬೇಕು. ಸುಮ್ಮನಿದ್ದರೆ ಸಾಕು. ಇತಿಹಾಸ ತನ್ನಿಂದತಾನೆ ಬದಲಾಗುತ್ತದೆ. ಕೈಮುಗಿತೀನಿ, ನಿಮ್ಮ ಬಡಾಯಿ ಬದಿಗಿಡಿ. ನಮ್ಮನ್ನು ನಮ್ಮಷ್ಟಕ್ಕೆ ಬದುಕಲು ಬಿಡಿ.

ನೀವು ಬಂದು ದೊಡ್ಡ ದೊಡ್ಡ ಯೋಜನೆಗಳನ್ನು ಹಾಕಿಕೊಳ್ಳುವುದೂ ಬೇಡ. ಶೇ 40ರಷ್ಟು ಲಂಚ ಪಡೆಯುವುದೂ ಬೇಡ. ನಮ್ಮ ಹೆಸರಿನಲ್ಲಿ ಲಕ್ಷ ಲಕ್ಷ ಮನೆ ಕಟ್ಟಿಕೊಡುವುದೂ ಬೇಡ. ನಿಮ್ಮ ಮೊಗಸಾಲೆಗಳು ದೊಡ್ಡದಾಗುವುದೂ ಬೇಡ. ಶಾಲೆಗಳಿಗೆ ಹೊಸ ಬಣ್ಣ ಬಳಿಯುವುದೂ ಬೇಡ. ನಮಗೆ ಬುಲೆಟ್ ಟ್ರೈನೂ ಬೇಡ, ಆಕಾಶಕ್ಕೆ ಏಣಿಯೂ ಬೇಡ. ಶಾಲೆಗಳಿಗೆ ಪಾಠಕ್ಕೆ ಸಲಕರಣೆ, ಆಟೋಟಕ್ಕೆ ಸೌಲಭ್ಯ ಕೊಡಿ ಸಾಕು. ನಮ್ಮ ತಾಯಿ ನುಡಿಯನ್ನು ಸರಿಯಾಗಿ ಕಲಿಸಿಕೊಡಿ. ಎಲ್ಲ ವಿಷಯ ಕಲಿಸಲು ಮೇಷ್ಟ್ರ ನೇಮಕ ಮಾಡಿಬಿಡಿ. ಖಾಸಗಿ ಶಾಲೆಗಳ ಸುಲಿಗೆಯನ್ನು ತಡೆದುಬಿಡಿ. ಕಂದಮ್ಮಗಳ ಮೇಲೆ ಅತ್ಯಾಚಾರವಾಗುವುದನ್ನು ತಪ್ಪಿಸಿ. ನಮ್ಮ ಮಕ್ಕಳಿಗೆ ಶೌರ್ಯದ ಪಾಠಗಳು ಬೇಡ. ಕೌಶಲದ ಪಾಠಗಳನ್ನು ಕೊಡಿ. ದುಡಿದು ತಿನ್ನುವ ಕೈಗಳಿಗೆ ಕೆಲಸ ಕೊಡಿ. ಹೆರಿಗೆ ಮಾಡಿಸಿದ್ದಕ್ಕೆ ಲಂಚ ಕೇಳುವ ವೈದ್ಯರನ್ನು ತಯಾರು ಮಾಡಬೇಡಿ. ನಮ್ಮ ಮಕ್ಕಳು ಸರ್ಕಾರಿ ಕೆಲಸಕ್ಕೆ ಅರ್ಜಿ ಸಲ್ಲಿಸಿದಾಗ ಲಂಚಕ್ಕೆ ಅದನ್ನು ಮಾರಿಕೊಳ್ಳಬೇಡಿ. ಕೊನೆಗೆ ಸಿಕ್ಕಿಬಿದ್ದಾಗ ಒಬ್ಬರನ್ನೊಬ್ಬರು ಬೈದಾಡಬೇಡಿ. 'ಅವರು ಮಾಡಲಿಲ್ವೆ, ಇವರು ಮಾಡಲಿಲ್ವೆ' ಎಂದು ಕೇಳಿ ನಮ್ಮನ್ನು ಕನ್‌ಫ್ಯೂಸ್ ಮಾಡಬೇಡಿ. ನಮಗೆ ಗೊತ್ತು ಎಲ್ಲರೂ ಮಾಡಿದ್ದು ಇದನ್ನೇ ಅಂತ. ಅದಕ್ಕೇ ನಾವೀಗ ನಿಮಗೆ ಎಲ್ಲರಿಗೂ ಸೇರಿ ಪತ್ರ ಬರೆಯುತ್ತಿರುವುದು. ನಮ್ಮ ಕನಸುಗಳು ಹೆಚ್ಚೇನಿಲ್ಲ.

ಕುಸಿಯುವ ಸೇತುವೆ ಕಟ್ಟುವ ಪಾಠ ಹೇಳಿಕೊಡಬೇಡಿ. ನಮ್ಮ ಮಕ್ಕಳಿಗೆ ಸಂಪರ್ಕದ ಸೇತುವೆ ಕಲಿಸಿ. ಸೌಹಾರ್ದದ ಸೇತುವೆ ಕಟ್ಟುವುದನ್ನು ಕಲಿಸಿ. ಎಲ್ಲ ಮತಗಳ ಎಲ್ಲೆ ಮೀರಿ ಬದುಕುವುದನ್ನು ಕಲಿಸಿ. ವಿಶ್ವಮಾನವರನ್ನು ಕುಬ್ಜ ಮಾನವರನ್ನಾಗಿ ಮಾಡಬೇಡಿ. ಅಪ್ಪಪಥ, ದಶಪಥ ಎಂದು ವಿಶ್ವಪಥವನ್ನು ಹಾಳುಮಾಡಬೇಡಿ. ಮನುಜಮತಕ್ಕೆ ನೆರವಾಗಿ. ಇಷ್ಟೇ ಇಷ್ಟು ಮಾಡಿದರೆ ಸಾಕು. ನೀವು ವಿಶ್ವ ಗುರು ಆಗ್ತೀರಿ. ನಾವೂ ವಿಶ್ವಮಾನವರಾಗಿಯೇ ಇರ್ತೇವೆ.


ನಾವು ಹಂಚಿಕೊಂಡು ಉಣ್ಣುತ್ತೇವೆ. ನೀವು ಕಿತ್ತುಕೊಂಡು ಉಣ್ಣುವ ಕಲೆ ಕಲಿಸಬೇಡಿ. ನಾವು ದುಡಿದು ತಿನ್ನುತ್ತೇವೆ. ನಿಮ್ಮ ಮೋಜಿಗೂ ಮಸ್ತಿಗೂ ನಾವೇ ದುಡಿದುಕೊಡ್ತೇವೆ. ಆದರೆ ನಮ್ಮ ಊಟದ ತಟ್ಟೆಗೆ ನೀವು ಕೈಹಾಕಬೇಡಿ. ನಮ್ಮದೊಂದೇ ಬೇಡಿಕೆ, ನಮ್ಮನ್ನು ನಮ್ಮಷ್ಟಕ್ಕೆ ಬಿಟ್ಟುಬಿಡಿ. ಆ ಪಕ್ಷ ಗೆದ್ದು ಬಂತು ಅಂತ ಆ ಪಕ್ಷದ ಶಾಸಕರನ್ನು ಖರೀದಿಸಿ ಸರ್ಕಾರ ರಚನೆ ಮಾಡಬೇಡಿ. ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಹಾರಬೇಕು ಅಂತಿದ್ದರೆ ಈಗಲೇ ಹಾರಿ ಹೋಗಿ. ಚುನಾವಣೆ ನಂತರ ಹಾರಿ ನಮ್ಮನ್ನು ಹಾದಿ ತಪ್ಪಿಸಬೇಡಿ. ನೀವೂ ತಪ್ಪಬೇಡಿ. ನಮ್ಮ ಹೆಸರಿನಲ್ಲಿ ನೀವು ಹಾರುಗುಪ್ಪೆ ಆಟ ಆಡೋದನ್ನು ಬಿಟ್ಟುಬಿಡಿ.

ನೀವು ಹೆಚ್ಚೇನೂ ಮಾಡಬೇಕಾಗಿಲ್ಲ. ಅಂಬೇಡ್ಕರ್ ಅವರು ನಮಗೆ ಅತ್ಯಂತ ಸೂಕ್ತವಾದ ಸಂವಿಧಾನವನ್ನು ಕೊಟ್ಟಿದ್ದಾರೆ. ಅದರಲ್ಲಿ ಎಲ್ಲವೂ ಇವೆ. ನಮ್ಮ ನೆಮ್ಮದಿಯೂ ಅದರಲ್ಲಿಯೇ ಅಡಗಿದೆ. ಅದರಂತೆ ನಡೆದುಕೊಂಡರೆ ಸಾಕು. ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಕ್ಕೆ ಕುಂಟು ನೆಪಗಳನ್ನು ಹೇಳಲು ತಡಕಾಡಬೇಡಿ. ಇಷ್ಟೇ ನಮ್ಮ ಪ್ರಾರ್ಥನೆ.

ನಮಗೆ ಗೊತ್ತು. ನಿನ್ನೆ ಚೆನ್ನಾಗಿರಲಿಲ್ಲ. ಏನೇನೋ ಆಗಿಹೋಯ್ತು. ಅದೊಂದು ಕೆಟ್ಟ ಕನಸು. ಥಟ್ಟಂತ ಅದನ್ನು ಮರೆಯುವುದಕ್ಕೂ ಆಗಲ್ಲ. ಆದರೂ ಬಲವಂತವಾಗಿ ಅದನ್ನು ಮರೆತುಬಿಡೋಣ. ಗಾಯವನ್ನು ಕೆರೆದುಕೊಳ್ಳುವುದು ಬೇಡ. ಕೆರೆದಷ್ಟೂ ಗಾಯ ಹೆಚ್ಚಾಗುತ್ತದೆ. ಕೀವಾಗುತ್ತದೆ. ಕೊಳೆಯುತ್ತದೆ. ನಂತರ ಗಾಯವಾದ ಅಂಗವನ್ನು ಕತ್ತರಿಸಿ ಹಾಕಬೇಕಾಗುತ್ತದೆ. ಕೆರೆದುಕೊಳ್ಳುವ ಬಯಕೆಯನ್ನು ನಿಯಂತ್ರಿಸುವುದು ಕಷ್ಟ. ಆದರೆ ನಮಗಾಗಿ, ನಮ್ಮ ಮಕ್ಕಳಿಗಾಗಿ, ಮೊಮ್ಮಕ್ಕಳ ಭವಿಷ್ಯಕ್ಕಾಗಿ ಕೆರೆಯುವುದನ್ನು ಕೊಂಚ ನಿಲ್ಲಿಸಿಬಿಡೋಣ. ಗಾಯಕ್ಕೆ ಮುಲಾಮು ಹಚ್ಚಿ ಗಾಯ ಮಾಯುವಂತೆ ಮಾಡೋಣ. ಮತ್ತೆ ಮತ್ತೆ ಕೈಮುಗಿದು ಕೇಳಿಕೊಳ್ತೀನಿ. ನಿನ್ನೆಯ ನೆಪದಿಂದ ನಮ್ಮ ಇಂದನ್ನು ಕಸಿಯಬೇಡಿ. ನಾಳೆಯನ್ನು ನಮಗಾಗಿ ಉಳಿಸಿಕೊಡಿ. ನಾವು ಕುಚೇಲರು. ನಮ್ಮ ಬಯಕೆ ಹೆಚ್ಚೇನಿಲ್ಲ.



ಚುರುಮುರಿ



ಕ್ವಾಟ್ಲೆ ಪರೀಕ್ಷೆ

• ಲಿಂಗರಾಜು ಡಿ.ಎಸ್.

'ಅಪರಾಧಿಗಳು ಸುಳ್ಳು ಹೇಳಿದ್ರೆ ಪತ್ತೆ ಮಾಡಕ್ಕೆ ನಾನಾ ಥರದ ಪರೀಕ್ಷೆ ಅವಂತೆ. ಇದರಿಂದ ಸಾಮಾನ್ಯ ಜನಕ್ಕೇನು ಉಪಯೋಗ ಸಾ?' ಅಂತ ಕೇಳಿದೆ.

'ಪಕ್ಷಗಳು ಟಿಕೆಟ್ ಕೊಡೊ ಮೊದಲು ಕೆಲವು ಕ್ವಾಟ್ಲೆ ಪರೀಕ್ಷೆಗಳನ್ನ ಮಾಡಿ ಅಮಾಕ ಪಕ್ಷದಿಂದ ಟಿಕೆಟ್ ಕೊಡದು ಉತ್ತಮ' ಅಂದ್ರು ತುರೇಮಣೆ.

'ಬೇಜಾನ್ ಕಾಸು ಇರಬಕು, ವಿರೋಧಿಗಳಿಗೆ ಎಡಕೆ ಬಲಕೆ ಬಯೊಗ್ರಫಿ ಪದ ಸಂಪತ್ತು ಇರಬಕು, ಜನ ಮಾತಾಡಿಸಿದರೆ ಕಪಾಳ-ಕ್ಕೊಡಿಬಕು, ಕಾಸು ಇಸುಗಂಡು ಪೋಸ್ಟಿಂಗ್ ಮಾಡಿಸುವಾಗ ಆಡಿಯೊ-ವಿಡಿಯೊ ಎಚ್ಚರ ಇರಬಕು. ಇಷ್ಟಿದ್ರೆ ಸಾಕಲ್ವಾ? ಇನ್ನೇನು ಪರೀಕ್ಷೆ ಮಾಡೀರಿ?' ವಿಚಾರಿಸಿದೆ.

'ಪೋಲಿಗ್ರಫಿ ಪರೀಕ್ಷೆ ಅಂತ ಅದೆ. ಹನಿಟ್ರ್ಯಾಪ್ ಕುಜದೋಷ ಇದ್ರೆ ಅಪಾಪೋಲಿ ಅಂತ ಅಡಿಷನಲ್ ಲಿಸ್ಟಲ್ಲಿ ಮಡಗಬಕು'.

'ಹೀನಸುಳಿ ಯಾವುದು ಅಂತ ಗೊತ್ತಾಯ್ತದೆ'.

'ಗದ್ದ ಮೇಲೆ ಗೊಂತಲ್ಲಿ ಕಟ್ಟಿದ ದನ ಇದ್ದಂಗೆ ಇರತನಾ ಇಲ್ಲಾ ಪಕ್ಷದಿಂದ ಪಕ್ಷಕ್ಕೆ ಜಂಪ್ ಮಾಡಿ ತ್ಯಾಗಜೀವಿಯಾಗೋ ಆಸೆ ಐತಾ ಅಂತ ತಿಳಿಸೋ ಜಂಪರ್ ಪರೀಕ್ಷೆ ಮಾಡಬಕು'.

'ಚೆನ್ನಾಗದೆ ಸಾ, ಆಮೇಲೆ?'

'ಇನ್ನೊಂದದೆ, ಬ್ಯಾರೆ ಪಕ್ಷಕ್ಕೆ ಮಳ್ಳಿ ಥರಾ ನುಸುಳಿ ಸ್ಲೀಪರ್ ಸೆಲ್ ಆಗಿರೋ ಐನಾತಿ ಮಂಪರು ವಿದ್ಯೆ ಕಲಿತಿರಬೇಕು'

'ಐನ್ ಟೈಮಲ್ಲಿ ಸಿಡೀಬೇಕು ಅಂತೀರ, ಆಮೇಲೆ?'

'ಯಾವ್ಯಾವ ಬೂತಲ್ಲಿ ತನಗೆ ಎಷ್ಟೆಷ್ಟು ವೋಟು ಬಂದದು, ಎಷ್ಟು ಕಳ್ಳ ವೋಟು ಹಾಕಿಸ್ಕಬಕು ಅಂತ ಮಾಹಿತಿ ಕದಿಯೋ ಬೂತ್ ಮ್ಯಾಪಿಂಗ್ ಐಡಿಯಾ ಇರಬಕು'.

'ಸಕತ್ತಾಗದೆ ಸಾ'.

'ಸುಳ್ಳನ್ನ ಪದೇಪದೇ ಹೇಳಿ ನಿಜ ಮಾಡೋ ಟಕ್ಕರ್ ಬಾಂಬ್ ಆಗಿದ್ರೆ ಅವ್ನನ್ನ ಸಿಎಂ ಮಾಡಿಕ್ಯಬೌದು!'

'ನೀವು ಭಲಾರೆ ಕ್ಯಾತೆ ರಾಜತಂತ್ರಿ ಸಾ!' ಅಂತ ಹೊಗಳಿದೆ.

'ಹ್ಞೂಂ ಕಲಾ, ಎಲ್ಲಾ ಪಕ್ಷಗಳೂ 'ನಮ್ಮ ಪಕ್ಷಕ್ಕೇ ಚುನಾವಣಾ ತಂತ್ರಗಾರ ಆಗುವೆ ಬಪ್ಪಾ' ಅಂತ ಜುಲುಮೆ ಮಾಡ್ತಾವೆ!' ಅಂದ್ರು.

ಸಂಗತ

ಯಶಸ್ವಿ ಗೋಪಾಲನೆಗೆ ಭಾವಸ್ಪಂದನ

ಪಶುಸಂಗೋಪನೆ ಎಂಬುದು ಲಾಭದಾಯಕ ಕಸುಬಾಗಬೇಕಿದ್ದರೆ ಉತ್ತಮ ಪಾಲನೆ, ಪೋಷಣೆ ಕ್ರಮಗಳ ಜೊತೆಗೆ ರಾಸುಗಳ ಒತ್ತಡ ನಿರ್ವಹಣೆಯೂ ಆದ್ಯತೆಯಾಗಬೇಕು

• ಡಾ. ಮುರಳೀಧರ ಕಿರಣಕೆರೆ

ಆ ರೈತರ ಮನೆಯಲ್ಲಿ ನಾಲ್ಕೈದು ಹಸುಗಳಿವೆ. ಮೈಕೈ ತುಂಬಿಕೊಂಡ ಅವುಗಳನ್ನು ನೋಡುವುದೇ ಆನಂದ. ಸಾಮಾನ್ಯವಾಗಿ ಸ್ಥಳೀಯ ತಳಿಯ ಆಕಳುಗಳಲ್ಲಿ ಹಾಲಿನ ಇಳುವರಿ ಕಮ್ಮಿ. ಆದರೆ ಇವು ಮಾತ್ರ ಚೆನ್ನಾಗಿ ಹಾಲು ಕರೆಯುತ್ತವೆ. ಕಾಯಿಲೆ ಕಸಾಲೆ ಅಂತೆಲ್ಲ ಚಿಕಿತ್ಸೆ ನೀಡಿದ್ದೇ ಅಪರೂಪ. ಅವರ ಈ ರೀತಿಯ ಸಾಕಾಣಿಕೆಯ ರಹಸ್ಯ ಕೆದಕಿದಾಗ ಆಶ್ಚರ್ಯವಾಗಿತ್ತು.

ಪಶುಆಹಾರ ವಿಪರೀತ ಎನಿಸುವಷ್ಟು ದುಬಾರಿಯಾಗಿರುವಾಗ ಅವರೇನು ತುಂಬಾ ಹಿಂಡಿ ಕೊಡುವುದಿಲ್ಲ. ಮನೆಯ ಪಕ್ಕದಲ್ಲಿನ ಸ್ವಲ್ಪ ಜಾಗದಲ್ಲಿ ಬೆಳಿಗ್ಗೆ ಮೂರ್ನಾಲ್ಕು ಗಂಟೆ ದನಕರುಗಳನ್ನು ಅಡ್ಡಾಡಲು ಬಿಡುತ್ತಾರೆ. ಗದ್ದೆ, ತೋಟದಿಂದ ತರುವ ಹಸಿಹುಲ್ಲನ್ನು ಹಾಕುತ್ತಾರೆ. ಪ್ರತಿನಿತ್ಯ ಮೈ ತೊಳೆಯಲು ಸಾಧ್ಯವಾಗದಿದ್ದರೂ ಹುಲ್ಲಿನ ಚಂಡೆಯಿಂದ ಪ್ರತಿಯೊಂದರ ಮೈ ಉಜ್ಜುತ್ತಾ ಪ್ರೀತಿಯಿಂದ ಮಾತನಾಡಿಸುವರು. ಹಿಂಡಿ ಮಿಶ್ರಣ ಕೊಡುವಾಗಲೂ ಅಷ್ಟೇ, ತಲೆ ನೇವರಿಸುವರು.

ಪ್ರತಿಯೊಂದನ್ನೂ ಅವುಗಳ ಹೆಸರಿನಿಂದ ಕರೆದಾಗ ತಲೆಯೆತ್ತಿ ಪ್ರತಿಕ್ರಿಯಿಸುತ್ತವೆ. ಕೊಟ್ಟಿಗೆಯಲ್ಲಿ ಗಾಳಿ, ಬೆಳಕು ಧಾರಾಳ. ಆ ರಾಸುಗಳ ಆರೋಗ್ಯದ ಗುಟ್ಟು ಅಡಗಿರುವುದು ಇಲ್ಲಿಯೇ. ದನಕರುಗಳಿಗೂ ಭಾವನೆಗಳಿವೆ ಎಂದರಿತಿರುವ ಅವರು ತುಂಬಾ ಮುತುವರ್ಜಿಯಿಂದ ಸಲಹುತ್ತಿದ್ದಾರೆ. ತಮ್ಮ ಯಜಮಾನ ತೋರುವ ಪ್ರೀತಿ, ಕಾಳಜಿಗೆ ಅವೂ ಸಕಾರಾತ್ಮಕವಾಗಿ ಸ್ಪಂದಿಸುತ್ತಾ ಚೆನ್ನಾಗಿ ಹಾಲು ಕೊಡುತ್ತಿವೆ!

ಹೌದು, ಮನುಜನಂತೆ ಪ್ರಾಣಿಗಳಿಗೂ 'ಮನಸ್ಸು' ಇದೆ. ಮಾತು ಬಾರದ್ದರಿಂದ ತಮ್ಮ ಭಾವನೆ, ಒತ್ತಡವನ್ನು ವಿಶಿಷ್ಟ ಧ್ವನಿ, ಆಂಗಿಕ ಭಾಷೆಯ ಮೂಲಕ ವ್ಯಕ್ತಪಡಿಸುತ್ತವೆ. ಮೆದುಳು ಮಾನವನಷ್ಟು ಬೆಳವಣಿಗೆ ಹೊಂದಿರದಿದ್ದರೂ ಅವುಗಳಿಗೂ ಸಂತಸ, ಸಿಟ್ಟು, ನೋವು-ನಲಿವುಗಳುಂಟು. ಭಯ, ಆಘಾತ, ಒತ್ತಡವೂ ಉಂಟು. ತಲೆ ಕುಣಿಸುವುದು, ಕಣ್ಣುಗಳನ್ನು ಅಗಲಿಸುವುದು, ಕಿವಿಗಳ ಚಲನೆ, ಮೂಸುವುದು, ನೆಕ್ಕುವುದು, ವಿಶಿಷ್ಟ ಧ್ವನಿಯಲ್ಲಿ ಕೂಗುವುದು, ಬಾಲದಿಂದ ಹೊಡೆಯುವುದು, ಹಾಯುವುದು, ಒದೆಯುವುದು... ಹೀಗೆ ಹತ್ತಾರು ರೀತಿಯಲ್ಲಿ ತಮ್ಮ ಮನಸ್ಸಿನ ಭಾವನೆಗಳನ್ನು ಹೊರಹಾಕುತ್ತವೆ. ಪಶುಪಾಲಕರಿಗೆ ಇದರ ಅರಿವಿದ್ದಾಗ ಪಾಲನೆ-ಪೋಷಣೆಯಲ್ಲಿ ಮಾನವೀಯತೆ ತೋರಲು ಸಾಧ್ಯ. ಆಗ ಉತ್ಪಾದನೆಯಲ್ಲೂ ಹೆಚ್ಚಳ ನಿಶ್ಚಯ.

ನಮ್ಮಲ್ಲಿ ಬಹುತೇಕ ರೈತರು ವೈಜ್ಞಾನಿಕ ರೀತಿಯಲ್ಲಿ ರಾಸುಗಳನ್ನು ಸಾಕುತ್ತಿಲ್ಲ. ಸಾಂಪ್ರದಾಯಿಕ ಕೊಟ್ಟಿಗೆಗಳಲ್ಲಿ ಗಾಳಿ, ಬೆಳಕು ತೀರಾ ಕಮ್ಮಿ. ಹಲವರು ಹಗಲು ಹೊತ್ತಿನಲ್ಲೂ ಹೊರಗೆ ಕಟ್ಟುವುದಿಲ್ಲ. ಸದಾ ಕತ್ತಲೆಯ ವಾತಾವರಣದಲ್ಲಿ ದನಕರುಗಳನ್ನು ಕಟ್ಟುವುದರಿಂದ ಸಹಜವಾಗಿಯೇ ಅವು ಒತ್ತಡ ಅನುಭವಿಸುತ್ತವೆ. ಚರ್ಮರೋಗ ಬಾಧಿಸುತ್ತದೆ. ಹಾಲಿನ ಇಳುವರಿ ಕುಸಿಯುತ್ತದೆ. ನಿಯಮಿತವಾಗಿ ಬೆದೆಗೂ ಬಾರವು. ಗರ್ಭ ಕಟ್ಟುವಲ್ಲಿಯೂ ಸೋಲು. ಗಾಳಿ, ಬೆಳಕು ಕೊರತೆಯಿರುವ ಕೊಟ್ಟಿಗೆಯು ಉಣ್ಣೆ, ಸೊಳ್ಳೆ, ಹೇನುಗಳಂಥ ಪರಾವಲಂಬಿ ಜೀವಿಗಳ ಸಂತಾನೋತ್ಪತ್ತಿಗೆ ಹೇಳಿ ಮಾಡಿಸಿದ ಜಾಗ. ಈ ಪೀಡೆಗಳು ಜಾನುವಾರುಗಳ ರಕ್ತ ಹೀರುವುದಷ್ಟೇ ಅಲ್ಲ ವಿವಿಧ ಗಂಭೀರ ಕಾಯಿಲೆಗಳನ್ನೂ ಹರಡಿಸುತ್ತಾ ಹೈನುಗಾರಿಕೆಗೆ ಸವಾಲಾಗುತ್ತವೆ.

ರಾಸುಗಳನ್ನು ಬೆಳಿಗ್ಗೆ ಬಿಸಿಲಿಗೆ ಕಟ್ಟುವುದರಿಂದ ಸೂರ್ಯರಶ್ಮಿಯಿಂದ ದೇಹದಲ್ಲಿ ವಿಟಮಿನ್ 'ಡಿ' ಉತ್ಪತ್ತಿಯಾಗುತ್ತದೆ. ಆಹಾರದಿಂದ ಕ್ಯಾಲ್ಸಿಯಂ ಅಂಶವನ್ನು ಹೀರಿಕೊಳ್ಳಲು ಈ ಜೀವಸತ್ವ ಅತಿ ಅಗತ್ಯ. ಇದರಿಂದ ಹಾಲಿನ ಇಳುವರಿ ಸುಧಾರಿಸುತ್ತದೆ, ಮೂಳೆಗಳು ಗಟ್ಟಿಯಾಗುತ್ತವೆ. ಚರ್ಮದ ಆರೋಗ್ಯ ಉತ್ತಮವಾಗುತ್ತದೆ. ಬಿಸಿಲು ಹೆಚ್ಚಾದಾಗ ನೆರಳಲ್ಲಿ ಕಟ್ಟುವ ವ್ಯವಸ್ಥೆ ಮಾಡಬೇಕು. ಹೊರಗಡೆ ಅಡ್ಡಾಡಿಸಲು, ಮೇಯಿಸಲು ಜಾಗವಿದ್ದರೆ ಇನ್ನೂ ಅನುಕೂಲ. ಇಂತಹ ಮುಕ್ತ ವಾತಾವರಣದಲ್ಲಿದ್ದಾಗ ಅವುಗಳ ಮಾನಸಿಕ ಒತ್ತಡ ಕಡಿಮೆಯಾಗಿ ಲವಲವಿಕೆಯಿಂದ ಇರುತ್ತವೆ. ಅಧಿಕ ಉತ್ಪಾದನೆಯ ಜೊತೆಗೆ ರೋಗನಿರೋಧಕ ಸಾಮರ್ಥ್ಯ ವೃದ್ಧಿಗೂ ಇದು ಸಹಕಾರಿ.



ಕೊಟ್ಟಿಗೆಯಲ್ಲೂ ಅಷ್ಟೆ. ಇಕ್ಕಟ್ಟಾಗಿ ಕಟ್ಟುವುದು, ಅವುಗಳಿಗೆ ತಿರುಗಲು, ಮಲಗಲು ಸರಿಯಾಗಿ ಜಾಗ ಇಲ್ಲದಿರುವುದು, ಹಾಯುವ ದನ, ಎಮ್ಮೆಯನ್ನು ಹತ್ತಿರದಲ್ಲಿ ಕಟ್ಟುವುದು, ಕುಡಿಯುವ ನೀರಿಗೆ ವ್ಯವಸ್ಥೆ ಮಾಡದಿರುವುದು, ಕಡಿಮೆ ಆಹಾರ ನೀಡುವುದು ಎಲ್ಲವೂ ಒತ್ತಡಕಾರಕಗಳೆ. ಸ್ವಚ್ಛವಾಗಿಲ್ಲದ ಜಾಗದಲ್ಲಿ ಜಾನುವಾರುಗಳನ್ನು ಕಟ್ಟುವುದರಿಂದಲೂ ಅವು ಹಿಂಸೆ ಅನುಭವಿಸುತ್ತವೆ. ಸ್ವಚ್ಛತೆಯಿಲ್ಲದೆಡೆ ಕೆಚ್ಚಲು ಬಾವು, ಚರ್ಮದ ಕಾಯಿಲೆ ಸೇರಿದಂತೆ ರೋಗ ರುಜಿನಗಳ ಬಾಧೆ ಹೆಚ್ಚು.

ವಾತಾವರಣದಲ್ಲಿ ಹಠಾತ್ ಬದಲಾವಣೆಯಾದಾಗ, ಗರ್ಭಾವಸ್ಥೆಯಲ್ಲಿ, ಕರು ಹಾಕಿದಾಗ, ಹಿಂಡಿನಿಂದ ಅಗಲಿಸಿದಾಗ, ಬೇರೆಡೆ ಸಾಗಣೆ ಮಾಡಿದಾಗಲೂ ಜಾನುವಾರುಗಳು ಒತ್ತಡವನ್ನು ಅನುಭವಿಸುತ್ತವೆ. ಆಗ ರಸದೂತಗಳ ಮಟ್ಟದಲ್ಲಿ ಏರುಪೇರಾಗುತ್ತದೆ. ಹಾಲಿನ ಇಳುವರಿ ಕುಸಿಯುತ್ತದೆ. ದೇಹದ ರೋಗನಿರೋಧಕ ಶಕ್ತಿ ಕುಂಠಿತಗೊಳ್ಳುತ್ತದೆ. ಹೀಗಾದಾಗ ಶರೀರದಲ್ಲಿ ತಟಸ್ಥವಾಗಿರುವ ಅವಕಾಶವಾದಿ ರೋಗಾಣುಗಳು ಒಮ್ಮೆಲೇ ಸಂಖ್ಯೆಯಲ್ಲಿ ವೃದ್ಧಿಗೊಂಡು ಕಾಯಿಲೆಗಳನ್ನು ಹುಟ್ಟುಹಾಕುತ್ತವೆ.

ಹೌದು, ಪಶುಸಂಗೋಪನೆ ಎಂಬುದು ಲಾಭದಾಯಕ ಕಸುಬಾಗಬೇಕಿದ್ದರೆ ಉತ್ತಮ ಪಾಲನೆ, ಪೋಷಣೆ ಕ್ರಮಗಳ ಜೊತೆಗೆ ರಾಸುಗಳ ಒತ್ತಡ ನಿರ್ವಹಣೆಯೂ ಆದ್ಯತೆಯಾಗಬೇಕು.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ
ಸರ್ಕಾರಿ ಪಶು ಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ಕೊಳಕು ನಿಯಮಗಳಿಗೆ ಆದರ್ಶದ ಬಿಂಬ

'ವೇದವ್ಯಾಸರ ಶಿವಪುರಾಣಸಾರ' ಎಂಬ ಶಿರೋನಾಮೆಯಡಿ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಬರೆದಿರುವ 'ಪತಿಯ ಆಜ್ಞೆ ಪಾಲಿಸಬೇಕು' ಎಂಬ ಶೀರ್ಷಿಕೆಯನ್ನುಳ್ಳ ಬರಹ (ಪ್ರ.ವಾ., ನ. 28) ನಖಶಿಖಾಂತ ಖಂಡನಾರ್ಹ. ಸಂಪೂರ್ಣ ಮಹಿಳಾ ವಿರೋಧಿಯಾಗಿದ್ದು, ವ್ಯಕ್ತಿ ಘನತೆಗೆ ಕುಂದುಂಟು ಮಾಡುವಂತಿರುವ ಈ ಲೇಖನವು 'ಶಿವಪುರಾಣದ ಸಾರವೇ ಆಗಿದೆ' ಎಂದು ಸ್ವಾಮೀಜಿ ಬರೆದಿದ್ದಾರೆ. ಅದಕ್ಕೆಂದೇ 12ನೇ ಶತಮಾನದಲ್ಲಿ ಅಲ್ಲಮಪ್ರಭು 'ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರ ಗೋಷ್ಠಿ, ತರ್ಕವೆಂಬುದು ತಗರ ಹೋರಟೆ, ಭಕ್ತಿ ಎಂಬುದು ತೋರಿ ಉಂಬುವ ಲಾಭ, ಗುಹೇಶ್ವರನೆಂಬುದು ಮೀರಿದ ಘನವು' ಎಂದು ಸನಾತನ ಪಠ್ಯಗಳನ್ನು ಉಗ್ರವಾಗಿ ಖಂಡಿಸಿದ್ದಾನೆ. ಕಟ್ಟುಕತೆ ಮತ್ತು ತೋರಿಕೆಯ ಆದರ್ಶಗಳಿಂದ ತುಂಬಿದ ವೇದಾಗಮಗಳು ಪ್ರಾಯೋಗಿಕವಾಗಿ ಅದೆಷ್ಟು ಜೀವವಿರೋಧಿ ಮತ್ತು ಅವೈಜ್ಞಾನಿಕವಾಗಿದ್ದವು ಎಂಬುದನ್ನು ಕಂಡುಕೊಂಡಿದ್ದ ಶಿವಶರಣರು, ವೈದಿಕ ದರ್ಶನಗಳ ಪೊಳ್ಳುತನವನ್ನು ಬಯಲಿಗೆಳೆದು, ಅವು ಪೋಷಿಸುವ ಕರ್ಮಸಿದ್ಧಾಂತವು ಅಪ್ಪಟ ಸುಳ್ಳು ಎಂದು ಎತ್ತಿ ತೋರಿಸಿದ್ದಾರೆ.

ಹೆಣ್ಣುಮಕ್ಕಳು ಅಡಿಯಿಂದ ಮುಡಿಯವರೆಗೆ ಗಂಡಸಿನ ಗುಲಾಮಳಾಗಿರಬೇಕು ಎಂಬುದನ್ನು ಯಾರು ಹೇಳಿದರೂ ಎಲ್ಲಿಯೇ ಹೇಳಿದರೂ ಅದು ಅತ್ಯಂತ ಹೇಯ ಮತ್ತು ಅಧಿಕಪ್ರಸಂಗಿತನ. ವೈದಿಕ ಪಠ್ಯಗಳು ರಚನೆಯಾದ ಸಂದರ್ಭದಲ್ಲಿಯೇ ವ್ಯಾಪಕ ಖಂಡನೆ ಮತ್ತು ತಿರಸ್ಕಾರಕ್ಕೆ ಒಳಗಾಗಿದ್ದ ಇತಿಹಾಸ ನಮ್ಮದು. ಹೀಗಿರುವಾಗಲೂ ಸಚ್ಚಿದಾನಂದ ಸ್ವಾಮಿಯಂಥವರು ಇವತ್ತಿಗೂ ಇಂಥ ಕೊಳಕು ನಿಯಮಗಳನ್ನು ಆದರ್ಶವೆಂದು ಬಿಂಬಿಸಲು ಹೊರಟಿರುವುದು ಅವರ ಜಡಮತಿಯ ಕೊಳಕುತನವೇ ಆಗಿರುವಂತಿದೆ.

ಡಾ. ಮೀನಾಕ್ಷಿ ಬಾಳಿ, ಅಧ್ಯಕ್ಷೆ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯ ಸಮಿತಿ

ಅಸ್ವಸ್ಥ ಮನಸ್ಸಿನ ಅಭಿವ್ಯಕ್ತಿ

'ಪತಿಯ ಆಜ್ಞೆ ಪಾಲಿಸಬೇಕು' ಎಂಬ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಬರಹವು ನಿಜವಾಗಿಯೂ ನಾವು ಎಷ್ಟನೇ ಶತಮಾನದಲ್ಲಿ ಇದ್ದೇವೆ ಎಂದು ಪ್ರಶ್ನೆ ಹುಟ್ಟಿಸುವಂತಿದೆ. ಮಹಿಳೆಯರಿಗೆ ಸಮಾನ ಸ್ಥಾನಮಾನವನ್ನು, ಘನತೆಯಿಂದ ಬದುಕುವ ಹಕ್ಕನ್ನು ಖಾತರಿಗೊಳಿಸಬೇಕು ಎಂದು ಹೇಳುವ ಸಂವಿಧಾನ ಒಂದು ಕಡೆಯಾದರೆ, ಇನ್ನೊಂದು ಕಡೆ, ಮಹಿಳೆಯರನ್ನು ಹೀನಾಯವಾಗಿ ಚಿತ್ರಿಸುವ ಇಂತಹ ಅಸ್ವಸ್ಥ ಮನಸ್ಸಿನ ಅಭಿವ್ಯಕ್ತಿಗಳು.

ಇಂತಹ ಮಧ್ಯಕಾಲೀನ ವಿಚಾರಗಳನ್ನು ತಿಪ್ಪೆಗೆ ಎಸೆದು ಬಹಳ ಕಾಲವಾಗಿರಬೇಕಾಗಿತ್ತು. ದುರದೃಷ್ಟವಶಾತ್ ಇಂತಹ ಮಾತುಗಳನ್ನು ಯಾವುದಾದರೂ ಒಂದು ನೆಪದಲ್ಲಿ ಹರಿಯಬಿಡುವ ಮನಸ್ಸುಗಳು ನಮ್ಮ ಮಧ್ಯೆ ಇನ್ನೂ ಇರುವುದರಿಂದ ನಾವು ಇವುಗಳ ಕುರಿತು ಇನ್ನೂ ಮಾತನಾಡಬೇಕಾಗಿದೆ.

ಡಾ. ವಿಜಯಾ, ಡಾ. ಜಿ.ರಾಮಕೃಷ್ಣ, ಡಾ. ಎನ್.ಗಾಯತ್ರಿ, ಡಾ. ಎಚ್.ಜಿ.ಜಯಲಕ್ಷ್ಮಿ, ಡಾ. ಬಿ.ಆರ್.ಮಂಜುನಾಥ್, ಜಾಹಿದಾ ಶಿರೀನ್, ಬಿ.ಆರ್.ಸುಧಾ, ಬೆಂಗಳೂರು

ಹೀಗಿದೆ ನಮ್ಮ ನಾಯಕರ ಇಚ್ಛಾಶಕ್ತಿ!

ಕರ್ನಾಟಕ ಹಾಗೂ ಮಹಾರಾಷ್ಟ್ರ ಗಡಿ ವಿವಾದ ಇದೀಗ ಮತ್ತೆ ಮುನ್ನೆಲೆಗೆ ಬಂದಿದೆ. ಈ ಸಂದರ್ಭದಲ್ಲಿ, '25 ವರ್ಷಗಳ ಹಿಂದೆ' ಅಂಕಣ (ಪ್ರ.ವಾ., ನ. 26) ಗಮನ ಸೆಳೆಯುವಂತಿದೆ. ಅಂದು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಜೆ.ಎಚ್.ಪಟೇಲ್ ಹಾಗೂ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಮನೋಹರ ಜೋಷಿ ಅವರು ಮುಂಬೈನಲ್ಲಿ ಜಂಟಿ ಪತ್ರಿಕಾಗೋಷ್ಠಿ ನಡೆಸಿ, ಆಗಿನ ಕಾಲಕ್ಕೆ ನಾಲ್ಕು ದಶಕಗಳಷ್ಟು ಹಿಂದಿನದಾಗಿದ್ದ ಗಡಿ ವಿವಾದವನ್ನು ಮಾತುಕತೆಯ ಮೂಲಕ ಶೀಘ್ರವಾಗಿ ಪರಿಹರಿಸಿಕೊಳ್ಳಬೇಕೆಂಬ ಇಂಗಿತವನ್ನು ವ್ಯಕ್ತಪಡಿಸಿದ್ದರು. ಹೇಗಿದೆ ನೋಡಿ ಸಮಸ್ಯೆ ಪರಿಹರಿಸುವಲ್ಲಿ ರಾಜಕೀಯ ನಾಯಕರ ಇಚ್ಛಾಶಕ್ತಿ!

ಎ.ವಿ.ಮುರಳೀಧರ ಆಚಾರ್ಯ, ಬೆಂಗಳೂರು

ಈ ದಿಟ್ಟ ಹೆಜ್ಜೆ ಬೇಕಾಗಿತ್ತು!

ಮುಗಿದುಹೋದ ಗಡಿ ತಂಟೆಯನ್ನು ಮಹಾರಾಷ್ಟ್ರವು ಮತ್ತೆ ಕೆದಕುವ ಮೂಲಕ ವೃಥಾ ಗೊಂದಲ ಸೃಷ್ಟಿಸುತ್ತಿರುವುದು ಇದೇ ಮೊದಲಲ್ಲ. ಮಹಾರಾಷ್ಟ್ರ ಗಡಿ ತಂಟೆಯನ್ನು ಎತ್ತಿದಾಗಲೆಲ್ಲ ಕರ್ನಾಟಕವು ಕೊಡುವ ಉತ್ತರ: 'ನಾವು ಒಂದು ಚೂರು ನೆಲವನ್ನೂ ಬಿಟ್ಟುಕೊಡುವುದಿಲ್ಲ'. ಇದನ್ನು ಮಹಾರಾಷ್ಟ್ರವು ನಮ್ಮ ಅಸಹಾಯಕತೆ ಎಂದು ಭಾವಿಸಿದೆ. ಮಹಾರಾಷ್ಟ್ರದಲ್ಲಿ ಕನ್ನಡಿಗರು ಅಧಿಕ ಸಂಖ್ಯೆಯಲ್ಲಿರುವ ಸೊಲ್ಲಾಪುರ, ಅಕ್ಕಲಕೋಟೆ, ಕೊಲ್ಹಾಪುರ ಮತ್ತು ಜತ್ ಪ್ರದೇಶಗಳು ಕರ್ನಾಟಕಕ್ಕೆ ಸೇರಬೇಕೆಂಬ ಬೇಡಿಕೆಯನ್ನು ದೃಢವಾಗಿ ಮಹಾರಾಷ್ಟ್ರದ ಮುಂದಿಡುವ ದಿಟ್ಟ ಕಾರ್ಯವನ್ನು ಈವರೆಗೂ ನಮ್ಮ ಮುಖ್ಯಮಂತ್ರಿಗಳು ಮಾಡದಿರುವುದು ಅವರ ಪುಂಡಾಟಕ್ಕೆ ಸಹಕಾರಿಯಾಗಿದೆ.

ತಡವಾದರೂ ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಪ್ರದೇಶಗಳು ಕರ್ನಾಟಕಕ್ಕೆ ಸೇರಬೇಕೆಂಬ ಬೇಡಿಕೆಯನ್ನು ಮುಂದಿಟ್ಟಿದ್ದಾರೆ. ಇಂತಹ ದಿಟ್ಟತನ ಅಗತ್ಯವಾಗಿ ಬೇಕಾಗಿತ್ತು! ಇದರಿಂದ ಮಹಾರಾಷ್ಟ್ರ ವಿಚಲಿತಗೊಂಡು ತನ್ನ ಮಾತಿನ ವರಸೆಯನ್ನು ಬದಲಾಯಿಸುತ್ತಿದೆ.

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ಜಗಳ ಬಿಡಿ, ಸಂಚಾರಕ್ಕೆ ತಡೆ ಬೇಡ

ಕರ್ನಾಟಕ- ಮಹಾರಾಷ್ಟ್ರ ಗಡಿ ವಿವಾದದಲ್ಲಿ ಉಭಯ ರಾಜ್ಯದವರೂ ಒಂದು ವಿಷಯವನ್ನು ಚೆನ್ನಾಗಿ ಮನದಟ್ಟು ಮಾಡಿಕೊಳ್ಳಬೇಕು. ಅದೆಂದರೆ, ಮೊದಲಿಗೆ ನಾವು ಭಾರತೀಯರು, ನಂತರ ಪ್ರಾದೇಶಿಕರು, ಅದಕ್ಕೂ ಮಿಗಿಲಾಗಿ ಈ ವಿವಾದ ಕೋರ್ಟ್‌ನಲ್ಲಿದೆ. ಅಲ್ಲಿ ತಮ್ಮ ವಾದವನ್ನು ಸಮರ್ಥವಾಗಿ ಮಂಡಿಸಲಿ. ಅದನ್ನು ಬಿಟ್ಟು, ಗಡಿ ಭಾಗದಲ್ಲಿ ಸಂಚರಿಸುವ ವಾಹನಗಳಿಗೆ ಉಭಯ ರಾಜ್ಯಗಳ ಕೆಲ ಸಂಘಟನೆಗಳು ಮಸಿ ಬಳಿಯುವುದು ಮತ್ತು ಚಾಲಕರನ್ನು ನಿಂದಿಸುವುದು, ಹಲ್ಲೆ ಮಾಡುವುದು ಅಮಾನವೀಯ. ಇಂತಹ ಕೃತ್ಯಗಳನ್ನು ನಿಲ್ಲಿಸಬೇಕು. ಸಂಚಾರಕ್ಕೆ ತಡೆಯೊಡ್ಡಿದರೆ ಬಸ್ ಸಂಚಾರ ಸ್ಥಗಿತವಾಗುತ್ತದೆ. ಇದರಿಂದ ದಿನನಿತ್ಯ ಸಂಚರಿಸುವ ಚಾಲಕರು, ಕೂಲಿ ಕಾರ್ಮಿಕರು, ಪ್ರವಾಸಿಗರಂತಹವರಿಗೆ ತೊಂದರೆ ಆಗುವುದಿಲ್ಲವೇ?

ಬೋರೇಗೌಡ ಜೆ.ಬಿ., ಜಕ್ಕನಹಳ್ಳಿ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮೀಸಲಾತಿ ಮೇಲೆ ರಾಜಕೀಯ ಬಲದ ಸವಾರಿ

ಸಾಮಾಜಿಕವಾಗಿ ತುಳಿತಕ್ಕೊಳಗಾದ ಮತ್ತು ಅವಕಾಶ ವಂಚಿತ ಸಮುದಾಯಗಳಿಗೆ ಮೀಸಲಾತಿಯ ಮೂಲಕ ನ್ಯಾಯ ಒದಗಿಸುವ ಪ್ರಯತ್ನವನ್ನು ಪ್ರಬಲ ಸಮುದಾಯಗಳು ದಶಕಗಳ ಕಾಲದಿಂದಲೂ ವಿರೋಧಿಸುತ್ತಲೇ ಬಂದಿವೆ. ಚರ್ಚೆ, ಪ್ರಶ್ನೆಗಳ ರೂಪದಲ್ಲಿ ಮೀಸಲಾತಿಯ ಉದ್ದೇಶವನ್ನು ಟೀಕಿಸುತ್ತಿದ್ದ ಇಂತಹ ವರ್ಗಗಳಿಗೆ ಆರಂಭದಿಂದಲೂ ರಾಜಕೀಯ ಬೆಂಬಲ ಇತ್ತು. ಕೆಲವು ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳು ಮೀಸಲಾತಿಯನ್ನು ವಿರೋಧಿಸುವವರ ಜತೆ ಕೈಜೋಡಿಸಿಕೊಂಡು ಬಂದಿರುವುದನ್ನು ಚರಿತ್ರೆಯ ಪುಟಗಳಲ್ಲಿ ಕಾಣಬಹುದು

ಮೀಸಲಾತಿ ಚರ್ಚೆ 2

• ವಿ.ಎಸ್. ಸುಬ್ರಹ್ಮಣ್ಯ

ಜಾತಿಯ ಕಾರಣದಿಂದ ದೇಶವನ್ನು ಆವರಿಸಿಕೊಂಡಿರುವ ಸಾಮಾಜಿಕ ಅಸಮಾನತೆಯನ್ನು ತೊಲಗಿಸಿ, ಶೋಷಿತ ಸಮುದಾಯಗಳಿಗೆ ಶಕ್ತಿ ನೀಡಲು ರೂಪಿಸಿದ ಮೀಸಲಾತಿ ವ್ಯವಸ್ಥೆಯನ್ನು ಆಳುವ ಪಕ್ಷಗಳು ಮತ್ತು ರಾಜಕೀಯವಾಗಿ ಪ್ರಬಲವಾದ ಸಮುದಾಯಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲು ಪ್ರಯತ್ನಿಸುತ್ತಾ ಬಂದಿವೆ. ಭಾರತದಲ್ಲಿ ಮೀಸಲಾತಿ ವ್ಯವಸ್ಥೆಗೆ ಶತಮಾನದ ಇತಿಹಾಸವಿದೆ. ಮಹಾರಾಷ್ಟ್ರದ ಸಾಹು ಮಹಾರಾಜ, ಮೈಸೂರಿನ ಒಡೆಯರ್ ತಮ್ಮ ಸಂಸ್ಥಾನಗಳಲ್ಲಿ ಸ್ವಾತಂತ್ರ್ಯ ಪೂರ್ವದಲ್ಲೇ ಶೋಷಿತ ಸಮುದಾಯಗಳಿಗೆ ಮೀಸಲಾತಿ ನೀಡುವ ಮೂಲಕ ಆಡಳಿತ ವ್ಯವಸ್ಥೆಯಲ್ಲಿ ಪ್ರಾತಿನಿಧ್ಯ ಕಲ್ಪಿಸಿದ್ದರು. ದೇಶವು ಸ್ವಾತಂತ್ರ್ಯಾನಂತರ ರೂಪಿಸಿಕೊಂಡ ಸಂವಿಧಾನದಲ್ಲೇ ಮೀಸಲಾತಿ ವ್ಯವಸ್ಥೆಯನ್ನು ಅಳವಡಿಸುವ ಮೂಲಕ ಅದಕ್ಕೆ ಸಾಂವಿಧಾನಿಕ ರಕ್ಷಣೆ ನೀಡಲಾಯಿತು. ಆರಂಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮಾತ್ರ ಇದ್ದ ಮೀಸಲಾತಿ ಸೌಲಭ್ಯವನ್ನು, ನಂತರದ ದಿನಗಳಲ್ಲಿ ಹಿಂದುಳಿದ ವರ್ಗಗಳಿಗೂ ಒದಗಿಸಲಾಯಿತು. ಹಿಂದುಳಿದ ವರ್ಗಗಳು ಮೀಸಲಾತಿ ಪಟ್ಟಿಯನ್ನು ಸೇರಿದ ಬಳಿಕ ಪ್ರಬಲ ಜಾತಿ ಮತ್ತು ಸಮುದಾಯಗಳು ಸಮಯ ಸಿಕ್ಕಾಗಲೆಲ್ಲ ತಮಗಿರುವ ರಾಜಕೀಯ ಬಲವನ್ನು ಬಳಸಿಕೊಂಡೇ ಮೀಸಲಾತಿ ವ್ಯವಸ್ಥೆಯ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸುತ್ತಲೇ ಇವೆ.

'ಸಮಾನ ಅವಕಾಶಗಳನ್ನು ನೀಡಬೇಕು. ಈವರೆಗೆ ಆಡಳಿತದಲ್ಲಿ ಸರಿಯಾದ ಅವಕಾಶ ಪಡೆಯದಿದ್ದ ಕೆಲವು ಸಮುದಾಯಗಳ ಪರವಾಗಿ ಮೀಸಲಾತಿ 'ಇರತಕ್ಕದ್ದು'' ಎಂದು ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಮಿತಿಯ ಮೀಸಲಾತಿ ಕುರಿತು ನಡೆಸಿದ ಚರ್ಚೆಯ ವೇಳೆ ಮಾಡಿದ್ದ ಭಾಷಣದಲ್ಲಿ ಹೇಳಿದ್ದರು. 'ಸಮಾನತೆಯ ಅವಕಾಶ ಎಂಬ ತತ್ವ ಹಾಗೂ ಪ್ರಭುತ್ವದಲ್ಲಿ ಪ್ರಾತಿನಿಧ್ಯ ಪಡೆಯದ ಸಮುದಾಯಗಳ ಬೇಡಿಕೆಯನ್ನು ಪೂರೈಸುವುದು ಎಂಬ ಎರಡು ಅಂಶಗಳನ್ನು ಕಾಪಾಡಿಕೊಳ್ಳಬೇಕು' ಎಂದು ಅಂಬೇಡ್ಕರ್ ಪ್ರತಿಪಾದಿಸಿದ್ದರು. ಇದೇ ತತ್ವಗಳ ಆಧಾರದಲ್ಲಿ ಮೀಸಲಾತಿ ವ್ಯವಸ್ಥೆಯನ್ನು ನಮ್ಮ ಸಂವಿಧಾನದಲ್ಲಿ ಸೇರಿಸಲಾಗಿತ್ತು. ಆದರೆ, ರಾಜಕೀಯವಾಗಿ ಗಣನೀಯ ಪ್ರಾತಿನಿಧ್ಯ ಪಡೆದಿರುವ, ಶೈಕ್ಷಣಿಕ ಮತ್ತು ಔದ್ಯೋಗಿಕವಾಗಿಯೂ ಹೆಚ್ಚು ಅವಕಾಶಗಳನ್ನು ಪಡೆದಿರುವ ಸಮುದಾಯಗಳಿಗೆ ಸಂವಿಧಾನದ ಆಶಯಗಳನ್ನೂ ಮೀರಿ ಮೀಸಲಾತಿಯ ಸೌಲಭ್ಯ ವಿಸ್ತರಿಸುವ ಪ್ರಯತ್ನಗಳು ಹಲವು ಬಾರಿ ನಡೆದಿವೆ. ಕೆಲವು ರಾಜ್ಯಗಳಲ್ಲಿ ಅಂತಹ ಪ್ರಯತ್ನಗಳು ಸಫಲವಾಗಿದ್ದರೆ, ಇನ್ನೂ ಕೆಲವು ರಾಜ್ಯಗಳಲ್ಲಿ ಕೈಗೊಂಡ ತೀರ್ಮಾನಗಳು ನ್ಯಾಯಾಲಯದ ಮಧ್ಯಪ್ರವೇಶದಿಂದ ಅನುಷ್ಠಾನಕ್ಕೆ ಬಂದಿಲ್ಲ.



ಪರಿಶಿಷ್ಟ ಜಾತಿ, ಪಂಗಡದ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಕೊಪ್ಪಳದಲ್ಲಿ ಇತ್ತೀಚೆಗೆ ನಡೆದ ಪ್ರತಿಭಟನೆಯ ದೃಶ್ಯ
–ಪ್ರಜಾವಾಣಿ ಚಿತ್ರ

ಸಾಮಾಜಿಕವಾಗಿ ತುಳಿತಕ್ಕೊಳಗಾದ ಮತ್ತು ಅವಕಾಶ ವಂಚಿತ ಸಮುದಾಯಗಳಿಗೆ ಮೀಸಲಾತಿಯ ಮೂಲಕ ನ್ಯಾಯ ಒದಗಿಸುವ ಪ್ರಯತ್ನವನ್ನು ಪ್ರಬಲ ಸಮುದಾಯಗಳು ದಶಕಗಳ ಕಾಲದಿಂದಲೂ ವಿರೋಧಿಸುತ್ತಲೇ ಬಂದಿವೆ. ಚರ್ಚೆ, ಪ್ರಶ್ನೆಗಳ ರೂಪದಲ್ಲಿ ಮೀಸಲಾತಿಯ ಉದ್ದೇಶವನ್ನು ಟೀಕಿಸುತ್ತಿದ್ದ ಇಂತಹ ವರ್ಗಗಳಿಗೆ ಆರಂಭದಿಂದಲೂ ರಾಜಕೀಯ ಬೆಂಬಲ ಇತ್ತು. ಕೆಲವು ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳು ಮೀಸಲಾತಿಯನ್ನು ವಿರೋಧಿಸುವವರ ಜತೆ ಕೈಜೋಡಿಸಿಕೊಂಡು ಬಂದಿರುವುದನ್ನು ಚರಿತ್ರೆಯ ಪುಟಗಳಲ್ಲಿ ಕಾಣಬಹುದು. ಬಿಂದೇಶ್ವರಿ ಪ್ರಸಾದ್ ಮಂಡಲ್ ಆಯೋಗವು ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇಕಡ 27ರಷ್ಟು ಮೀಸಲಾತಿ ನೀಡಬೇಕೆಂದು ಶಿಫಾರಸು ಮಾಡಿ 1980ರಲ್ಲಿ ವರದಿ ನೀಡಿತ್ತು. 1990ರ ಆಗಸ್ಟ್‌ನಲ್ಲಿ ಆಗಿನ ಪ್ರಧಾನಿ ವಿ.ಪಿ. ಸಿಂಗ್ ಅವರು ಮಂಡಲ್ ವರದಿಯ ಶಿಫಾರಸುಗಳ ಅನುಷ್ಠಾನಕ್ಕೆ ಮುಂದಾದಾಗ ರಾಷ್ಟ್ರವ್ಯಾಪಿ ಪ್ರತಿಭಟನೆಯ ಕಿಚ್ಚು ಆವರಿಸಿತು. ಶೋಷಿತ ಸಮುದಾಯಗಳಿಗೆ ಮೀಸಲಾತಿಯ ಮೂಲಕ ಶಿಕ್ಷಣ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಪ್ರಾತಿನಿಧ್ಯ ಕಲ್ಪಿಸುವುದನ್ನು ತೆರೆಮರೆಯಲ್ಲಿ ವಿರೋಧಿಸಿಕೊಂಡು ಬಂದವರೆಲ್ಲರೂ ಮಂಡಲ್ ವರದಿ ವಿರುದ್ಧ ಪ್ರತಿಭಟನೆಗೆ ಇಳಿದರು. ಅಂತರಂಗದಲ್ಲಿ ಮೀಸಲಾತಿಯನ್ನು ವಿರೋಧಿಸುತ್ತಿದ್ದ ಅನೇಕ ರಾಜಕಾರಣಿಗಳು ಮತ್ತು ರಾಜಕೀಯ ಪಕ್ಷಗಳ ಬೆಂಬಲವೂ ಈ ಹೋರಾಟಕ್ಕೆ ಇತ್ತು. ಈ ರೀತಿ ಮೀಸಲಾತಿ ವ್ಯವಸ್ಥೆಯ ಮೇಲೆ ಆರಂಭವಾದ 'ರಾಜಕಾರಣದ ಸವಾರಿ' ನಂತರ ಬಲಗೊಳ್ಳುತ್ತಲೇ ಇದೆ.

ಬಲಗೊಂಡ ನಂಟು

ಕೇಂದ್ರ ಸರ್ಕಾರವು ವೈದ್ಯಕೀಯ ಶಿಕ್ಷಣವೂ ಸೇರಿದಂತೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದ ವರ್ಗಗಳಿಗೆ ಶೇಕಡ 27ರಷ್ಟು ಮೀಸಲಾತಿ ಕಲ್ಪಿಸಲು 2006ರಲ್ಲಿ ಮುಂದಾಯಿತು. ಈ ತೀರ್ಮಾನದ ವಿರುದ್ಧವೂ ಪ್ರಬಲ ಸಮುದಾಯಗಳ ವಿದ್ಯಾರ್ಥಿಗಳು ದೇಶವ್ಯಾಪಿಯಾಗಿ ಬೀದಿಗೆ ಇಳಿದಿದ್ದರು. 'ಎರಡನೇ ಮಂಡಲ್ ಹೋರಾಟ' ಎಂಬ ಹೆಸರಿನಡಿ ನಡೆದ ಈ ಪ್ರತಿಭಟನೆ ಹಲವೆಡೆ ಹಿಂಸಾಚಾರಕ್ಕೆ ಎಡೆಮಾಡಿತ್ತು. ಆಗ ಕೂಡ ರಾಜಕೀಯ ಕೈವಾಡ ಪ್ರಬಲವಾಗಿ ಕೆಲಸ ಮಾಡಿತ್ತು. ಮೀಸಲಾತಿ ವಿರೋಧಿ ಮನಃಸ್ಥಿತಿಯ ರಾಜಕೀಯ ಪಕ್ಷಗಳ ಜತೆ ನಂಟು ಹೊಂದಿರುವವರೇ ಈ ಹೋರಾಟದ ನೇತೃತ್ವ ವಹಿಸಿದ್ದು ಇದಕ್ಕೆ ಸಾಕ್ಷಿಯಾಗಿತ್ತು. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವುದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೂ ಅರ್ಜಿ ಸಲ್ಲಿಸಲಾಗಿತ್ತು. 2008ರಲ್ಲಿ ಪ್ರಕರಣ ಇತ್ಯರ್ಥಪಡಿಸಿದ ನ್ಯಾಯಾಲಯ, ಉನ್ನತ ಶಿಕ್ಷಣ ಕ್ಷೇತ್ರದಲ್ಲೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶೇ 27ರಷ್ಟು ಮೀಸಲಾತಿ ನೀಡುವ ಸರ್ಕಾರದ ನಿರ್ಧಾರವನ್ನು ಎತ್ತಿಹಿಡಿದಿತ್ತು.

ಭೂ ಮಾಲೀಕತ್ವ, ಸಾಮಾಜಿಕ ಸ್ಥಿತಿ, ಶಿಕ್ಷಣ ಮತ್ತು ಉದ್ಯೋಗ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಮುಂದುವರಿದಿರುವ ಹಾಗೂ ರಾಜಕೀಯ ಪ್ರಾತಿನಿಧ್ಯದ ವಿಚಾರದಲ್ಲಿ ಮುಂಚೂಣಿಯಲ್ಲಿರುವ ಪ್ರಬಲ ಸಮುದಾಯಗಳು ಮೀಸಲಾತಿಗಾಗಿ ಒತ್ತಡ ಹೇರುತ್ತಿರುವುದು ಒಂದು ದಶಕದಿಂದ ಈಚೆಗೆ ಹೆಚ್ಚುತ್ತಿದೆ. 2015ರಲ್ಲಿ ರಾಜಸ್ಥಾನದಲ್ಲಿ ಗುಜ್ಜರ್ ಸಮುದಾಯದ ಜನರು ಎಲ್ಲ ಸರ್ಕಾರಿ ಹುದ್ದೆಗಳಲ್ಲಿ ಶೇ 5ರಷ್ಟು ಮೀಸಲಾತಿಗೆ ಆಗ್ರಹಿಸಿ ಹೋರಾಟ ನಡೆಸಿದ್ದರು. ಈ ಚಳವಳಿಯು ರಾಜಸ್ಥಾನದ ಹಲವೆಡೆ ಜನಜೀವನವನ್ನೇ ಅಸ್ತವ್ಯಸ್ತಗೊಳಿಸಿತ್ತು. ಗುಜರಾತ್‌ನಲ್ಲಿ ಪಾಟೀದಾರ್ (ಪಟೇಲರು) ಸಮುದಾಯದ ಜನರು ಮೀಸಲಾತಿ ನೀಡುವಂತೆ ಆಗ್ರಹಿಸಿ 2015ರಲ್ಲಿ ದೀರ್ಘಕಾಲ ಹೋರಾಟ ನಡೆಸಿದ್ದರು. ಚಳವಳಿ ಹಿಂಸಾರೂಪ ಪಡೆದಿದ್ದರಿಂದ ಪೊಲೀಸರು ನಡೆಸಿದ ಗೋಲಿಬಾರ್‌ನಲ್ಲಿ 11 ಮಂದಿ ಮೃತಪಟ್ಟಿದ್ದರು. ಆಂಧ್ರಪ್ರದೇಶದಲ್ಲಿ ಕಾಪು ಸಮುದಾಯವು ಇತರ ಹಿಂದುಳಿದ ವರ್ಗಗಳ ಕೋಟಾದಡಿ ಮೀಸಲಾತಿಗೆ ಆಗ್ರಹಿಸಿ 2016ರಲ್ಲಿ ಬೃಹತ್ ಹೋರಾಟ ನಡೆಸಿತ್ತು. ಅದೇ ವರ್ಷ ಹರಿಯಾಣದಲ್ಲಿ ಜಾಟರು ಮೀಸಲಾತಿಗಾಗಿ ನಡೆಸಿದ ಹೋರಾಟವು ಹಿಂಸಾರೂಪ ಪಡೆದಿತ್ತು. 2018ರಲ್ಲಿ ಮರಾಠಿಗರು ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ದೊಡ್ಡ ಹೋರಾಟ ನಡೆಸಿದ್ದರು. ಮಹಾರಾಷ್ಟ್ರ, ರಾಜಸ್ಥಾನ ಸೇರಿದಂತೆ ಕೆಲವು ರಾಜ್ಯಗಳು ಹೋರಾಟಗಾರರ ಬೇಡಿಕೆಗೆ ಮಣಿದು ತೀರ್ಮಾನ ಕೈಗೊಂಡಿದ್ದವು. ಗುಜರಾತ್‌ನ ಪಾಟೀದಾರ ಸಮುದಾಯವು ಆರ್ಥಿಕವಾಗಿ ದುರ್ಬಲ ಸಮುದಾಯಗಳ ಕೋಟಾದಡಿ ಶೇ 10ರ ಮೀಸಲಾತಿಯಲ್ಲಿ ಪಾಲು ಪಡೆಯುತ್ತಿದೆ.

ಕೆಲವು ವರ್ಷಗಳ ಹಿಂದಿನವರೆಗೂ ಮೀಸಲಾತಿ ಕಲ್ಪಿಸುವುದು ಮತ್ತು ಅದರ ಪ್ರಮಾಣದ ಹೆಚ್ಚಳಕ್ಕೆ ಬೇಡಿಕೆಯಿಟ್ಟು ನಡೆಯುವ ಹೋರಾಟದ ಮುಂಚೂಣಿಯಲ್ಲಿ ಆಯಾ ಸಮುದಾಯದ ಜಾತಿ ಸಂಘಟನೆಗಳೇ ಇರುತ್ತಿದ್ದವು. ರಾಜಕೀಯ ನಾಯಕರು ದೂರದಲ್ಲೇ ಉಳಿದಿರುತ್ತಿದ್ದರು. ಆದರೆ, ಇತ್ತೀಚಿನ ವರ್ಷಗಳಲ್ಲಿ ರಾಜಕೀಯವಾಗಿ ಪ್ರಬಲವಾಗಿರುವ ಸಮುದಾಯಗಳು ಮೀಸಲಾತಿಗಾಗಿ ನಡೆಸುತ್ತಿರುವ ಹೋರಾಟದ ನೇತೃತ್ವವನ್ನು ರಾಜಕೀಯ ನೇತಾರರೇ ವಹಿಸುತ್ತಿದ್ದಾರೆ. ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯಿಂದ ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸುವಂತೆ ಒತ್ತಾಯಿಸಿ ಕುರುಬರು ನಡೆಸುತ್ತಿರುವ ಹೋರಾಟ, ಹಿಂದುಳಿದ ವರ್ಗಗಳ ಪ್ರವರ್ಗ 2–ಎ ಪಟ್ಟಿಗೆ ಸೇರಿಸುವಂತೆ ಒತ್ತಾಯಿಸಿ ಪಂಚಮಸಾಲಿ ಸಮುದಾಯ ನಡೆಸುತ್ತಿರುವ ಹೋರಾಟಗಳ ಮುಂಚೂಣಿಯಲ್ಲಿ ರಾಜಕಾರಣಿಗಳೇ ಇದ್ದಾರೆ. ಹಿಂದುಳಿದ ವರ್ಗಗಳ ಪ್ರವರ್ಗ–3ರ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಒಕ್ಕಲಿಗರು ಆರಂಭಿಸಿರುವ ಹೋರಾಟದ ವೇದಿಕೆಯಲ್ಲೂ ಸಚಿವರು, ಶಾಸಕರು, ಸಂಸದರು ನೇರವಾಗಿ ಭಾಗಿಯಾಗಿದ್ದಾರೆ.

ಆಯಾ ರಾಜ್ಯಗಳ ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವಾಗಲೇ ಪ್ರಬಲ ಸಮುದಾಯಗಳ ಮೀಸಲಾತಿ ಬೇಡಿಕೆಗಳು ಮುನ್ನೆಲೆಗೆ ಬರುತ್ತಿವೆ. ಭೂ ಒಡೆತನ, ಆರ್ಥಿಕ ಮತ್ತು ರಾಜಕೀಯವಾಗಿ ಬಲಿಷ್ಠವಾಗಿರುವ ಸಮುದಾಯಗಳು ತಮಗಿರುವ 'ಮತದಾರರ ಬಲ'ವನ್ನು ಆಡಳಿತದ ಚುಕ್ಕಾಣಿ ಹಿಡಿದವರ ಮುಂದಿಟ್ಟು 'ಹಿಂದುಳಿದವರ' ಪಟ್ಟಿ ಸೇರಲು ಪಟ್ಟು ಹಾಕುತ್ತಿವೆ. ಆಡಳಿತದ ಚುಕ್ಕಾಣಿ ಹಿಡಿದವರು ಮತಬ್ಯಾಂಕ್ ಆಸೆಯಲ್ಲಿ ನಿರ್ಧಾರ ಕೈಗೊಳ್ಳುವ ಇಕ್ಕಟ್ಟಿಗೆ ಸಿಲುಕುತ್ತಿರುವುದು ನಡೆಯುತ್ತಲೇ ಇದೆ.

ನಿಲುವು ಬದಲಿಸಿದ ಕಾಂಗ್ರೆಸ್

ಇಡಬ್ಲ್ಯುಎಸ್ ಮೀಸಲಾತಿಯನ್ನು ಎತ್ತಿಹಿಡಿದ ಸುಪ್ರೀಂ ಕೋರ್ಟ್ ತೀರ್ಪನ್ನು ಕಾಂಗ್ರೆಸ್ ಪಕ್ಷ ಸ್ವಾಗತಿಸಿತ್ತು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಆ ಪಕ್ಷದ ಹಲವು ನಾಯಕರು ನ್ಯಾಯಾಲಯದ ತೀರ್ಮಾನವನ್ನು ಸ್ವಾಗತಿಸಿ ಹೇಳಿಕೆ ನೀಡಿದ್ದರು. ಆದರೆ, ತಮಿಳುನಾಡಿನ ಡಿಎಂಕೆ ಸರ್ಕಾರ ತೀರ್ಪಿನ ಮರುಪರಿಶೀಲನೆಗೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ ಬಳಿಕ ಕಾಂಗ್ರೆಸ್ ನಿಲುವು ಬದಲಿಸಿದೆ. ತೀರ್ಪಿನ ಮರು ಪರಿಶೀಲನೆ ನಡೆಸುವಂತೆ ಕೋರಿ ಕಾಂಗ್ರೆಸ್ ನಾಯಕರೂ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ.

ವಿಮರ್ಶೆಗೂ ಹೆದರುವ ಕಾಲ

ಕೇಂದ್ರ ಸರ್ಕಾರವು ಸಂವಿಧಾನಕ್ಕೆ 103ನೇ ತಿದ್ದುಪಡಿ ತರುವ ಮೂಲಕ ಆರ್ಥಿಕವಾಗಿ ದುರ್ಬಲ ಸಮುದಾಯಗಳಿಗೆ (ಇಡಬ್ಲ್ಯುಎಸ್) ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇಕಡ 10ರಷ್ಟು ಮೀಸಲಾತಿ ಕಲ್ಪಿಸಿದೆ. ಈವರೆಗೂ ಮೀಸಲಾತಿಯ ವ್ಯಾಪ್ತಿಯಲ್ಲಿಲ್ಲದ ಸಮುದಾಯಗಳ ಬಡವರಿಗೆ ಮಾತ್ರವೇ ಈ ಮೀಸಲಾತಿ ದೊರಕಲಿದೆ. ಸುಪ್ರೀಂ ಕೋರ್ಟ್ ಈ ತಿದ್ದುಪಡಿಯನ್ನು ಎತ್ತಿಹಿಡಿದಿದೆ. ಆದರೆ, ಕರ್ನಾಟಕವೂ ಸೇರಿದಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಸಂಖ್ಯೆ ಜಾಸ್ತಿಯಾಗಿರುವ ಹಲವು ರಾಜ್ಯಗಳಲ್ಲಿ ಇಡಬ್ಲ್ಯುಎಸ್ ವ್ಯಾಪ್ತಿಗೆ ಸೇರುವ ಸಮುದಾಯಗಳ ಜನಸಂಖ್ಯೆ ಕಡಿಮೆ ಇದೆ. ಜನಸಂಖ್ಯೆಗಿಂತ ಹೆಚ್ಚಿನ ಮೀಸಲು ಕಲ್ಪಿಸುವಂತಹ ನಿರ್ಧಾರದ ಅಪಾಯಗಳ ಕುರಿತು ವಿಮರ್ಶಿಸುವುದಕ್ಕೂ ರಾಜಕೀಯ ನೇತಾರರು ಹೆದರುತ್ತಿದ್ದಾರೆ.


ಕರ್ನಾಟಕದಲ್ಲಿ ಬ್ರಾಹ್ಮಣ, ಜೈನ, ಆರ್ಯವೈಶ್ಯ, ನಗರ್ತ ಮತ್ತು ಮೊದಲಿಯಾರ್ ಸಮುದಾಯಗಳು ಆರ್ಥಿಕವಾಗಿ ದುರ್ಬಲ ವರ್ಗಗಳ ಕೋಟಾದಡಿ ಮೀಸಲಾತಿ ಪಡೆಯಲು ಅರ್ಹತೆ ಹೊಂದಿವೆ. ಸದ್ಯದ ಅಂದಾಜಿನ ಪ್ರಕಾರ, ಈ ಸಮುದಾಯಗಳ ಜನಸಂಖ್ಯೆ ರಾಜ್ಯದ ಒಟ್ಟು ಜನಸಂಖ್ಯೆಯ ಶೇ 5ರಷ್ಟನ್ನು ದಾಟುವುದಿಲ್ಲ. ಆದರೆ, ಇಲ್ಲಿ ಅವರಿಗೆ ದುಪ್ಪಟ್ಟು ಮೀಸಲಾತಿ ದೊರಕಲಿದೆ. ಸಹಜವಾಗಿಯೇ ಅನ್ಯ ಸಮುದಾಯಗಳು ಅವಕಾಶ ವಂಚಿತವಾಗಲಿವೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಸೇರಿದಂತೆ ಮೀಸಲಾತಿ ಸೌಲಭ್ಯ ಪಡೆಯುವ ಸಮುದಾಯಗಳಿಂದ ಬಂದಿರುವ ನೇತಾರರೂ ಈ ಬಗ್ಗೆ ಮಾತನಾಡಲು ಹಿಂಜರಿಯುತ್ತಾರೆ. ಮುಂಬರುವ ವಿಧಾನಸಭಾ ಚುನಾವಣೆ ಮತ್ತು ರಾಜಕೀಯ ಭವಿಷ್ಯದ ಚಿಂತೆ ನೇತಾರರನ್ನು ಈ ಸ್ಥಿತಿಗೆ ದೂಡಿದಂತಿದೆ.

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಮೀಸಲಾತಿ ಪ್ರಮಾಣ ಹೆಚ್ಚಿಸಲು ಒತ್ತಾಯಿಸಿ ವಿವಿಧ ಜಾತಿಗಳವರು ಪ್ರತಿಭಟನೆ ಎಚ್ಚರಿಕೆ ನೀಡಿ ಸರ್ಕಾರಕ್ಕೆ ಗಡುವು ನೀಡುತ್ತಿದ್ದಾರೆ. ಇದು ಮುಂದಿನ ಚುನಾವಣೆ ಮೇಲೆ ಪರಿಣಾಮ ಬೀರಲಿದೆ ಎಂದು ಭಾವಿಸುವಿರಾ?

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 289

ಕೈಲಾಸದಲ್ಲಿ ಶಿವ-ಗೌರಿ ಉತ್ಸವ

ಪಾರ್ವತಿಯನ್ನು ಶಿವನೊಂದಿಗೆ ಕಳುಹಿಸಿಕೊಡುವ ಸಂದರ್ಭದಲ್ಲಿ ದುಃಖಭಾವದಲ್ಲಿದ್ದ ಮೇನಾದೇವಿಗೆ ಸಮಾಧಾನದ ಮಾತನಾಡುವ ಶಿವ, ತನ್ನ ನಂಬಿ ಬರುವ ಪಾರ್ವತಿಗೆ ಯಾವ ಕಷ್ಟವೂ ಬಾರದಂತೆ ಚೆನ್ನಾಗಿ ನೋಡಿಕೊಳ್ಳುವುದಾಗಿ ಭರವಸೆ ನೀಡುತ್ತಾನೆ. ಪತ್ನಿಯಾದವಳು ಗಂಡನ ಮೇಲೆ ಇಟ್ಟ ನಿಷ್ಠೆಗೆ ಚ್ಯುತಿ ಬಾರದಂತೆ ಉತ್ತಮವಾಗಿ ನಡೆದುಕೊಳ್ಳುವುದು ಪತಿಯ ಧರ್ಮ. ತಾನು ಸರ್ವೇಶ್ವರನಾದರೂ ಪತಿಧರ್ಮವನ್ನು ಚಾಚು ತಪ್ಪದೇ ಪಾಲಿಸುತ್ತೇನೆ. ನಾನು ಪತ್ನಿಗೆ ದ್ರೋಹ ಬಗೆದರೆ ಅದರ ಪ್ರಾಯಶ್ಚಿತ್ತ ಶಿಕ್ಷೆ ಅನುಭವಿಸುತ್ತೇನೆ. ನಾನು ಸ್ತ್ರೀಧರ್ಮ ಮತ್ತು ಪುರುಷಧರ್ಮವನ್ನು ಸರಿಸಮನಾಗಿ ನೋಡುತ್ತೇನೆ. ಸ್ತ್ರೀಮೌಲ್ಯಕ್ಕೆ ಚ್ಯುತಿ ಬಾರದಂತೆ ಧರ್ಮಪಾಲನೆ ಮಾಡುತ್ತೇನೆ. ಹೂವಿನಂತೆ ಸಾಕಿದ ನಿಮ್ಮ ಮಗಳನ್ನು ನಾನು ಹೃದಯದಲ್ಲಿಟ್ಟು ಸಲಹುತ್ತೇನೆ. ಇದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಶಿವನು ಹಿಮವಂತದಂಪತಿಗೆ ಅಭಯ ನೀಡುತ್ತಾನೆ.

ಮೇನಾದೇವಿ ತನ್ನ ಮನದಲ್ಲಿ ದುಗುಡ ತುಂಬಿದ್ದರೂ, ಮಗಳನ್ನು ಗಂಡನ ಮನೆಗೆ ಕಳುಹಿಸಲು ಸಿದ್ಧಳಾಗುತ್ತಾಳೆ. ಮೇನಾದೇವಿಯ ದುಃಖ ಉಮ್ಮಳಿಸುತ್ತದೆ. ತವರನ್ನು ತೊರೆವ ಸಂಕಟವನ್ನು ತಾಳಲಾರದೆ ತಾಯಿಯನ್ನು ತಬ್ಬಿ ಪಾರ್ವತಿಯೂ ಅಳುತ್ತಾಳೆ. ದೇವಪತ್ನಿಯರ ಕಣ್ಣಂಚಿನಲ್ಲಿ ನೀರು ಧಾರೆಯಾಗಿ ಹರಿಯುತ್ತದೆ.

ಇಂಥ ದುಃಖಮಯ ಸನ್ನಿವೇಶದಿಂದ ಸಾಕ್ಷಾತ್ ಪರಮೇಶ್ವರ ಸಹ ಜನಸಾಮಾನ್ಯರಂತೆ ದುಃಖಭಾವದಿಂದ ಕಣ್ಣೀರಿಡುತ್ತಾನೆ. ಮಗಳನ್ನು ತನ್ನ ಎದೆಗೊರಗಿಸಿಕೊಂಡ ಹಿಮವಂತ ಗಟ್ಟಿಯಾಗಿ ಅಳುತ್ತಾನೆ. ಪಾರ್ವತಿ ಭಕ್ತಿಯಿಂದ ತಾಯಿ–ತಂದೆ ಗುರುಗಳು ಮತ್ತು ಹಿರಿಯರಿಗೆ ನಮಸ್ಕರಿಸಿದಳು. ಪಾರ್ವತಿಯ ತಾಯಿ ಮೇನಾದೇವಿ, ಮತ್ತವಳ ಸಹೋದರರು ಬಹಳ ರೋದಿಸಿದರು. ಹಿಮವಂತ ಮತ್ತು ಮೇನಾದೇವಿ ಹೇಗೋ ಧೈರ್ಯವನ್ನು ತಂದುಕೊಂಡು, ಪ್ರಯಾಣಕ್ಕೆ ಅನುಕೂಲವಾದ ಪಲ್ಲಕ್ಕಿಯಲ್ಲಿ ಪಾರ್ವತಿಯನ್ನು ಕುಳ್ಳಿರಿಸಿದರು. ಆಗ ಅಲ್ಲಿದ್ದವರೆಲ್ಲರೂ ಪಾರ್ವತಿಯನ್ನು ಆಶೀರ್ವದಿಸಿದರು.

ಪಾರ್ವತಿಯನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ದೇವತೆಗಳ ಬಿಡಾರದಲ್ಲಿದ್ದ ಶಿವನ ಬಳಿಗೆ ಹಿಮವಂತ ಕರೆತಂದ. ನಂತರ ಶಿವ ತನ್ನ ನಂದಿವಾಹನದಲ್ಲಿ ಪಾರ್ವತಿಯೊಂದಿಗೆ ಕೈಲಾಸಕ್ಕೆ ಹೊರಟ. ಶಿವನನ್ನು ಬ್ರಹ್ಮ, ವಿಷ್ಣು ಮತ್ತಿತರ ದೇವತೆಗಳು ಹಿಂಬಾಲಿಸಿದರು. ನೂತನ ದಂಪತಿಗಳಾದ ಶಿವ-ಪಾರ್ವತಿಯರು ಕೈಲಾಸಕ್ಕೆ ಬಂದಾಗ ದೊಡ್ಡ ಉತ್ಸವ ನಡೆಯಿತು.

ಏಕಾಂತದಲ್ಲಿ ಕುಳಿತ ಪರಮೇಶ್ವರ ಮತ್ತು ಪಾರ್ವತಿ ಪರಸ್ಪರ ಪ್ರಿಯವಾದ ಮಾತುಗಳನ್ನಾಡುತ್ತಾ ಸಂತೋಷಪಟ್ಟರು. 'ನೀನು ಯಾವಾಗಲೂ ನನಗೆ ಪ್ರಾಣಪ್ರಿಯಳಾಗಿರು' ಎಂದು ಶಿವ ಹೇಳಿದರೆ, ಪಾರ್ವತಿ ಮುಗುಳುನಗುತ್ತಾ, 'ಪ್ರಾಣನಾಥ ನೀನು ನನ್ನ ಪ್ರಾಣಪ್ರಿಯ' ಎಂದಳು. ಹೀಗೆ ಶಿವ-ಪಾರ್ವತಿಯರ ದಾಂಪತ್ಯಜೀವನ ಸುಖಮಯವಾಗಿ ಸಾಗುತ್ತದೆ.

ಶ್ರೀಶಿವಮಹಾಪುರಾಣದಲ್ಲಿ ಪಾರ್ವತೀಖಂಡದ ಅಂತಿಮ ಅಧ್ಯಾಯ ಮುಗಿಯಿತು.

ವಿಷಾದ

ಸೋಮವಾರದ ಸಂಚಿಕೆಯಲ್ಲಿ ಪ್ರಕಟವಾದ ಲೇಖನಕ್ಕೆ ಸಾಕಷ್ಟು ಆಕ್ರೋಶ ವ್ಯಕ್ತವಾಗಿದ್ದನ್ನು ಗಮನಿಸಿದ್ದೇವೆ. ಪಾರ್ವತಿಗೆ ಅಜ್ಜಿಯೊಬ್ಬಳು ಉಪದೇಶ ಮಾಡುವುದನ್ನು ಶಿವಪುರಾಣದಲ್ಲಿ ಬರೆಯಲಾಗಿತ್ತೇ ವಿನಾ ಯಾವ ಮಹಿಳೆಯರಿಗೂ ನೋವನ್ನುಂಟು ಮಾಡುವ ಉದ್ದೇಶವಾಗಿರಲಿಲ್ಲ. ಯಾರಿಗಾದರೂ ನೋವಾಗಿದ್ದರೆ ವಿಷಾದಿಸುತ್ತೇವೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಸೇನೆಯ ನಿವೃತ್ತ** ಯೋಧರೊಬ್ಬರ ಮುಖದ ಮೇಲೆ ರಕ್ತದ ಕಲೆ ಹಾಗೂ ಗಾಯದ ಗುರುತು ಕಾಣಿಸುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ರೈಲಿನಲ್ಲಿ ಪ್ರಾರ್ಥನೆ ಮಾಡುತ್ತಿದ್ದ ಮುಸ್ಲಿಂ ಸಮುದಾಯದ ಕೆಲವರು ಯೋಧ ವಿಲಾಸ್ ನಾಯಕ್ ಮೇಲೆ ಗಂಭೀರವಾಗಿ ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ರೈಲಿನಲ್ಲಿ ಪ್ರಾರ್ಥನೆ ಮಾಡುತ್ತಿದ್ದುದನ್ನು ಪ್ರಶ್ನಿಸಿದ್ದಕ್ಕೆ ಹಲ್ಲೆ ನಡೆಸಲಾಗಿದೆ ಎಂದು ಹೇಳಲಾಗಿದೆ. ಸ್ವರ್ಣ ಜಯಂತಿ ರೈಲಿನಲ್ಲಿ ನಡೆದ ಈ ಘಟನೆಯ ವಿಡಿಯೊವನ್ನು ಹಲವರು ಹಂಚಿಕೊಂಡಿದ್ದಾರೆ. 'ಜಿಹಾದಿಗಳು ಹಿಂದೂ ವ್ಯಕ್ತಿಯ ಮೇಲೆ ಹಲ್ಲೆ ಮಾಡಿದ್ದಾರೆ' ಎಂದು ಸುದರ್ಶನ್ ವಾಹಿನಿಯ ಪತ್ರಕರ್ತರೊಬ್ಬರು ಟ್ವೀಟ್ ಮಾಡಿದ್ದಾರೆ. ಆದರೆ ಇದರಲ್ಲಿ ಸತ್ಯಾಂಶವಿಲ್ಲ.

✓ **ಯೋಧನ ಮೇಲೆ** ಮುಸ್ಲಿಮರು ಹಲ್ಲೆ ನಡೆಸಿದ್ದಾರೆ ಎಂಬುದು ಸುಳ್ಳು ಎಂದು ಲಾಜಿಕಲ್ ಇಂಡಿಯನ್ ವೆಬ್‌ಸೈಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಗಾಯಾಳು ವ್ಯಕ್ತಿಯು ವಿಡಿಯೊದಲ್ಲಿ ಮಾತನಾಡಿರುವ ಪ್ರಕಾರ, ಹಲ್ಲೆ ನಡೆಸಿದ್ದು ರೈಲಿನ ಅಡುಗೆ ಕೆಲಸಗಾರರೇ ಹೊರತು ಮುಸ್ಲಿಮರಲ್ಲ. 'ಫಸ್ಟ್‌ಪೋಸ್ಟ್'ನಲ್ಲಿ ನ.22ರಂದು ಪ್ರಕಟವಾದ ವರದಿಯಲ್ಲಿ ಈ ಅಂಶವಿದೆ. ಮುಸ್ಲಿಮರು ಬೋಗಿಯಲ್ಲಿ ಆಗಾಗ್ಗೆ ಪ್ರಾರ್ಥನೆ ಸಲ್ಲಿಸುತ್ತಿದ್ದರು. ನಾಯಕ್ ಅವರಿಗೆ ಶೌಚಾಲಯಕ್ಕೆ ಹೋಗಲು ದಾರಿ ಸಿಗಲಿಲ್ಲ. ಇದನ್ನು ಪ್ರತಿಭಟಿಸುವ ಸಲುವಾಗಿ ನಾಯಕ್ ಸಹ ಅದೇ ಜಾಗದಲ್ಲಿ ಪ್ರಾರ್ಥನೆ ಸಲ್ಲಿಸಿದರು. ಪ್ರತಿಭಟನೆಯಿಂದ ಹಿಂದೆ ಸರಿಯುವಂತೆ ಅಡುಗೆ ಕೆಲಸಗಾರರು ಹೇಳಿದರು. ಆದರೆ, ಅವರು ಒಪ್ಪದ್ದರಿಂದ ವಾಗ್ವಾದ ನಡೆದು, ಅದು ಘರ್ಷಣೆಗೆ ತಿರುಗಿತು ಎಂದು ವರದಿ ಉಲ್ಲೇಖಿಸಿದೆ. 'ನಾಯಕ್ ನೀಡಿರುವ ದೂರಿನಲ್ಲಿ ಇಬ್ಬರು ಅಡುಗೆ ಕೆಲಸಗಾರರ ಮೇಲೆ ಹಲ್ಲೆ ಆರೋಪ ಮಾಡಿದ್ದಾರೆ. ಈ ಘರ್ಷಣೆಯಲ್ಲಿ ಮುಸ್ಲಿಮರು ಪಾಲ್ಗೊಂಡಿಲ್ಲ' ಎಂದು ಜಿಆರ್‌ಪಿ ಬೇತುಲ್ ಪೊಲೀಸ್ ಠಾಣೆಯ ಉಸ್ತುವಾರಿ ಪೊಲೀಸ್ ಅಧಿಕಾರಿ ನರೋತ್ತಮ ಠಾಕೂರ್ ಸ್ಪಷ್ಟಪಡಿಸಿದ್ದಾರೆ. ಅಡುಗೆ ಕೆಲಸದವರಿಗೂ ಗಾಯಗಳಾಗಿವೆ ಎಂದು ಅಡುಗೆ ಕೆಲಸ ವಿಭಾಗದ ಮ್ಯಾನೇಜರ್ ಹರ್ವೇಶ್ ಶ್ರೀವಾಸ್ತವ ಹೇಳಿದ್ದಾರೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಹನುಮಂತನ ಉಪದೇಶ


ಘನತತ್ತ್ವವೊಂದಕ್ಕೆ ದಿನರಾತ್ರಿ ಮನಸೋತು |
ನೆನೆಯದಿನ್ನೊಂದನೆಲ್ಲವ ನೀಡುತದರಾ ||
ಅನುಸಂಧಿಯಲಿ ಜೀವಭಾರವನು ಮರೆಯುವುದು
ಹನುಮಂತನುಪದೇಶ – ಮಂಕುತಿಮ್ಮ || 766 ||

ಪದ-ಅರ್ಥ: ಘನತತ್ವವೊಂದಕ್ಕೆ = ಘನತತ್ವ (ಶ್ರೇಷ್ಠತತ್ವ) + ಒಂದಕ್ಕೆ, ನೆನೆಯದಿನ್ನೊಂದನೆಲ್ಲವ = ನೆನೆಯದು + ಇನ್ನೊಂದನು + ಎಲ್ಲವ, ನೀಡುತದರಾ = ನೀಡುತ + ಅದರ + ಆ,

ವಾಚ್ಯಾರ್ಥ: ಶ್ರೇಷ್ಠವಾದ ತತ್ವಕ್ಕೆ ದಿನರಾತ್ರಿ ಮನಸ್ಸನ್ನು ತೆತ್ತು, ಬೇರೆ ಏನನ್ನೂ ನೆನೆಯದೆ ಆ ತತ್ವದ ಅನ್ವೇಷಣೆಯಲ್ಲಿ ತನ್ನ ಬದುಕಿನ ಭಾರವನ್ನು ಮರೆಯುವುದೇ ಹನುಮಂತ ನಮಗೆ ನೀಡಿದ ಉಪದೇಶ.

ವಿವರಣೆ: ಕಗ್ಗ ಇಲ್ಲಿ ಮತ್ತೊಂದು ಅಮೋಘವಾದ ಮಾದರಿಯನ್ನು ಕಣ್ಣ ಮುಂದೆ ಇರಿಸುತ್ತದೆ. ಬದುಕಿನಲ್ಲಿ ಸಾಧನೆ ಮಾಡುವುದು ಹೇಗೆ? ಅದಕ್ಕೆ ನಾವು ಯಾವ ಸಿದ್ಧತೆಯನ್ನು ಮಾಡಿಕೊಳ್ಳಬೇಕು ಎಂಬ ಪ್ರಶ್ನೆಗಳು ಕಾಡುತ್ತವೆ. ಅವುಗಳಿಗೆ ಉತ್ತರವಾಗಿ ಈ ಕಗ್ಗ. ನಮ್ಮ ಜೀವನದಲ್ಲಿ ಗುರಿಯೊಂದನ್ನು ಆರಿಸಿಕೊಳ್ಳಬೇಕು. ಆ ಗುರಿ ಚಿಕ್ಕದಾಗಿರಬಾರದು. ಅದು ಒಂದು ಶ್ರೇಷ್ಠ ತತ್ವ – ಘನತತ್ವ. ಒಂದು ಬಾರಿ ಗುರಿ ನಿರ್ಧಾರವಾಯಿತೋ, ಅದರ ಮೇಲಿನ ದೃಷ್ಟಿ ಅಲುಗಾಡಬಾರದು. ಏಕದೃಷ್ಟಿಯಿಂದ ನಮ್ಮ ಸಕಲ ಶಕ್ತಿಯನ್ನು ಹಾಕಿ, ಆ ದೆಶೆಗೆ ನಡೆಯಬೇಕು. ಆ ಪ್ರಯಾಣದಲ್ಲಿ ತನ್ಮಯತೆ ಯಾವ ಪ್ರಮಾಣದಲ್ಲಿರಬೇಕೆಂದರೆ, ದಾರಿಯಲ್ಲಿ ಬರುವ ಯಾವ ತೊಂದರೆಯೂ ಗಮನಕ್ಕೆ ಬರುವುದಿಲ್ಲ. ಆದರ್ಶಗುರಿ ಮತ್ತು ಅದರೆಡೆಗೆ ಅವಿರತ ಪರಿಶ್ರಮ ಇವೆರಡೇ ಅದ್ಭುತ ಸಾಧನೆಗಳಿಗೆ ದಾರಿಗಳು. ಹನುಮಂತ ಶ್ರೀರಾಮನನ್ನು ತನ್ನ ದೈವ, ನಾಯಕ ಮತ್ತು ಆದರ್ಶವೆಂದು ಒಪ್ಪಿಕೊಂಡ. ಆ ಕ್ಷಣದಿಂದಲೇ ಅವನ ಬದುಕು ರಾಮಮಯವಾಯಿತು. ರಾಮನ ಸೇವೆಯೇ ತನ್ನ ಜೀವನದ ಪರಮ ಉದ್ದೇಶ, ರಾಮತೃಪ್ತಿ ತನ್ನ ಕರ್ತವ್ಯ ಎಂದುಕೊಂಡು ರಾಮನನ್ನು ತನ್ನ ಉಸಿರಿನ ಉಸಿರನ್ನಾಗಿ ಮಾಡಿಕೊಂಡ. ಅವನ ಸ್ವಾಮಿ ಸೇವೆ ಅನನ್ಯವಾದದ್ದು. ಆ ಕರ್ತವ್ಯದಲ್ಲಿ ತನಗೆ ಬಂದ ಅಡೆತಡೆಗಳು, ನೋವುಗಳು ಅವನಿಗೆ ಕಾಣಲೇ ಇಲ್ಲ. ಯಾಕೆಂದರೆ ಅವನ ಹೃದಯವನ್ನು, ಕಣ್ಣುಗಳನ್ನು ತುಂಬಿಕೊಂಡದ್ದು ಕೇವಲ ರಾಮ. ಹನುಮಂತ ಸೇವೆ ಮಾಡುತ್ತಲೇ ಕೋಟಿ ಕೋಟಿ ಜನರಿಗೆ ಆದರ್ಶವಾದ. ಇಂದು ಭಾರತದ ಹಳ್ಳಿ ಹಳ್ಳಿಗಳಲ್ಲಿ ಹನುಮಂತನ ದೇವಸ್ಥಾನಗಳಿವೆ. ಅಷ್ಟು ಪ್ರಮಾಣದ ರಾಮಮಂದಿರಗಳಿಲ್ಲ. ಹನುಮಂತನ ದೇವಸ್ಥಾನಗಳಲ್ಲಿ ರಾಮ ವಿಗ್ರಹಗಳಿರಲಿಕ್ಕಿಲ್ಲ, ಆದರೆ ರಾಮಮಂದಿರಗಳಲ್ಲಿ ಖಂಡಿತವಾಗಿಯೂ ಹನುಮಂತನಿದ್ದಾನೆ. ಇದು ಆಂಜನೇಯನ ತ್ಯಾಗದ, ಸೇವೆಯ ಹೆಗ್ಗುರುತು. ದಾಸನಾಗಿಯೂ, ಜನರ ಹೃದಯಸಿಂಹಾಸನಾಧೀಶ್ವರನಾದವನು ಹನುಮಂತ. ಇದು ಕಗ್ಗ ನಮಗೆ ಹೇಳುವ ಆದರ್ಶ, ಸಫಲತೆಯ ಮಾರ್ಗ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ನವೆಂಬರ್ 29, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಶುಕ್ಲ ಷಷ್ಠಿ ಗಂ. 11-05 ನಕ್ಷತ್ರ: ಶ್ರವಣ ಗಂ. 08-38 ಯೋಗ: ಧ್ರುವ ಗಂ. 14-52, ಕರಣ: ತೈತಿಲ ಗಂ. 11-05, ವೃಶ್ಚಿಕ ಮಾಸದ 12 ನೇ ದಿನ.ರಾಹುಕಾಲ : ಮಧ್ಯಾಹ್ನ 03-00–04-30 ಸೂರ್ಯೋದಯ : 06-40 ಸೂರ್ಯಾಸ್ತ : 05-57 ಮುಸ್ಲಿಂ ದಿನಾಂಕ : 04 ಜುಮಾದುಲ್ಲಾವಲ್, ದಿನ ವಿಶೇಷ : ಸುಬ್ರಹ್ಮಣ್ಯ ಷಷ್ಠಿ, ಚಂಪಾ ಷಷ್ಠಿ, ಮೂಲಕೃಪಿಣಿ ಷಷ್ಠಿ (ಬಂಗಾಳ)
ಅದೃಷ್ಟ ಸಂಖ್ಯೆ : 7, 11

ಮೇಷ: ಸುತ್ತಲ ವಾತಾವರಣ ಸಂತಸದಾಯಕವಾಗಿರುತ್ತದೆ. ಈವರೆಗೆ ಬಾಕಿಯಿದ್ದ ವ್ಯಾಜ್ಯಗಳು ಒಡಹುಟ್ಟಿದವರ ಸಹಾಯದಿಂದ ಬಗೆಹರಿಯುವವು. ದೇವರ ಕೃಪೆಯಿಂದ ನಿರೀಕ್ಷೆಗೂ ಮೀರಿದ ಜಯ ಸಿಗಲಿದೆ.

ವೃಷಭ: ವಾಣಿಜ್ಯ ಇಲಾಖೆಯ ಅಧಿಕಾರಿಗಳಿಗೆ ಇಂದು ಸರ್ಕಾರದಿಂದ ಅನುಕೂಲ ಉಂಟಾಗುವುದು. ಸಾಂಸಾರಿಕವಾಗಿ ಪತಿ ಪತ್ನಿಯ ಅನ್ಯೋನ್ಯತೆಯ ಕನಸು ನನಸಾಗಲಿದೆ. ಪ್ರಮೋಶನ್‌ಅವಕಾಶ ಕೈತಪ್ಪದಂತೆ ನೋಡಿಕೊಳ್ಳಿ.

ಮಿಥುನ: ವೃತ್ತಿಯಲ್ಲಿ ಅಧಿಕಾರಿಗಳು ನಿಮ್ಮ ಕಾರ್ಯಸಾಧನೆ ಗುರುತಿಸಿ ಹೆಚ್ಚಿನ ಸೌಲಭ್ಯ ಒದಗಿಸಿ ಕೊಡುವರು. ನಿವೇಶನ ಕೊಳ್ಳಲು ಸೂಕ್ತಸ್ಥಳದ ಹುಡುಕಾಟ ನಡೆಸುವಿರಿ. ವಿದ್ಯಾರ್ಥಿಗಳು ಅತ್ಯಂತ ಪೈಪೋಟಿ ಎದುರಿಸುವ ದಿನ.

ಕರ್ಕಾಟಕ: ಆಭರಣಗಳ ಖರೀದಿ ನಡೆಸುವುದರಿಂದ ಸಂತೋಷವಾಗುವುದು. ಅನಿರೀಕ್ಷಿತ ವರ್ಗಾವಣೆಯಿಂದ ಅನುಕೂಲ . ಕುಟುಂಬ ಅಭಿವೃದ್ಧಿಗೆ ಉತ್ತಮ ಯೋಚನೆಗಳು ಬರಲಿದ್ದು, ಪ್ರಯೋಜನಾಕಾರಿಯಾಗಿ ಉಪಯೋಗಿಸಿಕೊಳ್ಳಿ.

ಸಿಂಹ: ತಪ್ಪುಗಳನ್ನು ತಿದ್ದಿಹೇಳುವಲ್ಲಿ ಹಿರಿಯ ಅಧಿಕಾರಿಗಳು ಈ ದಿನ ನಿಮ್ಮ ನೆರವಿಗೆ ನಿಲ್ಲುವರು. ನೀರಿನ ಬಗ್ಗೆ ಜಾಗರೂಕತೆ ಇರಲಿ. ಮಕ್ಕಳ ವಿದ್ಯಾಭ್ಯಾಸ ಸಮಾಧಾನ ತರಲಿದೆ. ಅವಿವಾಹಿತರಿಗೆ ನಿರೀಕ್ಷೆಗೆ ತಕ್ಕ ಪ್ರಸ್ತಾಪಗಳು ಲಭಿಸಲಿದೆ.

ಕನ್ಯಾ: ಪ್ರತಿಷ್ಠಿತ ಅಧಿಕಾರಕ್ಕಾಗಿ ಸಮಬಲ ಹೋರಾಟ ನಡೆಸುವಿರಿ. ಭಾವನೆಗಳನ್ನು ಆತ್ಮೀಯರಲ್ಲಿ ಹಂಚಿಕೊಳ್ಳಿ. ಸಮಯ. ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವ ವ್ಯಕ್ತಿಗಳಿಗೆ ಅಧಿಕ ಕಮಿಶನ್ ದೊರೆಯಲಿದೆ.

ತುಲಾ: ನಿಮ್ಮ ನಿರ್ಧಾರಗಳಿಗೆ ಪಾಲುದಾರರಿಂದ ಉತ್ತೇಜನಕಾರಿ ಪ್ರತಿಕ್ರಿಯೆ ದೊರೆಯುವುದು. ರಾಜಕೀಯದಲ್ಲಿ ಹೆಚ್ಚಿನ ಪ್ರಭಾವ ಹೊಂದಲು ರಾಜಕೀಯ-ಧುರೀಣರ ಕೃಪಾಕಟಾಕ್ಷ ಪಡೆದುಕೊಳ್ಳುವಲ್ಲಿ ಯಶಸ್ಸು ಹೊಂದುವಿರಿ.

ವೃಶ್ಚಿಕ: ಕ್ರೀಡಾಸಕ್ತರಿಗೆ ಅಥವಾ ಕ್ರೀಡಾಪಟುಗಳಿಗೆ ಇಂದು ಶುಭದಾಯಕ ದಿನ. ಸಿನಿಮಾ ರಂಗದಲ್ಲಿ ಕಿರುತೆರೆಯಲ್ಲಿ ಅಭಿನಯಿಸಲು ಅವಕಾಶಗಳು ಲಭಿಸುವುದು. ಕುಲದೇವರ ಪ್ರಾರ್ಥನೆಯು ಶುಭ ತರುವುದು.

ಧನು: ಇಂದು ನೀವು ತೆಗೆದುಕೊಳ್ಳುವ ನಿರ್ಧಾರ ಸರಿಯಾಗಿಯೇ ಇರುತ್ತದೆ. ನಿಮ್ಮ ಸಹವರ್ತಿಗಳಲ್ಲಿ ಸಲಹೆ ಸಹಕಾರ ಕೋರುವುದು ಅನಿವಾರ್ಯ. ಹೆಂಡತಿಗೆ ಹೊಸ ಉದ್ಯೋಗ ದೊರೆತು ಸಂತೋಷವಾಗುವುದು.

ಮಕರ: ಕೆಲಸ ಕಾರ್ಯಗಳಲ್ಲಿ ಕಷ್ಟಗಳು ಎದುರಾಗಬಹುದು, ಹಾಗೆಂದು ಕರ್ತವ್ಯ ನಿರ್ಲಕ್ಷಿಸಬೇಡಿ. ಬಂಗಾರದಂತಹ ಬೆಲೆಬಾಳುವ ವಸ್ತು ಕಳೆದು ಹೋಗುವ ಸಾಧ್ಯತೆಯಿದೆ. ಅನನ್ಯ ಭಕ್ತಿಯಿಂದ ಮಲ್ಲಿಕಾರ್ಜುನನ ಆರಾಧಿಸಿ.

ಕುಂಭ: ಈ ದಿನದ ಆಗುಹೋಗುಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಇವೆಲ್ಲ ಕ್ಷಣಿಕ. ವೈಜ್ಞಾನಿಕ ಸಂಶೋಧನೆಯಲ್ಲಿ ತೊಡಗಿರುವವರಿಗೆ ಈ ದಿನ ಅನಿರೀಕ್ಷಿತ ರೀತಿಯಲ್ಲಿ ಫಲಿತಾಂಶ ದೊರೆಯಲಿದೆ.

ಮೀನ: ಯಶಸ್ಸಿನ ಕೆಲಸಗಳಿಗೆ ಹಿಂದಿನ ನಿಮ್ಮ ಸೋಲು ಬಾಧಿಸುತ್ತಿವುದರ ಜತೆ ಉತ್ಸಾಹದಲ್ಲಿ ಕೊರತೆಗೆ ಎದ್ದು ಕಾಣಲಿದೆ. ಪತ್ರಿಕೋದ್ಯಮದವರಿಗೆ ಕೆಲಸದ ಹೊರೆ ಅತಿಯಾಗಿ ಎದುರಾಗುವುದು.

ಪದಬಂಧ 5153


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2. ಎಲ್ಲ ಕಡೆಗಳಲ್ಲಿಯೂ ವದನವುಳ್ಳವನು (5)
4. ಕಾಲ ದೇಶಗಳ ಪರಿಮಿತಿ ಅಥವಾ ಗಡು (3)
5. ರಸ ಒಸರುವ ಜಿಹ್ವೆ (3)
9. ತನ್ನನ್ನು ಸೂಚಿಸುವ ಸರ್ವನಾಮ (2)
10. ಏಳು ದಿನಗಳ ಅವಧಿಯ ಒಡೆತನ (3)
11. ಖರ್ಚು ಕಳೆದು ಉಳಿದುದು (2)
12. ಬಳ್ಳಿ ಇಲ್ಲಿ ಹಬ್ಬಿದೆ (3)
15. ಉತ್ತರದ ಕಡೆಯವರ ಸ್ನಾನ (3)
16. ಮತ್ತೆ ಉದಯಿಸುವುದು (5)

ಮೇಲಿಂದ ಕೆಳಕ್ಕೆ

1. ಆನಂದ ಈ ರೀತಿ ಬಂದಿದೆ (3)
2. ಅದೃಷ್ಟ ಉಂಟುಮಾಡಿದ ಕಟ್ಟಳೆ! (2)
3. ಖಚರದಲ್ಲಿರುವ ಹೇಸರಗತ್ತೆ ಕಾಣುತ್ತಿದೆಯೆ? (2)
4. ಒಂದನ್ನೊಂದು ಅಗಲದೇ ಇರುವಿಕೆ (5)
6. ಮನುಷ್ಯರನ್ನು ತಿನ್ನುವ ಪ್ರಾಣಿ (5)
7. ಜವಾನನ ಮರುನುಡಿ (3)
8. ನಾಜೂಕಾದ ಚಿತ್ರ ಕೆಲಸ (3)
13. ಪುಢಾರಿ ಬಳಿಯಲ್ಲಿರುವ ಶತ್ರು (2)
14. ಸೂರ್ಯನ ಸಾರಥಿ (3)
15. ಜವಾನನ ಸುತ್ತ ನೆರೆದಿರುವ ಮಂದಿ (2)



5152ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಾಕು 3.ತುರಗ
5.ಕಮಲ 7.ವನಸ್ಪತಿ
9.ಬಸದಿ 10.ಸವಾಲು
11.ಗರಿಮುರಿ 13.ವರಸೆ
15.ಜುಲ್ಮಾನೆ 16.ಗುಳಿ

ಮೇಲಿಂದ ಕೆಳಕ್ಕೆ:
2.ಕುಹಕ 3.ತುಮುಲ
4.ಗಡವ 6.ಮಸೀದಿ
8.ತಿಕ್ಕಲು 9.ಬಡಗ
10.ಸದರ 12.ರಿವಾಜು
13.ವರ್ಣನೆ 14.ಸೆರಗು

ಸುಡೊಕು 5539

				1			6	
				5		7		3
					3		2	
	4	2		9		8	3	
3			8	4	1			2
1	9			2				7
	8						7	
2		4	9		7	1	5	6
	5			3			8	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5538 ಸುಡೊಕು

8	7	2	3	4	6	1	9	5
5	1	4	8	2	9	7	6	3
9	3	6	5	1	7	2	8	4
3	8	9	1	6	5	4	2	7
4	2	1	9	7	3	8	5	6
6	5	7	2	8	4	3	1	9
7	4	8	6	9	2	5	3	1
1	9	5	7	3	8	6	4	2
2	6	3	4	5	1	9	7	8

ಷೇರುಪೇಟೆ ವಹಿವಾಟು ▲211



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,512
ಇಂದಿನ ಅಂತ್ಯ	18,562
▲	50
ದಿನದ ಗರಿಷ್ಠ	18,614

ವಿನಿಮಯ ದರ

$ ಡಾಲರ್	81.68
£ ಪೌಂಡ್	98.57
€ ಯುರೊ	85.46
¥ ಯೆನ್ (100ಕ್ಕೆ)	58.97

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹555

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈಂಡ್)	₹1490(1510)
ಸೋಯಾ (ರಿಫೈಂಡ್)	₹1300(1332)
ಸೂರ್ಯಕಾಂತಿ (ರಿಫೈಂಡ್)	₹1430(1440)
ಪಾಮೋಲಿನ್	₹960(970)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹2000-2600
ಮಧ್ಯಮ	₹2000-2600
ಸಣ್ಣ	₹500-1000

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹116000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹143
ಆರ್‌ಎಸ್‌ಎಸ್-5 ₹135
ಗುಡ್ ಲಾಟ್ ₹128

ಮುಂಬೈ ಧಾರಣೆ

ಶೇಂಗಾ

28-11-2022

ಜಾವಾ 70/80(ಹೊಸ)	111700-11750
ಜಾವಾ 80/90(ಹೊಸ)	10800-10850
ದಪ್ಪ ಮಧ್ಯಪ್ರದೇಶ(ಹೊಸ)	9250-10000
ದಪ್ಪ ಗುಜರಾತ್(ಹೊಸ)	9900-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500(1520
ಒಂದು ವಾರದ ಡೆಲಿವರಿ	1495(1515)
ಸೋಯಾ ಕಚ್ಚಾ	1295(1310)
ಪಾಮ್ ವಾರದ ಡೆಲಿವರಿ	958(973)
ಸೂರ್ಯಕಾಂತಿ ಎಣ್ಣೆ ಕಚ್ಚಾ	---

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52650(52600)
ಬೆಳ್ಳಿ ಕೆ.ಜಿ 62200(62000)

ಆವರಣದಲ್ಲಿ ಶನಿವಾರದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕಚ್ಚಾ ತೈಲ ಬೆಲೆ ಇಳಿಕೆ, ವಿದೇಶಿ ಹೂಡಿಕೆ ಒಳಹರಿವು

ದಾಖಲೆಯ ಮಟ್ಟಕ್ಕೆ ಸೆನ್ಸೆಕ್ಸ್ ಜಿಗಿತ



ಮುಂಬೈ (ಪಿಟಿಐ): ದೇಶದ ಷೇರುಪೇಟೆ ಸಂವೇದಿ ಸೂಚ್ಯಂಗಳು ಸೋಮವಾರದ ವಹಿವಾಟಿನಲ್ಲಿ ಹೊಸ ದಾಖಲೆಯ ಮಟ್ಟ ತಲುಪಿವೆ. ವಿದೇಶಿ ಬಂಡವಾಳದ ಒಳಹರಿವು, ಕಚ್ಚಾ ತೈಲದ ಬೆಲೆ ಕುಸಿತ ಹಾಗೂ ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಖರೀದಿಸಿದ್ದು ಸೂಚ್ಯಂಕಗಳ ಏರಿಕೆಗೆ ಕಾರಣವಾದವು.

ಸತತ ಐದನೆಯ ದಿನವೂ ಗಳಿಕೆ ಕಂಡ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಸೋಮವಾರ 211 ಅಂಶ ಜಿಗಿಯಿತು. ದಾಖಲೆಯ 62,504 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 50 ಅಂಶ ಏರಿಕೆ ಕಂಡು ದಾಖಲೆಯ 18,562 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು.

'ವಿದೇಶಿ ಹೂಡಿಕೆದಾರರ ಜೊತೆಗೆ ದೇಶಿ ಹೂಡಿಕೆದಾರರು ಕೂಡ ಷೇರುಗಳ ಖರೀದಿಗೆ ಹೆಚ್ಚಿನ ಗಮನ ನೀಡಿದ್ದಾರೆ' ಎಂದು ಕೋಟಕ್ ಇನ್‌ವೆಸ್ಟ್‌ಮೆಂಟ್ ಅಡ್ವೈಸರ್ಸ್ ಲಿಮಿಟೆಡ್‌ನ ಲಕ್ಷ್ಮೀ ಅಯ್ಯರ್ ಹೇಳಿದ್ದಾರೆ.

ಸೆನ್ಸೆಕ್ಸ್‌ನ ಮೂವತ್ತು ಕಂಪನಿಗಳ ಪೈಕಿ ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳು ಶೇಕಡ 3.48ರಷ್ಟು ಏರಿಕೆ ದಾಖಲಿಸಿದವು. ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಷೇರುಪೇಟೆಗಳು ನಕಾರಾತ್ಮಕವಾಗಿ ಅಂತ್ಯ ಕಂಡವು.

'ಜಾಗತಿಕ ಮಟ್ಟದಲ್ಲಿ ಪೂರಕ ವಾತಾವರಣ ಇಲ್ಲದಿದ್ದರೂ ದೇಶಿ ಮಾರುಕಟ್ಟೆಗಳು ದಾಖಲೆಯ ಮಟ್ಟವನ್ನು ತಲುಪಿವೆ. ಕಚ್ಚಾ ತೈಲದ ಬೆಲೆ ಇಳಿಕೆಯ ಕಾರಣದಿಂದಾಗಿ ತೈಲ ಹಾಗೂ ಅನಿಲ ವಲಯದ ಷೇರುಗಳ ಬೆಲೆ ಹೆಚ್ಚಾಗಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಕುಸಿದ ಕಚ್ಚಾ ತೈಲ ಬೆಲೆ

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ ಶೇಕಡ 3.11ರಷ್ಟು ಕಡಿಮೆ ಆಗಿದ್ದು, 81.03 ಡಾಲರ್‌ಗೆ ತಲುಪಿದೆ.

ಕೋವಿಡ್ ಹರಡುವುದನ್ನು ತಡೆಯುವ ಉದ್ದೇಶದಿಂದ ಚೀನಾದಲ್ಲಿ ಜಾರಿಗೆ ತಂದಿರುವ ಕಠಿಣ ಲಾಕ್‌ಡೌನ್ ಕ್ರಮಗಳನ್ನು ವಿರೋಧಿಸಿ ಸಾರ್ವಜನಿಕರು ಪ್ರತಿಭಟನೆಗೆ ಮುಂದಾಗಿದ್ದಾರೆ. ಇದು ಆ ದೇಶದ ಆರ್ಥಿಕ ಬೆಳವಣಿಗೆಯನ್ನು ತಗ್ಗಿಸಬಹುದು ಎಂಬ ಅಂದಾಜಿನಿಂದಾಗಿ ತೈಲ ಬೆಲೆ ಇಳಿಕೆಯಾಗಿದೆ ಎಂದು ತಜ್ಞರು ಹೇಳಿದ್ದಾರೆ.

80,000ಕ್ಕೆ ಸೆನ್ಸೆಕ್ಸ್: ಮಾರ್ಗನ್ ಸ್ಟ್ಯಾನ್ಲಿ ಅಂದಾಜು

ಮುಂಬೈ (ಪಿಟಿಐ/ರಾಯಿಟರ್ಸ್): 2023ರ ಡಿಸೆಂಬರ್‌ಗೆ ಮೊದಲು ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 68,500 ಅಂಶಗಳಿಗೆ ತಲುಪಬಹುದು ಎಂದು ಬ್ರೋಕರೇಜ್ ಸಂಸ್ಥೆ ಮಾರ್ಗನ್ ಸ್ಟ್ಯಾನ್ಲಿ ಅಂದಾಜಿಸಿದೆ. ಜಾಗತಿಕ ಬಾಂಡ್ ಸೂಚ್ಯಂಕಗಳಲ್ಲಿ ಭಾರತ ಸೇರ್ಪಡೆ ಆದಲ್ಲಿ, ಕಚ್ಚಾ ತೈಲ ಹಾಗೂ ರಸಗೊಬ್ಬರದ ಬೆಲೆ ತೀವ್ರವಾಗಿ ಇಳಿಕೆ ಕಂಡಲ್ಲಿ ಸೆನ್ಸೆಕ್ಸ್ 80 ಸಾವಿರಕ್ಕೆ ತಲುಪಬಹುದು ಎಂದು ಕೂಡ ಅದು ಹೇಳಿದೆ.

ರಷ್ಯಾ–ಉಕ್ರೇನ್ ಯುದ್ಧದ ಪರಿಣಾಮಗಳು 2023ಕ್ಕೂ ವಿಸ್ತರಣೆ ಆಗದಿದ್ದರೆ, ದೇಶದ ಬೆಳವಣಿಗೆಯು ಚೆನ್ನಾಗಿ ಇದ್ದರೆ ಮತ್ತು ಅಮೆರಿಕದಲ್ಲಿ ದೀರ್ಘ ಅವಧಿಗೆ ಆರ್ಥಿಕ ಹಿಂಜರಿತ ಇಲ್ಲದಿದ್ದರೆ ಸೆನ್ಸೆಕ್ಸ್ ಮುಂದಿನ ವರ್ಷದ ಅಂತ್ಯದೊಳಗೆ 68,500ಕ್ಕೆ ತಲುಪಬಹುದು ಎಂದು ಸಂಸ್ಥೆ ಅಂದಾಜಿಸಿದೆ.

ಸಂಸ್ಥೆಯ ಅರ್ಥಶಾಸ್ತ್ರಜ್ಞ ರಿಧಮ್ ದೇಸಾಯಿ ಅವರು ಸಿದ್ಧಪಡಿಸಿರುವ ವರದಿಯಲ್ಲಿ ಈ ವಿವರಗಳು ಇವೆ. ದೇಶದ ಷೇರುಪೇಟೆಗಳಲ್ಲಿ ಗೂಳಿಯ ಓಟಕ್ಕೆ ಅಡ್ಡಿ ಆಗಿಲ್ಲ ಎಂದು ವರದಿಯು ಸ್ಪಷ್ಟಪಡಿಸಿದೆ.

ಕಳೆದ ಎರಡು ವರ್ಷಗಳಲ್ಲಿ ಷೇರುಪೇಟೆಗಳಲ್ಲಿ ದೊಡ್ಡ ಮಟ್ಟದ ಜಿಗಿತ ಕಂಡುಬಂದಿದ್ದಕ್ಕೆ ಮುಖ್ಯ ಕಾರಣಗಳನ್ನು ವರದಿಯು ಪಟ್ಟಿ ಮಾಡಿದೆ. ಸರ್ಕಾರದ ನೀತಿಗಳು, ದೇಶದಲ್ಲಿ ಈಕ್ವಿಟಿಗಳಲ್ಲಿ ಹಣ ತೊಡಗಿಸುವ ವಿಚಾರದಲ್ಲಿ ಆಗಿರುವ ಬದಲಾವಣೆಗಳು, ಎಫ್‌ಡಿಐ ಹರಿವಿನ ಮೇಲೆ ಆದ್ಯತೆ... ಮುಂತಾದವು ಈ ಏರಿಕೆಗೆ ಕಾರಣ ಎಂದು ವರದಿ ಹೇಳಿದೆ. ನಿಫ್ಟಿ ಯಾವ ಹಂತವನ್ನು ತಲುಪಲಿದೆ ಎಂಬ ಬಗ್ಗೆ ವರದಿಯಲ್ಲಿ ಉಲ್ಲೇಖವಿಲ್ಲ.

ಕೊಬ್ಬರಿ ಧಾರಣೆ

ತರೀಕೆರೆ	₹12000-12000
ಪುತ್ತೂರು (ಇತರೆ)	₹4500-9000
ತುರುವೇಕೆರೆ	₹12300-12300

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹ 389-701
ದ್ವಿತಳಿ (ಬಿ.ವಿ) ₹447-872

ಪಿಎಫ್‌ಐ ನಿಷೇಧ: ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆ ನಿಷೇಧಿಸಿ ಕೇಂದ್ರ ಸರ್ಕಾರ ಹೊರಡಿಸಿರುವ ಆದೇಶವನ್ನು ಪ್ರಶ್ನಿಸಲಾದ ಅರ್ಜಿಯ ವಿಚಾರಣೆಯನ್ನು ಸೋಮವಾರ ಪೂರ್ಣಗೊಳಿಸಿದ ಹೈಕೋರ್ಟ್ ತೀರ್ಪು ಕಾಯ್ದಿರಿಸಿದೆ.

ಈ ಸಂಬಂಧ ಪಿಎಫ್‌ಐ ರಾಜ್ಯ ಘಟಕದ ಅಧ್ಯಕ್ಷ ನಾಸಿರ್ ಅಲಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ಉಭಯತ್ರರ ವಾದ- ಪ್ರತಿವಾದ ಆಲಿಸಿ ವಿಚಾರಣೆ ಪೂರ್ಣಗೊಳಿಸಿತು.

ಅರ್ಜಿದಾರರ ಪರ ಹಿರಿಯ ವಕೀಲ ಜಯಕುಮಾರ್ ಎಸ್. ಪಾಟೀಲ್ ಹಾಗೂ ಕೇಂದ್ರ ಸರ್ಕಾರದ ಪರ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದ ಮಂಡಿಸಿದರು.

'ಹಲವು ಭಯೋತ್ಪಾದಕ ಸಂಘಟನೆಗಳ ಜೊತೆ ನಿಕಟ ಸಂಪರ್ಕವಿದೆ' ಎಂಬ ಆರೋಪದ ಹಿನ್ನೆಲೆಯಲ್ಲಿ ಪಿಎಫ್‌ಐ ಸಂಘಟನೆಯನ್ನು ನಿಷೇಧಿಸಿ ಕೇಂದ್ರ ಸರ್ಕಾರ ಸೆಪ್ಟೆಂಬರ್ 28ರಂದು ಆದೇಶಿಸಿತ್ತು. ದೇಶದಾದ್ಯಂತ ಸಂಘಟನೆಯ ಕಚೇರಿ, ಅದರ ಮುಖಂಡರ ನಿವಾಸಗಳ ಮೇಲೆ ದಾಳಿ ನಡೆಸಿದ ನಂತರ ಸರ್ಕಾರ ಈ ಕ್ರಮಕ್ಕೆ ಮುಂದಾಗಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-54500
ಚನ್ನಗಿರಿ	
ರಾಶಿ	43770-46509
ಚಿತ್ರದುರ್ಗ	
ಆಪಿ	44439-44869
ಬೆಟ್ಟೆ	34119-34599
ಕೆಂಪುಗೋಟು	29000-29400
ರಾಶಿ	43929-44379
ದಾವಣಗೆರೆ	
ರಾಶಿ	34599-44699
ಕಾರ್ಕಳ	
ಹೊಸತು	25000-37500
ಹಳತು	40000-54500
ಕುಮಟಾ	
ಚಿಪ್ಪು	26089-32809
ಕೋಕ	18019-29999
ಫ್ಯಾಕ್ಟರಿ	10169-18699
ಹಳೆಚಾಲಿ	36699-39099
ಹೊಸಚಾಲಿ	28089-32599
ಪುತ್ತೂರು	
ಕೋಕ	11000-26000
ಹೊಸತು	32000-38000
ಸಾಗರ	
ಬಿಳಿಗೋಟು	18690-29929
ಚಾಲಿ	31899-37009
ಕೋಕ	23119-33249
ಕೆಂಪುಗೋಟು	30199-34600
ರಾಶಿ	39599-46410
ಸಿಪ್ಪೆಗೋಟು	11999-18870
ಶಿವಮೊಗ್ಗ	
ಬೆಟ್ಟೆ	45289-49000
ಗೊರಬಲು	16570-35199
ಹೊಸತು	44599-46209
ರಾಶಿ	44099-47209
ಸರಕು	53599-61599
ಸಿದ್ದಾಪುರ	
ಬಿಳಿಗೋಟು	26699-32839
ಚಾಲಿ	34269-38699
ಕೋಕ	26019-30099
ಕೆಂಪುಗೋಟು	26900-29199
ರಾಶಿ	41199-45239
ತಟ್ಟಿಬೆಟ್ಟೆ	33109-33691
ಶಿರಸಿ	
ಬೆಟ್ಟೆ	36399-43999
ಬಿಳಿಗೋಟು	23899-35122
ಚಾಲಿ	35199-40206
ರಾಶಿ	40659-45889
ತರೀಕೆರೆ	
ಇತರ	33333-33333
ಸಿಪ್ಪೆಗೋಟು	15000-15000
ಯಲ್ಲಾಪುರ	
ಆಪಿ	54235-54235
ಬಿಳಿಗೋಟು	27312-32812
ಚಾಲಿ	31449-39501
ಕೋಕ	16109-28812
ಕೆಂಪುಗೋಟು	26099-33613
ರಾಶಿ	45019-48899
ತಟ್ಟಿಬೆಟ್ಟೆ	38375-44969

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮುದ್ರಮನೆ	
ಎಪಿ	13,200
ಎಸಿ	6,720
ಆರ್‌ಪಿ	8,500
ಆರ್‌ಸಿ	4,530

ಶಾರಿಕ್ ಚೇತರಿಕೆ ನಂತರ ತನಿಖೆ ತೀವ್ರ: ಆರಗ

ಶಿವಮೊಗ್ಗ: ಮಂಗಳೂರಿನಲ್ಲಿ ಆಟೊದಲ್ಲಿ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಆರೋಪಿ ಶಾರಿಕ್ ಆರೋಗ್ಯ ಸುಧಾರಿಸಿದ ನಂತರ ಆತನ ಹೇಳಿಕೆ ಪಡೆದು ತನಿಖೆ ತೀವ್ರಗೊಳಿಸಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಆರೋಪಿಯ ಮನೆಯ ಮೇಲೆ ಪೊಲೀಸರು ದಾಳಿ ನಡೆಸಿ ಮಾಹಿತಿ ಸಂಗ್ರಹಿಸಿದ್ದಾರೆ. ಇದರ ಆಧಾರದ ಮೇಲೆ ತನಿಖೆ ನಡೆಸಲಾಗುವುದು' ಎಂದರು.

'ಮಹಾರಾಷ್ಟ್ರದ 47 ಗ್ರಾಮಗಳು ಕರ್ನಾಟಕ ಸೇರಲು ಬೇಡಿಕೆ ಇಟ್ಟಿದ್ದು, ಕಾನೂನಾತ್ಮಕವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. ಎಡಿಜಿಪಿಗೆ ಸೂಚನೆನೀಡಿ ಗಡಿ ಭಾಗದ ಗ್ರಾಮಗಳಿಗೆ ರಕ್ಷಣೆ ನೀಡಲಾಗುವುದು' ಎಂದರು.

ಆರ್ಥಿಕ ಬೆಳವಣಿಗೆ: ಅಂದಾಜು ತಗ್ಗಿಸಿದ ಎಸ್‌ಆ್ಯಂಡ್‌ಪಿ

ನವದೆಹಲಿ (ಪಿಟಿಐ): ಎಸ್‌ಆ್ಯಂಡ್‌ಪಿ ಗ್ಲೋಬಲ್ ರೇಟಿಂಗ್ಸ್ ಸಂಸ್ಥೆಯು ಪ್ರಸಕ್ತ ಹಣಕಾಸು ವರ್ಷಕ್ಕೆ ಭಾರತದ ಆರ್ಥಿಕ ಬೆಳವಣಿಗೆ ಅಂದಾಜನ್ನು ಶೇಕಡ 7ಕ್ಕೆ ತಗ್ಗಿಸಿದೆ. ಆದರೆ, ಆಂತರಿಕ ಬೇಡಿಕೆಯನ್ನು ನೆಚ್ಚಿಕೊಂಡು ನಡೆಯುತ್ತಿರುವ ಭಾರತದ ಅರ್ಥ ವ್ಯವಸ್ಥೆಯ ಮೇಲೆ ಜಾಗತಿಕ ಹಿಂಜರಿತದ ಪ್ರಭಾವ ಹೆಚ್ಚಿರುವುದಿಲ್ಲ ಎಂದು ಹೇಳಿದೆ.

ಭಾರತದ ಅರ್ಥ ವ್ಯವಸ್ಥೆಯು ಈ ವರ್ಷದಲ್ಲಿ ಶೇ 7.3ರಷ್ಟು ಬೆಳವಣಿಗೆ ಹೊಂದಲಿದೆ ಎಂದು ಎಸ್‌ಆ್ಯಂಡ್‌ಪಿ ಸಂಸ್ಥೆಯು ಸೆಪ್ಟೆಂಬರ್‌ನಲ್ಲಿ ಅಂದಾಜಿಸಿತ್ತು. ಮುಂದಿನ ಹಣಕಾಸು ವರ್ಷದಲ್ಲಿ ಶೇ 6.5ರಷ್ಟು ಬೆಳವಣಿಗೆ ಆಗಲಿದೆ ಎಂದು ಹೇಳಿತ್ತು.

ಭಾರತದ ಆರ್ಥಿಕತೆ: ಬೆಳವಣಿಗೆ ಅಂದಾಜು

ವಿಶ್ವ ಬ್ಯಾಂಕ್	6.5%
ಅಂತರರಾಷ್ಟ್ರೀಯ ಹಣಕಾಸು ನಿಧಿ	6.8
ಏಷ್ಯಾ ಅಭಿವೃದ್ಧಿ ಬ್ಯಾಂಕ್	7%
ಭಾರತೀಯ ರಿಸರ್ವ್ ಬ್ಯಾಂಕ್	7%

ಪ್ರಸಕ್ತ ಹಣಕಾಸು ವರ್ಷದಲ್ಲಿ ಹಣದುಬ್ಬರ ಪ್ರಮಾಣವು ಸರಾಸರಿ ಶೇ 6.8ರಷ್ಟು ಇರಲಿದೆ. 2023ರ ಮಾರ್ಚ್‌ಗೆ ಮೊದಲು ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರವನ್ನು ಶೇ 6.25ಕ್ಕೆ ಹೆಚ್ಚಿಸಲಿದೆ ಎಂದು ಸಂಸ್ಥೆ ಅಂದಾಜು ಮಾಡಿದೆ. ಹಣದುಬ್ಬರ ನಿಯಂತ್ರಿಸುವ ಉದ್ದೇಶದಿಂದ ಆರ್‌ಬಿಐ ರೆಪೊ ದರವನ್ನು ಈಗಾಗಲೇ ಶೇ 5.9ಕ್ಕೆ ಹಂತ ಹಂತವಾಗಿ ಹೆಚ್ಚಿಸಿದೆ.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಈಗ ₹ 81.77ರಷ್ಟು ಇದೆ. ಆದರೆ ಇದು ಮಾರ್ಚ್ ಅಂತ್ಯಕ್ಕೂ ಮೊದಲು ₹ 79.50ಕ್ಕೆ ಬಲವರ್ಧನೆ ಕಾಣಲಿದೆ ಎಂದು ಎಸ್‌ಆ್ಯಂಡ್‌ಪಿ ಹೇಳಿದೆ.

ಜಾಗತಿಕ ಆರ್ಥಿಕ ಮಂದಗತಿ, ರಷ್ಯಾ–ಉಕ್ರೇನ್ ಯುದ್ಧ, ಬಡ್ಡಿ ದರ ಹೆಚ್ಚಳ, ಹಣದುಬ್ಬರ ಏರಿಕೆ ಕಾರಣದಿಂದಾಗಿ ದೇಶದ ಆರ್ಥಿಕ ಬೆಳವಣಿಗೆ ದರವು ಕಡಿಮೆ ಆಗಲಿದೆ ಎಂಬ ಅಂದಾಜನ್ನು ಹಲವು ಸಂಸ್ಥೆಗಳು ಮಾಡಿವೆ.

ನೇಮಕಕ್ಕೆ ಅಡ್ಡಿ: 'ಸುಪ್ರೀಂ' ಕಿಡಿ

ಒಂದನೇ ಪುಟದಿಂದ...

ಕೆಲವು ಹೆಸರುಗಳು ಒಂದೂವರೆ ವರ್ಷದಿಂದ ಬಾಕಿ ಇವೆ. ಸರ್ಕಾರವು ನೇಮಕಾತಿ ವ್ಯವಸ್ಥೆಯನ್ನೇ ವ್ಯರ್ಥಗೊಳಿಸಲು ಯತ್ನಿಸುತ್ತಿದೆ. ನೇಮಕಾತಿ ಪ್ರಕ್ರಿಯೆಯಲ್ಲಿ ಆಗುತ್ತಿರುವ ವಿಳಂಬದಿಂದಾಗಿಯೇ, ಕೆಲವು ವಕೀಲರು ನೇಮಕಕ್ಕೆ ಕೊಟ್ಟ ಸಮ್ಮತಿಯನ್ನು ವಾಪಸ್ ತೆಗೆದುಕೊಳ್ಳುತ್ತಿದ್ದಾರೆ. ಸೇವಾ ಹಿರಿತನವನ್ನು ಕೂಡ ಗಮನದಲ್ಲಿ ಇರಿಸಿಕೊಂಡು ಹೆಸರುಗಳನ್ನು ಶಿಫಾರಸು ಮಾಡಲಾಗುತ್ತದೆ. ಆದರೆ, ಕೆಲವು ಹೆಸರುಗಳಿಗೆ ಮಾತ್ರ ಒಪ್ಪಿಗೆ ಕೊಟ್ಟು ಕೆಲವು ಹೆಸರುಗಳನ್ನು ಬಾಕಿ ಉಳಿಸಿಕೊಳ್ಳುವುದರಿಂದ ನ್ಯಾಯಾಂಗದಲ್ಲಿನ ಸೇವಾ ಹಿರಿತನವು ಅಸ್ತವ್ಯಸ್ತವಾಗುತ್ತದೆ ಎಂದೂ ಪೀಠವು ಆಕ್ರೋಶ ವ್ಯಕ್ತಪಡಿಸಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಮತ್ತು ನಾಲ್ವರು ಅತಿ ಹಿರಿಯ ನ್ಯಾಯಮೂರ್ತಿಗಳಿರುವ ಕೊಲಿಜಿಯಂ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ನೇಮಕಕ್ಕೆ ಶಿಫಾರಸು ಮಾಡುತ್ತದೆ. ಈ ಶಿಫಾರಸುಗಳಿಗೆ ಕೇಂದ್ರ ಸರ್ಕಾರವು ಅನುಮೋದನೆ ಕೊಡಬೇಕು. 1993ರಲ್ಲಿ ಈ ವ್ಯವಸ್ಥೆ ಜಾರಿಗೆ ಬಂತು.


ಹಸುವಿನ ಮೇಲೆ ಲೈಂಗಿಕ ದೌರ್ಜನ್ಯ; ಬಂಧನ

ಸುಂಟಿಕೊಪ್ಪ (ಕೊಡಗು ಜಿಲ್ಲೆ): ಇಲ್ಲಿನ ಅಂದಗೋವೆ ಗ್ರಾಮದಲ್ಲಿ ಮೇಯಲು ಕಟ್ಟಿ ಹಾಕಿದ್ದ ಹಸುವಿನ ಮೇಲೆ ಲೈಂಗಿಕ ದೌರ್ಜನ್ಯ ಎಸಗುತ್ತಿದ್ದ ಎಂಬ ಆರೋಪದ ಮೇಲೆ ಅಬೂಬ್ಬಕ್ಕರ್ ಸಿದ್ಧಿಕ್ ಎಂಬಾತನನ್ನು ಗ್ರಾಮಸ್ಥರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಗ್ರಾಮದ ಸಿ.ಎ.ದೇವಯ್ಯ ಹಸು ಮೇಯಲು ಬಿಟ್ಟು ಸುಂಟಿಕೊಪ್ಪ ಸಂತೆಗೆ ಹೋಗಿದ್ದರು. ವಾಪಸ್ ಬಂದಾಗ ಅಬೂಬ್ಬಕ್ಕರ್ ಹಸುವಿನ ಮೇಲೆ ದೌರ್ಜನ್ಯ ಎಸಗುತ್ತಿದ್ದುದು ಕಂಡಿದೆ. ಕೂಡಲೇ ಸ್ಥಳೀಯರ ಸಹಾಯದೊಂದಿಗೆ ಆರೋಪಿಯನ್ನು ಹಿಡಿದಿದ್ದಾರೆ.

ಕಠಿಣ ಲಾಕ್‌ಡೌನ್: ಚೀನಾ ಸಮರ್ಥನೆ

ಬೀಜಿಂಗ್/ಶಾಂಘೈ (ಪಿಟಿಐ/ರಾಯಿಟರ್ಸ್): ದೇಶದಲ್ಲಿ ಕೋವಿಡ್ ಹೊಸ ಪ್ರಕರಣಗಳು ಉಲ್ಬಣಿಸುತ್ತಿರುವ ನಡುವೆ ಕಠಿಣ ಲಾಕ್‌ಡೌನ್ ವಿರೋಧಿಸಿ ನಾಗರಿಕರು ಅಧ್ಯಕ್ಷ ಷಿ ಜಿನ್‌ಪಿಂಗ್ ಆಡಳಿತದ ವಿರುದ್ಧ ನಡೆಸುತ್ತಿರುವ ಪ್ರತಿಭಟನೆಗಳು ತಣ್ಣಗಾಗಿಲ್ಲ. ಆದರೂ ನಾಗರಿಕರ ಒತ್ತಡಕ್ಕೆ ಮಣಿಯದ ಸರ್ಕಾರ, ಕಠಿಣ ಲಾಕ್‌ಡೌನ್ ಹೇರಿಕೆಯನ್ನು ಸಮರ್ಥಿಸಿಕೊಂಡಿದೆ.



ಕಠಿಣ ಲಾಕ್‌ಡೌನ್ ಹೇರಿದ್ದ ಷಿನ್‌ಜಿಯಾಂಗ್ ಪ್ರಾಂತೀಯ ರಾಜಧಾನಿ ಉರುಮ್ಕಿ ನಗರದಲ್ಲಿ ಅಪಾರ್ಟ್‌ಮೆಂಟ್‌ವೊಂದರಲ್ಲಿ ಕಳೆದ ವಾರ ಬೆಂಕಿ ಕಾಣಿಸಿ, 10 ಜನರು ಮೃತಪಟ್ಟಿದ್ದರು. ಹಾನ್ ಚೀನಿ ಪ್ರಜೆಗಳು ಮತ್ತು ಉಯಿಗರ್ ಮುಸ್ಲಿಮರು ಒಟ್ಟಾಗಿ ಚೀನಿ ಸರ್ಕಾರದ ವಿರುದ್ಧ ತೀವ್ರ ಪ್ರತಿಭಟನೆ ನಡೆಸಿದರು. ಉರುಮ್ಕಿ ನಗರದಲ್ಲಿ ವ್ಯಾಪಕವಾಗಿದ್ದ ಪ್ರತಿಭಟನೆ ಬೀಜಿಂಗ್, ಶಾಂಘೈ ಹಾಗೂ ಮತ್ತಷ್ಟು ನಗರಗಳಿಗೂ ವಿಸ್ತರಿಸಿದೆ.

ಕಠಿಣ ಲಾಕ್‌ಡೌನ್ ತೆರವಿಗೆ ಒತ್ತಾಯಿಸಿ, ಮಾಧ್ಯಮ ಸ್ವಾತಂತ್ರ್ಯದ ಮೇಲಿನ ನಿರ್ಬಂಧಗಳ ವಿರುದ್ಧ ಚೀನಿಯರ ಪ್ರತಿಭಟನೆ ಬೆಂಬಲಿಸಿ ವಿಶ್ವದಾದ್ಯಂತ ಒಂದು ಡಜನ್ ನಗರಗಳಲ್ಲಿ ಒಗ್ಗಟ್ಟಿನ ಪ್ರದರ್ಶನ ನಡೆದಿದೆ. ವಿದ್ಯಾರ್ಥಿಗಳು ಮತ್ತು ವಲಸಿಗರ ನೇತೃತ್ವದಲ್ಲಿ ಲಂಡನ್, ಪ್ಯಾರಿಸ್, ಟೋಕಿಯೊ ಮತ್ತು ಸಿಡ್ನಿ ಸೇರಿ ಯುರೋಪ್, ಏಷ್ಯಾ ಮತ್ತು ಉತ್ತರ ಅಮೆರಿಕದ ನಗರಗಳಲ್ಲಿ ಸಣ್ಣದಾಗಿ ಪ್ರತಿಭಟನೆಗಳು ನಡೆದಿವೆ.

ದೇಶದಲ್ಲಿ ಕೋವಿಡ್ ಪ್ರಕರಣಗಳನ್ನು ಶೂನ್ಯಕ್ಕಿಳಿಸಲು ಹೇರಿರುವ ಕಠಿಣ ಲಾಕ್‌ಡೌನ್‌ಗೆ ವ್ಯಕ್ತವಾಗುತ್ತಿರುವ ಪ್ರತಿಭಟನೆ, ಜನಾಕ್ರೋಶದ ಬಗ್ಗೆ ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ 'ನೀವು ಉಲ್ಲೇಖಿಸುತ್ತಿರುವ ರೀತಿಯಲ್ಲಿ ದೇಶದಲ್ಲಿ ಅಂತಹದ್ದೇನು ಸಂಭವಿಸಿಲ್ಲ. ಸೋಂಕು ನಿರ್ಮೂಲನೆಗೆ ವಸ್ತುಸ್ಥಿತಿ ಆಧರಿಸಿ ದೇಶವು ಪರಿಣಾಮಕಾರಿಯಾದ ನೀತಿ ಅನುಸರಿಸುತ್ತಿದೆ. ಷಿ ಜಿನ್‌ಪಿಂಗ್ ಅವರ ನಾಯಕತ್ವ ಮೇಲೆ ಜನತೆ ಬೆಂಬಲವಿಟ್ಟಿರುವ ನಂಬಿಕೆ ಇದೆ. ನಮ್ಮ ಹೋರಾಟ ಏನಿದ್ದರೂ ಕೋವಿಡ್ ವಿರುದ್ಧ' ಎಂದು ಪ್ರತಿಕ್ರಿಯಿಸಿದರು.

ಶಾಂಘೈನಲ್ಲಿ ಪ್ರತಿಭಟನೆ ಸುದ್ದಿ ವರದಿ ಮಾಡುತ್ತಿದ್ದ ಬಿಬಿಸಿಯ ಪತ್ರಕರ್ತ ಎಡ್ ಲಾರೆನ್ಸ್ ಅವರನ್ನು ಬಂಧಿಸಿ, ಬಿಡುಗಡೆ ಮಾಡಿರುವ ಕ್ರಮವನ್ನು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಜಹೊ ಲಿಜಿಯನ್ ಸಮರ್ಥಿಸಿಕೊಂಡಿದ್ದಾರೆ. ತಮ್ಮ ವರದಿಗಾರನ ಮೇಲೆ ಚೀನಿ ಪೊಲೀಸರು ಹಲ್ಲೆ ನಡೆಸಿ, ಬಂಧಿಸಿದ್ದಾರೆಂದು ಬಿಬಿಸಿ ಆರೋಪಿಸಿದೆ.

ಉರುಮ್ಕಿಯಲ್ಲಿ ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಗೊಳಿಸಲಾಗಿದೆ. ಉರುಮ್ಕಿಯಲ್ಲಿ ಉಯಿಗರ್ ಮುಸ್ಲಿಮರ ಪ್ರತಿಭಟನೆಗೆ ಹೊರಗಿನ ಶಕ್ತಿಗಳ ಕುಮ್ಮಕ್ಕಿದೆ ಎಂದೂ ಅವರು ದೂರಿದರು. ಪ್ರತಿಭಟನೆಗೆ ಸಂಬಂಧಿಸಿದ ಎಲ್ಲ ಸುದ್ದಿ, ಚಿತ್ರಗಳನ್ನು ಚೀನಾದ ಸಾಮಾಜಿಕ ಮಾಧ್ಯಮಗಳಿಂದ ಸರ್ಕಾರ ತೆರವುಗೊಳಿಸಿದೆ.

ಸೋಮವಾರ ದೇಶದಾದ್ಯಂತ ಲಕ್ಷಣ ರಹಿತ 36,304 ಪ್ರಕರಣಗಳು ಸೇರಿ 40,052 ಹೊಸ ಪ್ರಕರಣಗಳು ದಾಖಲಾಗಿರುವುದಾಗಿ ರಾಷ್ಟ್ರೀಯ ಆರೋಗ್ಯ ಆಯೋಗ ಹೇಳಿದೆ.

30 ಸಾವಿರಕ್ಕೂ ಹೆಚ್ಚು ಜಾನುವಾರು ರಕ್ಷಣೆ

ಮಾಲೂರು (ಕೋಲಾರ ಜಿಲ್ಲೆ): ರಾಜ್ಯದಲ್ಲಿ ಜಾನುವಾರು ಹತ್ಯೆ ಪ್ರತಿಬಂಧಕ, ಸಂರಕ್ಷಣಾ ಕಾಯ್ದೆ ಜಾರಿಗೆ ಬಂದ ಮೇಲೆ ರಾಜ್ಯದಲ್ಲಿ 30 ಸಾವಿರಕ್ಕೂ ಅಧಿಕ ಜಾನುವಾರುಗಳ ರಕ್ಷಣೆ ಮಾಡಲಾಗಿದೆ ಎಂದು ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ್ ತಿಳಿಸಿದರು.

ಸೋಮವಾರ ತಾಲ್ಲೂಕಿನ ಗಂಗಾಪುರ ಗ್ರಾಮದ ಗೋಶಾಲೆಗೆ ಭೇಟಿ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ಪ್ರತಿ ಜಿಲ್ಲೆಯಲ್ಲೂ ಗೋಶಾಲೆ ಆರಂಭಿಸುತ್ತಿದೆ. ಪ್ರತಿ ಗೋಶಾಲೆಯಲ್ಲೂ ನೂರರಿಂದ ಸಾವಿರದವರೆಗೆ ಜಾನುವಾರು ರಕ್ಷಣೆ ಮಾಡಲಾಗಿದೆ ಎಂದರು.

'ಚರ್ಮಗಂಟು ರೋಗದಿಂದ ರಾಜ್ಯದಲ್ಲಿ ಈವರೆಗೆ 10,413 ರಾಸು ಮೃತಪಟ್ಟಿವೆ. ಉಳಿದ ರಾಸುಗಳು ಚೇತರಿಸಿಕೊಂಡಿವೆ. ರೋಗ ನಿಯಂತ್ರಣಕ್ಕೆ ಲಸಿಕೆ ನೀಡುವುದು ಸೇರಿದಂತೆ ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ' ಎಂದು ಹೇಳಿದರು.

ಅತಿಥಿ ಉಪನ್ಯಾಸಕರ ಬೇಡಿಕೆ ಪರಿಶೀಲನೆ– ಸಚಿವರ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೇವಾ ಭದ್ರತೆಯೊಂದಿಗೆ ವಾರ್ಷಿಕ ಶೇ 5ರಷ್ಟು ಗೌರವಧನ ಹೆಚ್ಚಿಸಬೇಕು, ನಿವೃತ್ತಿಯ ಸಂದರ್ಭದಲ್ಲಿ ₹ 25 ಲಕ್ಷ ಇಡುಗಂಟು, ಕಾಯಂ ಉಪನ್ಯಾಸಕರಿಗೆ ನೀಡುವಂತೆ ಒಒಡಿ ಹಾಗೂ ರಜೆ ಸೌಲಭ್ಯ ನೀಡಬೇಕೆಂಬ ರಾಜ್ಯ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸುವ ಸಾಧ್ಯತೆಗಳ ಕುರಿತು ಪರಿಶೀಲಿಸಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಭರವಸೆ ನೀಡಿದ್ದಾರೆ.

ಅತಿಥಿ ಉಪನ್ಯಾಸಕರ ಹಿತರಕ್ಷಣಾ ಸಮಿತಿಯ ಗೌರವಾಧ್ಯಕ್ಷರಾಗಿರುವ ವಿಧಾನ ಪರಿಷತ್ ಸದಸ್ಯ ಆಯನೂರು ಮಂಜುನಾಥ್ ಅವರ ನೇತೃತ್ವದಲ್ಲಿ ಸಂಘದ ರಾಜ್ಯ ಘಟಕದ ಅಧ್ಯಕ್ಷ ಅರುಣ್ ಶಿವಮೊಗ್ಗ ಮತ್ತಿತರ ಮನವಿ ಸ್ವೀಕರಿಸಿ ಸಚಿವರು ಪ್ರತಿಕ್ರಿಯಿಸಿದರು.

'ರಾಜ್ಯದ ಉನ್ನತ ಶಿಕ್ಷಣ ವಲಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಯಾಗುತ್ತಿದೆ. ಈ ಹಿನ್ನೆಲೆಯಲ್ಲಿ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ 11 ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರಿಗೆ ಸೇವಾ ವಿಲೀನದ ಸೌಲಭ್ಯ ನೀಡುವ ಮೂಲಕ, ರಾಷ್ಟ್ರೀಯ ಶಿಕ್ಷಣ ನೀತಿಯ ಪರಿಣಾಮಕಾರಿ ಅನುಷ್ಠಾನಕ್ಕೆ ಮುಂದಾಗಬೇಕು. ಹಾಗೆಯೇ ಎನ್‌ಇಪಿ ಅನುಸಾರ 40ರಿಂದ 50 ವಿದ್ಯಾರ್ಥಿಗಳಂತೆ ಒಂದೊಂದು ತರಗತಿಗಳನ್ನು ವಿಭಾಗಿಸುವುದರಿಂದ ಅಲ್ಲಿ ನೇಮಕಾತಿಗೆ ಪರಿಗಣಿಸಬೇಕು' ಎಂದು ಮನವಿಯಲ್ಲಿ ಸಮಿತಿ ಉಲ್ಲೇಖಿಸಿದೆ.

'ನೇಮಕಾತಿಗಳಲ್ಲಿ ಮೀಸಲಾತಿ, ವಯೋಮಿತಿ ಸಡಿಲಿಕೆ, ವೇತನಸಹಿತ ಆರು ತಿಂಗಳ ಮಾತೃತ್ವ, ಪಿತೃತ್ವ ರಜೆ, ವಿಮೆ, ಇಎಸ್‌ಐ ಮತ್ತು ಇಪಿಎಫ್ ಸೌಲಭ್ಯಗಳನ್ನು ಒದಗಿಸಬೇಕು. ಹಾಗೆಯೇ, ಮೌಲ್ಯಮಾಪನಕ್ಕೆ ತೆರಳಿದ ದಿನಗಳ ಗೌರವಧನ ಕಡಿತ ಮಾಡಬಾರದು, ಪರಸ್ಪರ ಸ್ಥಳ ಬದಲಾವಣೆ, ಕಾರ್ಯಭಾರದ ಕೊರತೆ ಉಂಟಾದರೆ ಕರ್ತವ್ಯದಿಂದ ಬಿಡುಗಡೆಗೊಳಿಸದೆ ಕಾರ್ಯಭಾರವಿರುವ ಕಾಲೇಜುಗಳಿಗೆ ವರ್ಗಾವಣೆ ಮಾಡುವ ನೀತಿ ಜಾರಿಗೆ ತರಬೇಕು' ಎಂದೂ ಮನವಿಯಲ್ಲಿ ಆಗ್ರಹಿಸಲಾಗಿದೆ.

ಎಲ್ಲ ಶಾಲೆಗಳಿಗೆ ಸೂಚನೆ: ಶಿಕ್ಷಣ ಇಲಾಖೆಯಿಂದ ಸುತ್ತೋಲೆ

'ಪೋಕ್ಸೊ: ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಶಿಕ್ಷಣ ಇಲಾಖೆ ರಾಜ್ಯದಲ್ಲಿನ ಎಲ್ಲ ಶಾಲೆಗಳಿಗೆ ಸೂಚನೆ ನೀಡಿದೆ.

ಶಾಲೆಗಳಲ್ಲಿ ಲೈಂಗಿಕ ಕಿರುಕುಳ ಹಾಗೂ ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟುವ ಉದ್ದೇಶದಿಂದ ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆ ಸಂಬಂಧ ಕಡ್ಡಾಯವಾಗಿ ಪೋಕ್ಸೊ ಕಾಯ್ದೆ, ಮಕ್ಕಳ ರಕ್ಷಣಾ ನೀತಿ ಮತ್ತು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮಾರ್ಗಸೂಚಿಗಳನ್ನು ಪಾಲಿಸುವಂತೆ ಆದೇಶಿಸಲಾಗಿದೆ. ಈ ಬಗ್ಗೆ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಸುತ್ತೋಲೆಯಲ್ಲಿ ಇರುವ ಸೂಚನೆಗಳು:

- ಪ್ರತಿ ಶಾಲೆಯಲ್ಲಿ 'ಮಕ್ಕಳ ಸುರಕ್ಷಾ ಸಮಿತಿ' ರಚಿಸಬೇಕು. ಸಮಿತಿಗೆ ಶಾಲಾ ಮುಖ್ಯಸ್ಥರು ಅಥವಾ ಆಡಳಿತ ಮಂಡಳಿಯವರು ಅಧ್ಯಕ್ಷರಾಗಬೇಕು. ಕನಿಷ್ಠ ಇಬ್ಬರು ಶಿಕ್ಷಕರು (ಒಬ್ಬರು ಮಹಿಳೆ), ಮೂವರು ಪೋಷಕರು, ಎಸ್‌ಡಿಎಂಸಿ ಅಧ್ಯಕ್ಷರು, ಇಬ್ಬರು ಮಕ್ಕಳು ಹಾಗೂ ಒಬ್ಬರು ಆರೋಗ್ಯ ಇಲಾಖೆ ಅಧಿಕಾರಿ ಅಥವಾ ಸಿಬ್ಬಂದಿ ಸಮಿತಿಯಲ್ಲಿರಬೇಕು. ಮಕ್ಕಳ ಹಕ್ಕುಗಳನ್ನು ರಕ್ಷಿಸುವ ಕಾರ್ಯವನ್ನು ಮಕ್ಕಳ ಸುರಕ್ಷತಾ ಸಮಿತಿ ಕೈಗೊಳ್ಳಬೇಕು.
- ಒಳ್ಳೆಯ ಸ್ಪರ್ಶ ಮತ್ತು ಕೆಟ್ಟ ಸ್ಪರ್ಶದ ಬಗ್ಗೆ ಮಕ್ಕಳಿಗೆ ತಿಳಿವಳಿಕೆ ನೀಡಬೇಕು
- ಎಲ್ಲ ಶಾಲೆಗಳಲ್ಲಿ ದೂರುಗಳು ಮತ್ತು ಸಲಹೆಗಳ ಪೆಟ್ಟಿಗೆಯನ್ನು ಇರಿಸಬೇಕು. ವಾರದಲ್ಲಿ ಒಂದು ಬಾರಿ ಈ ಪೆಟ್ಟಿಗೆಯನ್ನು ತೆರೆದು ಸಲಹೆ ಮತ್ತು ದೂರುಗಳನ್ನು ಪರಿಶೀಲಿಸಬೇಕು.
- ಮಕ್ಕಳ ಹಕ್ಕುಗಳ ಕ್ಲಬ್‌ಗಳನ್ನು ರಚಿಸಬೇಕು ಮತ್ತು ಮಕ್ಕಳ ಸಹಾಯವಾಣಿ ಸಂಖ್ಯೆ 1098 ಅನ್ನು ಎಲ್ಲ ಶಾಲೆಗಳಲ್ಲಿ ಗೋಡೆ ಬರಹದಲ್ಲಿ ಬರೆಸಬೇಕು.
- ಹದಿಹರೆಯದ ಮಕ್ಕಳು ಮಾನಸಿಕವಾಗಿ ತೊಂದರೆಗೆ ಒಳಗಾದಲ್ಲಿ ಮಕ್ಕಳ ನಿರ್ದೇಶನಾಲಯವು ಮಕ್ಕಳಿಗಾಗಿ ಉಚಿತ ಆಪ್ತ ಸಮಾಲೋಚನಾ ಸೇವೆ ಒದಗಿಸಲು 14499 ಟೋಲ್ ಫ್ರೀ ಸಂಖ್ಯೆ ಆರಂಭಿಸಿದೆ. ಈ ಬಗ್ಗೆ ಶಾಲೆಗಳಲ್ಲಿ ಪ್ರಚಾರ ಮಾಡಬೇಕು.
- ಶಾಲಾ ಆವರಣದಲ್ಲಿ ಕಾರ್ಯ ನಿರ್ವಹಿಸುವ ಎಲ್ಲರೂ ಕಡ್ಡಾಯವಾಗಿ ಅಧಿಕೃತ ಗುರುತಿನ ಚೀಟಿಗಳನ್ನು ಹೊಂದಿರಬೇಕು.
- ಗುರುತಿನ ಚೀಟಿ ಇಲ್ಲದ ವ್ಯಕ್ತಿಗಳು ಶಾಲಾ ಆವರಣದ ಒಳಗೆ ಪ್ರವೇಶಿಸದಂತೆ ನಿರ್ಬಂಧ ವಿಧಿಸಬೇಕು.
- ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ಸಿಬ್ಬಂದಿ ನಿಗದಿಪಡಿಸಿದ ಅವಧಿಯ ಅರ್ಧ ಗಂಟೆ ಮುನ್ನವೇ ಶಾಲೆಗೆ ತಲುಪಬೇಕು.
- ನಿಗದಿಪಡಿಸಿದ ಅವಧಿಯಲ್ಲಿ ವಿದ್ಯಾರ್ಥಿಗಳು ಶಾಲೆಯಲ್ಲಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಮಕ್ಕಳ ಹಾಜರಾತಿಯನ್ನು ಬೆಳಿಗ್ಗೆ ಮತ್ತು ಮಧ್ಯಾಹ್ನ ಪಡೆಯಬೇಕು.
- ಮಕ್ಕಳನ್ನು ಯಾವುದೇ ಕಾರ್ಯದ ನಿಮಿತ್ತ ಹೊರಗೆ ಕಳುಹಿಸಬಾರದು. ಶಾಲೆ ಮುಗಿದ ನಂತರ ಯಾವುದೇ ಮಗು ಶಾಲೆಯ ಆವರಣ, ಶೌಚಾಲಯ ಅಥವಾ ತರಗತಿಯಲ್ಲಿ ಇಲ್ಲದಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು.
- ಆನ್‌ಲೈನ್ ತರಗತಿಗಳು ಮತ್ತು ಕಂಪ್ಯೂಟರ್ ಆಧಾರಿತ ತರಗತಿಗಳು ನಡೆಯುವ ವೇಳೆಯಲ್ಲಿ ವಿಷಯಾಧಾರಿತ ಬೋಧನೆ ನೀಡುತ್ತಿರುವುದನ್ನು ಖಚಿತಪಡಿಸಿಕೊಳ್ಳಬೇಕು.

ಮೂರು ಮಹತ್ವಾಕಾಂಕ್ಷಿ ಯೋಜನೆಗಳ ವಿರುದ್ಧ ತೀವ್ರ ಪ್ರತಿಭಟನೆ • ಕಾಂಗ್ರೆಸ್‌ಗೆ ಸಿಕ್ಕ ಪ್ರಮುಖ ಅಸ್ತ್ರ

ಆದಿವಾಸಿಗಳ ಸಿಟ್ಟು–ಬಿಜೆಪಿಗೆ ಇಕ್ಕಟ್ಟು

ಗುಜರಾತ್ ಚುನಾವಣೆ



ಮಂಜುನಾಥ ಹೆಬ್ಬಾರ್

ಅಹಮದಾಬಾದ್ (ಗುಜರಾತ್): ನದಿಗಳನ್ನು ಜೋಡಿಸುವ, ಹೆದ್ದಾರಿ ವಿಸ್ತರಿಸುವ ಹಾಗೂ ಉದ್ಯಮಿಗಳಿಗೆ ರತ್ನಗಂಬಳಿ ಹಾಸುವ 'ಡಬಲ್ ಎಂಜಿನ್ ಸರ್ಕಾರ'ದ ಮಹತ್ವಾಕಾಂಕ್ಷಿ ಯೋಜನೆಗಳೇ ಬಿಜೆಪಿಗೆ ಗುಜರಾತ್‌ನಲ್ಲಿ ಸಂಕಟ ತಂದೊಡ್ಡಿದೆ. ಈ ಯೋಜನೆಗಳ ವಿರುದ್ಧ ಸಮರವನ್ನೇ ಸಾರಿರುವ ಆದಿವಾಸಿಗಳನ್ನು ಓಲೈಸಿ ಪಕ್ಷದ ಮತ ಬುಟ್ಟಿಗೆ ಹಾನಿಯಾಗದಂತೆ ನೋಡಿಕೊಳ್ಳುವುದೇ ದೊಡ್ಡ ಸವಾಲಾಗಿದೆ.

ಗುಜರಾತ್‌ನ ವಿಧಾನಸಭೆಯ 182 ಕ್ಷೇತ್ರಗಳ ಪೈಕಿ 13 ಕ್ಷೇತ್ರಗಳು ಪರಿಶಿಷ್ಟ ಜಾತಿ (ಎಸ್‌ಸಿ) ಹಾಗೂ 27 ಪರಿಶಿಷ್ಟ ಪಂಗಡದ (ಎಸ್‌ಟಿ) ಮೀಸಲು ಕ್ಷೇತ್ರಗಳು. ಇತರ 13 ಕ್ಷೇತ್ರಗಳಲ್ಲೂ ಆದಿವಾಸಿಗಳು ನಿರ್ಣಾಯಕರು. ಈ ಕ್ಷೇತ್ರಗಳು ಮೊದಲಿನಿಂದಲೂ ಕಾಂಗ್ರೆಸ್‌ನ ಭದ್ರಕೋಟೆ. 2017ರ ಚುನಾವಣೆಯಲ್ಲಿ ಎಸ್‌ಟಿ ಮೀಸಲು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪ್ರಚಂಡ ಮೇಲುಗೈ ಸಾಧಿಸಿತ್ತು. 'ಕೈ' ಪಾಳಯ 15 ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿದ್ದರೆ, ಭಾರತೀಯ ಟ್ರೈಬಲ್ ಪಾರ್ಟಿ (ಬಿಟಿಪಿ) ಎರಡು ಕ್ಷೇತ್ರಗಳಲ್ಲಿ ಜಯ ಗಳಿಸಿತ್ತು. ಬಿಜೆಪಿಗೆ ಗೆಲುವು ಸಿಕ್ಕಿದ್ದು 9 ಕ್ಷೇತ್ರಗಳಲ್ಲಿ. ಬಳಿಕ ಕಾಂಗ್ರೆಸ್‌ನ ಮೂವರು ಶಾಸಕರನ್ನು ಕಮಲ ಪಾಳಯವು 'ಆಪರೇಷನ್' ಮಾಡಿ ತನ್ನತ್ತ ಸೆಳೆದುಕೊಂಡಿತ್ತು. ವಿಧಾನಸಭಾ ಚುನಾವಣೆ ಘೋಷಣೆಯಾದ ಬೆನ್ನಲ್ಲೇ, ಈ ಭಾಗದ ಹಲವು ಶಾಸಕರನ್ನು ತನ್ನ ತೆಕ್ಕೆಗೆ ಸೆಳೆದುಕೊಳ್ಳುವಲ್ಲಿ ಬಿಜೆಪಿ ಯಶಸ್ವಿಯಾಗಿದೆ.

ದಶಕಗಳಿಂದ ಈ ಕ್ಷೇತ್ರಗಳಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳು ಸಾಂಪ್ರದಾಯಿಕ ಎದುರಾಳಿಗಳು. ಪಂಜಾಬ್‌ನ ಅಭೂತಪೂರ್ವ ಗೆಲುವಿನಿಂದ ಪುಳಕಿತಗೊಂಡಿರುವ ಆಮ್ ಆದ್ಮಿ ಪಕ್ಷವು ಗುಜರಾತ್‌ನಲ್ಲಿ ಅಬ್ಬರದ ಪ್ರಚಾರದಲ್ಲಿ ತೊಡಗಿದೆ. ಮೀಸಲು ಕ್ಷೇತ್ರಗಳಲ್ಲಿ ಒಂದಷ್ಟು ಸ್ಥಾನಗಳನ್ನು ಗೆಲ್ಲುವ ಮೂಲಕ ನೆಲೆಯನ್ನು ವಿಸ್ತರಿಸುವ ಪ್ರಯತ್ನದಲ್ಲಿದೆ.

ಪ್ರಮುಖ ನಾಯಕರ ಪಕ್ಷಾಂತರದಿಂದ ಸೊರಗಿರುವ ಕಾಂಗ್ರೆಸ್‌ಗೆ ಈಗ ಮೂರು ಯೋಜನೆಗಳು ಪ್ರಮುಖ 'ಅಸ್ತ್ರ'ವಾಗಿ ಸಿಕ್ಕಿದೆ. ಚುನಾವಣಾ ಸಮಯದಲ್ಲಿ ಈ ಯೋಜನೆಗಳನ್ನೇ ಪ್ರಮುಖವಾಗಿ ಪ್ರಸ್ತಾಪಿಸಿ ಆದಿವಾಸಿಗಳ ಮತ ಕೈತಪ್ಪದಂತೆ ಶತಾಯಗತಾಯ ಪ್ರಯತ್ನಿಸುತ್ತಿದೆ. ಆದಿವಾಸಿಗಳ ಮುನಿಸು ಕಡಿಮೆ ಮಾಡಲು ಖುದ್ದು ಪ್ರಧಾನಿ ನರೇಂದ್ರ ಮೋದಿ ಅವರೇ ಪ್ರಚಾರ ಕಣದಲ್ಲಿ ಬೆವರು ಹರಿಸುತ್ತಿದ್ದಾರೆ.

ಚುನಾವಣಾ ವೇಳಾಪಟ್ಟಿ ಘೋಷಣೆಯಾದ ಬೆನ್ನಲ್ಲೇ, ನರೇಂದ್ರ ಮೋದಿ ಅವರು ಮೊದಲ ರ‍್ಯಾಲಿ ನಡೆಸಿದ್ದು ಬುಡಕಟ್ಟು ಜನರ ಪ್ರಾಬಲ್ಯದ ವಲಸಾಡ್ ಜಿಲ್ಲೆಯ ಕಪರಾಡಾ ತಾಲ್ಲೂಕಿನಲ್ಲೇ. ಬುಡಕಟ್ಟು ಜನರ ವಿಶ್ವಾಸವನ್ನು ಗಳಿಸುವ ಪ್ರಯತ್ನ ಇದಾಗಿತ್ತು.

ಕಳೆದ ವಾರ ಈ ಭಾಗದಲ್ಲಿ ಎಂಟು ರ‍್ಯಾಲಿಗಳಲ್ಲಿ ಭಾಗವಹಿಸಿ ಮತದಾರರ ಮನ ಗೆಲ್ಲುವ ಪ್ರಯತ್ನ ಮಾಡಿದ್ದಾರೆ. ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿಯನ್ನಾಗಿ ಮಾಡುವ ಮೂಲಕ ಆದಿವಾಸಿಗಳಿಗೆ ಉನ್ನತ ಸ್ಥಾನ ನೀಡಿದ ಪಕ್ಷ ತಮ್ಮದು ಎಂಬ ಭಾವನಾತ್ಮಕ ಬಾಣವನ್ನು ಪ್ರಧಾನಿಯವರು ಬಿಟ್ಟಿದ್ದಾರೆ. ಜತೆಗೆ, ಹಿಂದುತ್ವದ ಕಾರ್ಡ್ ಪ್ರಯೋಗಿಸಿರುವ ಕಮಲ ಪಾಳಯ, ಪ್ರತಿ ಮನೆಗೆ ನಲ್ಲಿ ನೀರು ಹಾಗೂ ಹಲವು ಕಲ್ಯಾಣ ಯೋಜನೆಗಳನ್ನು ಪ್ರಕಟಿಸುವ ಮೂಲಕ 'ಅಭಿವೃದ್ಧಿ ಮಾದರಿ'ಯ ಮೊರೆ ಹೋಗಿದೆ. ಈ ಭಾಗದಲ್ಲಿ ಕನಿಷ್ಠ 20 ಸ್ಥಾನಗಳನ್ನು ಗೆಲ್ಲುವ ಗುರಿಯನ್ನು ಬಿಜೆಪಿ ಹಾಕಿಕೊಂಡಿದೆ.

ಪಾರ್–ತಾಪಿ–ನರ್ಮದಾ ನದಿಗಳ ಜೋಡಣೆ ನರೇಂದ್ರ ಮೋದಿ ಅವರ ನೆಚ್ಚಿನ ಯೋಜನೆ. ಮುಖ್ಯಮಂತ್ರಿಯಾಗಿದ್ದಾಗಲೇ ಈ ಯೋಜನೆಯ ಕನಸು ಬಿತ್ತಿದ್ದರು. ಈ ಯೋಜನೆಗೆ ಅನುಮೋದನೆ ನೀಡಿದ್ದು 2010ರಲ್ಲಿ. ಮಹಾರಾಷ್ಟ್ರ ಹಾಗೂ ದಕ್ಷಿಣ ಗುಜರಾತ್‌ನಲ್ಲಿ ಹರಿಯುವ ಪಶ್ಚಿಮ ಘಟ್ಟಗಳ ನದಿಗಳ ಹೆಚ್ಚುವರಿ ನೀರನ್ನು ಬರಪೀಡಿತ ಸೌರಾಷ್ಟ್ರ ಹಾಗೂ ಕಚ್ ಪ್ರದೇಶಕ್ಕೆ ವರ್ಗಾಯಿಸುವ ಯೋಜನೆ ಇದಾಗಿದೆ. 395 ಕಿ.ಮೀ ಕಾಲುವೆ ಹಾಗೂ ಏಳು ಅಣೆಕಟ್ಟೆಗಳನ್ನು ನಿರ್ಮಾಣ ಮಾಡುವ ಈ ಯೋಜನೆಯ ಮೊತ್ತ ಸುಮಾರು ₹15 ಸಾವಿರ ಕೋಟಿ. ನದಿಗಳ ಜೋಡಣೆಯಿಂದ 61 ಗ್ರಾಮಗಳು ಮುಳುಗಡೆಯಾಗಲಿವೆ ಹಾಗೂ 2,610 ಕುಟುಂಬಗಳು ನೆಲೆ ಕಳೆದುಕೊಳ್ಳಲಿವೆ. ಫಲವತ್ತಾದ ಸಾವಿರಾರು ಹೆಕ್ಟೇರ್ ಜಮೀನನ್ನು ಈ ಯೋಜನೆ ಆಪೋಶನ ತೆಗೆದುಕೊಳ್ಳಲಿದೆ ಎಂಬುದು ಜನರ ಆತಂಕ.

ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಈ ಯೋಜನೆಯನ್ನು ಪ್ರಕಟಿಸಿದ ಬೆನ್ನಲ್ಲೇ ಆದಿವಾಸಿಗಳು, ಬಿಜೆಪಿ ಸರ್ಕಾರದ ವಿರುದ್ಧ ಸಿಡಿದೆದ್ದರು. ಸರಣಿ ಪ್ರತಿಭಟನೆಗಳನ್ನು ನಡೆಸಿದ್ದರು. ಈ ಹೋರಾಟದ ಮುಂಚೂಣಿಯಲ್ಲಿ ನಿಂತಿದ್ದು ಕಾಂಗ್ರೆಸ್‌ನ ಬುಡಕಟ್ಟು ಮೋರ್ಚಾದ ನಾಯಕ ಮತ್ತು ಶಾಸಕ ಅನಂತ್ ಪಟೇಲ್.

ಆದಿವಾಸಿಗಳ ಹೋರಾಟಕ್ಕೆ ಮಣಿದ ಗುಜರಾತ್ ಸರ್ಕಾರವು, ಯೋಜನೆಯನ್ನು ಕೈಬಿಡುವುದಾಗಿ ಈ ವರ್ಷದ ಮೇ ತಿಂಗಳಲ್ಲಿ ಪ್ರಕಟಿಸಿತ್ತು. ಸರ್ಕಾರ ಈ ಸಂಬಂಧ ಲಿಖಿತ ಭರವಸೆ ನೀಡಬೇಕು ಎಂದು ಬುಡಕಟ್ಟು ಜನರು ಪಟ್ಟು ಹಿಡಿದಿದ್ದಾರೆ. ಇದಕ್ಕೆ ಗುಜರಾತ್ ಸರ್ಕಾರ ಒಪ್ಪಿಲ್ಲ. 'ಯೋಜನೆಯನ್ನು ತಾತ್ಕಾಲಿಕವಾಗಿ ಕೈಬಿಡಲಾಗಿದೆ. ವಿಧಾನಸಭಾ ಚುನಾವಣೆಯ ಬಳಿಕ ಸರ್ಕಾರ ನದಿ ಜೋಡಣೆಯನ್ನು ಮಾಡಿಯೇ ತೀರಲಿದೆ' ಎಂದು ಆದಿವಾಸಿಗಳು ಆತಂಕ ವ್ಯಕ್ತಪಡಿಸುತ್ತಾರೆ. 'ನದಿಗಳ ಜೋಡಣೆಗಾಗಿ ನಮ್ಮ ಭೂಮಿಯನ್ನು ಕಸಿದುಕೊಳ್ಳಲಾಗುತ್ತದೆ. ಭೂಮಿ ಹೋದರೆ ಜೀವ ಹೋದಂತೆ. ಆಡಳಿತ ನಡೆಸುವವರ ಮಾತನ್ನು ನಂಬಲು ನಾವು ತಯಾರಿಲ್ಲ' ಎನ್ನುತ್ತಾರೆ ಆದಿವಾಸಿ ಯುವಕ ಚಂದ್ರ ಗಮಿತ್.

ರಾಜ್ಯ ಹೆದ್ದಾರಿ ಯೋಜನೆಗಳ ವಿರುದ್ಧವೂ ಬುಡಕಟ್ಟು ಜನರು ಧ್ವನಿ ಎತ್ತಿದ್ದಾರೆ. ವಲಸಾಡ್ ಹಾಗೂ ನವಸಾರಿ ಜಿಲ್ಲೆಗಳ ಬುಡಕಟ್ಟು ಪ್ರದೇಶದಲ್ಲಿ ಸಾಗಲಿರುವ ಈ ಯೋಜನೆಗೆ ಸಾವಿರಾರು ಹೆಕ್ಟೇರ್ ಕೃಷಿ ಭೂಮಿ ಸ್ವಾಧೀನ ಮಾಡಲು ಸರ್ಕಾರ ಉದ್ದೇಶಿಸಿತ್ತು. ಈ ಯೋಜನೆಯ ವಿರುದ್ಧ ಆದಿವಾಸಿ ಜನರು ದೊಡ್ಡ ಹೋರಾಟ ಮಾಡಿದ್ದರು. ಇದಕ್ಕೆ ಬೆಂಬಲ ನೀಡಿದ್ದು ಕಾಂಗ್ರೆಸ್. ಈ ಯೋಜನೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಗುಜರಾತ್ ಸರ್ಕಾರ ಹೇಳಿದೆ. 'ಇದು ಚುನಾವಣಾ ನಾಟಕ ಅಷ್ಟೇ' ಎಂದು ಈ ಭಾಗದ ಜನರು ದೂರುತ್ತಾರೆ.

ದೋಸ್ವಾಡ ಗ್ರಾಮದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ವೇದಾಂತದ 'ಜಿಂಕ್ ಸ್ಮೆಲ್ಟರ್ ಘಟಕ'ದ ವಿರುದ್ಧವೂ ಜನರು ಸಿಡಿದೆದ್ದಿದ್ದಾರೆ. ಪರಿಸರಕ್ಕೆ ಹಾನಿಕಾರಕವಾಗಿರುವ ಈ ಯೋಜನೆಯನ್ನು ಜಾರಿಗೊಳಿಸಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದಿದ್ದಾರೆ. 'ಈ ಯೋಜನೆಯಿಂದ ನದಿ ಕಲುಷಿತಗೊಳ್ಳಲಿದೆ. 2 ಲಕ್ಷ ಬುಡಕಟ್ಟು ಜನರ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ. ಚುನಾವಣಾ ವೇಳೆ ಈ ಯೋಜನೆ ತೆರೆಮರೆಗೆ ಸರಿದಿದೆ. ಜೀವ ಹೋದರೂ ಚಿಂತೆ ಇಲ್ಲ. ಯೋಜನೆ ಜಾರಿಗೆ ಬಿಡುವುದಿಲ್ಲ' ಎಂದು ಬುಡಕಟ್ಟು ಮುಖಂಡ ಅಮರ್ ಸಿಂಗ್ ಚೌಧರಿ ಹೇಳುತ್ತಾರೆ.

ಪ್ರಜಾ ಮತ

ಜನತಂತ್ರದ ಹಬ್ಬ 2022



ಮಾಜಿ ಸಚಿವ ಜಯನಾರಾಯಣ ವ್ಯಾಸ್ ಕಾಂಗ್ರೆಸ್ ಸೇರ್ಪಡೆಯಾದರು. ಮಲ್ಲಿಕಾರ್ಜುನ ಖರ್ಗೆ, ಅಶೋಕ್ ಗೆಹಲೋತ್ ಇದ್ದರು —ಪಿಟಿಐ ಚಿತ್ರ

ಗುಜರಾತ್: ಕಾಂಗ್ರೆಸ್ ಸೇರಿದ ವ್ಯಾಸ್

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಮಾಜಿ ಸಚಿವ ಜಯನಾರಾಯಣ ವ್ಯಾಸ್ ಅವರು ಸೋಮವಾರ ಕಾಂಗ್ರೆಸ್ ಸೇರ್ಪಡೆಯಾದರು. ಇತ್ತೀಚೆಗೆ ಬಿಜೆಪಿಗೆ ರಾಜೀನಾಮೆ ನೀಡಿದ್ದ ಅವರು, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆಯಾದರು. ವ್ಯಾಸ್ ಅವರ ಮಗ ಸಮೀರ್ ವ್ಯಾಸ್ ಸಹ ಕಾಂಗ್ರೆಸ್ ಸೇರಿದರು.

ಬಿಜೆಪಿ ಜೊತೆಗಿನ ಮೂರು ದಶಕಗಳ ಸಂಬಂಧವನ್ನು ಕಡಿದುಕೊಂಡಿರುವ ಕುರಿತು ಪ್ರತಿಕ್ರಿಯಿಸಿದ ಅವರು, 'ಅಲ್ಲಿ ದೊಡ್ಡ ಆಲದ ಮರವೊಂದು ಬೆಳೆಯುತ್ತಲೇ ಇದೆ. ಆಲದ ಮರದ ಕೆಳಗೆ ಯಾವುದೂ ಬೆಳೆಯುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ' ಎಂದು ಉತ್ತರಿಸಿದ್ದಾರೆ.

ಮೋದಿ ಅವರು ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ವ್ಯಾಸ್ ಅವರು ಸುದ್ದಿವಾಹಿನಿಗಳ ಚರ್ಚೆಯಲ್ಲಿ ಪಕ್ಷವನ್ನು ಪ್ರತಿನಿಧಿಸುತ್ತಿದ್ದರು. 2007ರಿಂದ 2012ರವರೆಗೆ ಸರ್ಕಾರದಲ್ಲಿ ಸಚಿವರಾಗಿ ಕೆಲಸ ಮಾಡಿದ್ದಾರೆ. 2012 ಮತ್ತು 2017ರ ಚುನಾವಣೆಗಳಲ್ಲಿ ಅವರು ಸೋತಿದ್ದರು.

ರಾಹುಲ್ ಗಾಂಧಿ ಅವರನ್ನು ಹಾಗೂ ಕಾಂಗ್ರೆಸ್‌ನ ಆಂತರಿಕ ಪ್ರಜಾಪ್ರಭುತ್ವವನ್ನು ವ್ಯಾಸ್ ಪ್ರಶಂಸಿಸಿದ್ದಾರೆ. 'ಗುಜರಾತ್‌ನಲ್ಲಿ ಪದೇ ಪದೇ ಮುಖ್ಯಮಂತ್ರಿಗಳನ್ನು ಬದಲಿಸಲಾಯಿತು. 2021ರಲ್ಲಿ ಇಡೀ ಸಚಿವ ಸಂಪುಟವೇ ಹೊಸದಾಗಿತ್ತು. ತಮ್ಮನ್ನು ಸಂಪುಟದಿಂದ ತೆಗೆದರೂ ಸಚಿವರು ಪ್ರಶ್ನಿಸುವುದಿಲ್ಲ. ಈ ಎಲ್ಲ ಬದಲಾವಣೆಗಳು ರಾಜ್ಯದ ಹಿತಕ್ಕಾಗಿ ಮಾಡಿದವಲ್ಲ' ಎಂದು ವ್ಯಾಸ್ ಆರೋಪಿಸಿದ್ದಾರೆ.

ಶೇ 20 ಅಭ್ಯರ್ಥಿಗಳ ಮೇಲೆ ಕ್ರಿಮಿನಲ್ ಪ್ರಕರಣ

ಅಹಮದಾಬಾದ್ (ಪಿಟಿಐ): ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ 1,621 ಅಭ್ಯರ್ಥಿಗಳ ಪೈಕಿ 330 ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ ಮಾಡಿದೆ. 2017ರ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ 238 ಅಭ್ಯರ್ಥಿಗಳ ಮೇಲೆ ಇಂತಹ ಆರೋಪಗಳು ದಾಖಲಾಗಿದ್ದವು.

ಕ್ರಿಮಿನಲ್ ಪ್ರಕರಣ ದಾಖಲಾಗಿರುವ ಅಭ್ಯರ್ಥಿಗಳು ಹೆಚ್ಚಾಗಿ ಆಮ್ ಆದ್ಮಿ ಪಕ್ಷದಲ್ಲಿ ಇದ್ದಾರೆ. ಪಕ್ಷದ 61 ಅಭ್ಯರ್ಥಿಗಳು ವಿವಿಧ ಸ್ವರೂಪದ ಕ್ರಿಮಿನಲ್ ಆರೋಪಗಳನ್ನು ಎದುರಿಸುತ್ತಿದ್ದಾರೆ. ಕಾಂಗ್ರೆಸ್‌ನ 30 ಹಾಗೂ ಆಡಳಿತಾರೂಢ ಬಿಜೆಪಿಯ 32 ಅಭ್ಯರ್ಥಿಗಳು ನಂತರದ ಸ್ಥಾನಗಳಲ್ಲಿದ್ದಾರೆ. 192 ಅಭ್ಯರ್ಥಿಗಳ ಮೇಲೆ ಅತ್ಯಾಚಾರ, ಕೊಲೆ ಯತ್ನ ಪ್ರಕರಣಗಳು ದಾಖಲಾಗಿವೆ.

ಹಲ್ಲೆ, ಕೊಲೆ, ಅಪಹರಣ, ಅತ್ಯಾಚಾರ, ಮಹಿಳೆಯರ ಮೇಲೆ ದೌರ್ಜನ್ಯ, ಭ್ರಷ್ಟಾಚಾರದಂತಹ ಜಾಮೀನು ರಹಿತ ಪ್ರಕರಣಗಳಲ್ಲಿ ಇವರು ಆರೋಪಿಗಳಾಗಿದ್ದು, ಆರೋಪ ಸಾಬೀತಾದರೆ ಗರಿಷ್ಠ ಐದು ವರ್ಷಗಳವರೆಗೆ ಶಿಕ್ಷೆ ವಿಧಿಸಬಹುದಾಗಿದೆ ಎಂದು ಎಡಿಆರ್ ಹೇಳಿದೆ. 18 ಅಭ್ಯರ್ಥಿಗಳು ಮಹಿಳೆಯರ ಮೇಲೆ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿದ್ದಾರೆ. 20 ಜನರು ಕೊಲೆ ಯತ್ನ ಆರೋಪ ಹೊಂದಿದ್ದಾರೆ.


ಶೇ 28ರಷ್ಟು ಕೋಟ್ಯಧೀಶರು

1,621 ಕಣದಲ್ಲಿರುವ ಒಟ್ಟು ಅಭ್ಯರ್ಥಿಗಳು

456 ₹1 ಕೋಟಿಗೂ ಅಧಿಕ ಆಸ್ತಿ ಹೊಂದಿರುವ ಅಭ್ಯರ್ಥಿಗಳ ಸಂಖ್ಯೆ


₹2.56 ಕೋಟಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಸರಾಸರಿ ಆಸ್ತಿ ಮೌಲ್ಯ

ಅತಿಶ್ರೀಮಂತ ಅಭ್ಯರ್ಥಿಗಳು



1. ಬಿಜೆಪಿಯ ಜಯಂತಿ ಪಟೇಲ್ ಮನ್ಸಾ ಕ್ಷೇತ್ರ
2. ಬಿಜೆಪಿಯ ಬಲವಂತ್ ರಜಪೂತ್ ಸಿಧ್‌ಪುರ ಕ್ಷೇತ್ರ
3. ಎಎಪಿಯ ಅಜಿತ್‌ಸಿಂಹ ಠಾಕೂರ್ ದಭೋಯ್ ಕ್ಷೇತ್ರ

ಪಕ್ಷವಾರು ಕೋಟ್ಯಧೀಶರು



211 ಕೋಟ್ಯಧೀಶರು ಮೊದಲ ಹಂತ

245 ಕೋಟ್ಯಧೀಶರು ಎರಡನೇ ಹಂತ

ಉಗ್ರವಾದಕ್ಕೆ ಕಾಂಗ್ರೆಸ್ ಇಬ್ಬರು ಪ್ರಧಾನಿಗಳನ್ನು ಕಳೆದುಕೊಂಡಿದೆ: ಖರ್ಗೆ

ಅಹಮದಾಬಾದ್ (ಪಿಟಿಐ): ಭಯೋತ್ಪಾದನೆ ವಿಚಾರದಲ್ಲಿ ಕಾಂಗ್ರೆಸ್ ಪಕ್ಷ ಮತಬ್ಯಾಂಕ್ ರಾಜಕಾರಣದಲ್ಲಿ ತೊಡಗಿದೆ ಎಂಬ ಪ್ರಧಾನಿ ನರೇಂದ್ರ ಮೋದಿ ಆರೋಪಕ್ಕೆ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸೋಮವಾರ ತಿರುಗೇಟು ನೀಡಿದ್ದಾರೆ. ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಕಾಂಗ್ರೆಸ್ ಪಕ್ಷವು ಇಬ್ಬರು ಪ್ರಧಾನಿಗಳನ್ನು ಕಳೆದುಕೊಂಡಿದೆ ಎಂದು ಹೇಳಿದ್ದಾರೆ.

'ಭಯೋತ್ಪಾದಕರ ವಿರುದ್ಧ ನಾವು ಹೋರಾಟ ಮಾಡಿದ್ದೇವೆ. ದೇಶದಲ್ಲಿ ಶಾಂತಿ ನೆಲೆಸಲು ನಮ್ಮ ನಾಯಕರೇ ಜೀವ ತ್ಯಾಗ ಮಾಡಿದ್ದಾರೆ. ಇಂದಿರಾಗಾಂಧಿ ಅವರು ದೇಶವನ್ನು ಒಗ್ಗೂಡಿಸಲು ತಮ್ಮ ಜೀವವನ್ನು ಬಲಿಕೊಟ್ಟಿದ್ದಾರೆ. ರಾಜೀವ್‌ಗಾಂಧಿ ಅವರು ದೇಶಕ್ಕಾಗಿ ಹುತಾತ್ಮರಾಗಿದ್ದಾರೆ. ಬಿಜೆಪಿಯ ಯಾವುದಾದರೂ ನಾಯಕರು ಕನಿಷ್ಠ ಪಕ್ಷ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಭಾಗಿಯಾಗಿದ್ದರೇ' ಎಂದೂ ಖರ್ಗೆ ಪ್ರಶ್ನಿಸಿದ್ದಾರೆ.

'ಇಲ್ಲಿ ನಡೆಯುತ್ತಿರುವುದು ವಿಧಾನಸಭಾ ಚುನಾವಣೆಯೇ ಹೊರತು ಲೋಕಸಭೆ ಚುನಾವಣೆಯಲ್ಲ. ರಾಜ್ಯದ ಮೇಲೆ ಪರಿಣಾಮ ಬೀರುವ ವಿಷಯಗಳು ಇಲ್ಲಿ ಮುಖ್ಯ. ಪ್ರಧಾನಿಯವರು ರಾಜ್ಯ ಸರ್ಕಾರದ ಯಶಸ್ಸು ಹಾಗೂ ವೈಫಲ್ಯಗಳ ಬಗ್ಗೆ ಮಾತನಾಡುವುದು ಒಳಿತು' ಎಂದು ಖರ್ಗೆ ಸಲಹೆ ನೀಡಿದ್ದಾರೆ.

'ಗುಜರಾತ್‌ನಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೊಳಿಸುವ ಭರವಸೆ ನೀಡಿರುವ ಬಿಜೆಪಿ, ಸಮಾಜವನ್ನು ವಿಭಜಿಸಿ ಮತದಾರರಲ್ಲಿ ಗೊಂದಲ ಹುಟ್ಟುಹಾಕಲು ಮುಂದಾಗಿದೆ. ಕಾಂಗ್ರೆಸ್ ಹಾಗೂ ಇತರ ವಿರೋಧ ಪಕ್ಷಗಳ ನಾಯಕರನ್ನು ಈ ಬಗ್ಗೆ ಮಾತನಾಡುವಂತೆ ಪ್ರಚೋದಿಸಲು ಯತ್ನಿಸುತ್ತಿದೆ. ಅದರೆ ನಾವು ಇಂತಹ ತಂತ್ರಕ್ಕೆ ಬಲಿಯಾಗುವುದಿಲ್ಲ' ಎಂದು ಖರ್ಗೆ ಅವರು ಹೇಳಿದ್ದಾರೆ.

ಖಾಸಗಿ ಸ್ಟಾರ್ಟ್‌ಅಪ್‌ನ ಪ್ರಥಮ ಉಡಾವಣಾ ವಾಹಕ ಅನಾವರಣ

ನವದೆಹಲಿ (ಪಿಟಿಐ): ಖಾಸಗಿ ಸಂಸ್ಥೆ ವಿನ್ಯಾಸಗೊಳಿಸಿ, ನಿರ್ವಹಣೆ ಮಾಡಲಿರುವ ಭಾರತದ ಪ್ರಥಮ ಉಡಾವಣಾ ವಾಹಕ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿ ಕಾರ್ಯಾರಂಭ ಮಾಡಿದೆ. ಬಾಹ್ಯಾಕಾಶ ಕ್ಷೇತ್ರದ ಸ್ಟಾರ್ಟ್‌ಅಪ್ ಸಂಸ್ಥೆ ಅಗ್ನಿಕುಲ್ ಕಾಸ್ಮೋಸ್ ಇದನ್ನು ವಿನ್ಯಾಸಗೊಳಿಸಿದೆ.

'ವರ್ಷಾಂತ್ಯದ ವೇಳೆಗೆ ಉಡಾವಣಾ ವಾಹಕದ ಮೂಲಕವೇ ಅಗ್ನಿಬಾನ್ ರಾಕೆಟ್ ಉಡಾವಣೆ ಮಾಡಲು ಸ್ಟಾರ್ಟ್‌ಅಪ್ ಉದ್ದೇಶಿಸಿದೆ. ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಅವರು ಅಗ್ನಿಕುಲ್ ಉಡಾವಣಾ ವಾಹಕವನ್ನು ನ.25ರಂದು ಉದ್ಘಾಟಿಸಿದ್ದರು.

ಅಗ್ನಿಕುಲ್ ಕಾಸ್ಮಸ್ ವಿನ್ಯಾಸಗೊಳಿಸಿರುವ ಉಡಾವಣಾ ವಾಹಕವನ್ನು, ಇಸ್ರೊ ಮತ್ತು ಇನ್‌–ಸ್ಪೇಸ್ ನೆರವಿನಲ್ಲಿ ಕಾರ್ಯಚಾಲನೆ ಮಾಡಲಾಗುತ್ತದೆ. ಉಡಾವಣಾ ವಾಹಕವು ಅಗ್ನಿಕುಲ್ ವಾಹಕ (ಎಎಲ್‌ಪಿ) ಮತ್ತು ಅಗ್ನಿಕುಲ್ ನಿರ್ವಹಣಾ ಕೇಂದ್ರ (ಎಎಂಸಿಸಿ) ಅನ್ನು ಒಳಗೊಂಡಿದೆ.

'ಭಾರತ ಬಾಹ್ಯಾಕಾಶಕ್ಕೆ ತೆರಳಲು ಇನ್ನೊಂದು ವೇದಿಕೆ ಸಜ್ಜಾಗಿದೆ' ಎಂದು ಸೋಮನಾಥ್ ಪ್ರತಿಕ್ರಿಯಿಸಿದರು.

ಅಗ್ನಿಕುಲ್ ಸಹ ಸ್ಥಾಪಕ ಶ್ರೀನಾಥ್ ರವಿಚಂದ್ರನ್ ಅವರು, 'ಅಗ್ನಿಕುಲ್ ವಾಹಕಕ್ಕೆ ಹಕ್ಕುಸ್ವಾಮ್ಯವುಳ್ಳ ಎಂಜಿನ್ ಅಳವಡಿಸಲಾಗಿದೆ' ಎಂದರು.

ಕ್ಯಾಮರೂನ್‌ನಲ್ಲಿ ಭೂಕುಸಿತ: 14 ಸಾವು

ಯೌಂಡೆ (ಕ್ಯಾಮರೂನ್) (ಎಪಿ): ಕ್ಯಾಮರೂನ್ ರಾಜಧಾನಿಯಲ್ಲಿ ಭಾನುವಾರ ನಡೆಯುತ್ತಿದ್ದ ಅಂತ್ಯಕ್ರಿಯೆ ವೇಳೆ ಸಂಭವಿಸಿದ ಭೂಕುಸಿತದಲ್ಲಿ 14 ಮಂದಿ ಮೃತಪಟ್ಟಿದ್ದಾರೆ ಎಂದು ಪ್ರಾದೇಶಿಕ ಗವರ್ನರ್ ತಿಳಿಸಿದ್ದಾರೆ.

ಕಾಣೆಯಾದವರಿಗಾಗಿ ಶೋಧ ಕಾರ್ಯ ಮುಂದುವರೆದಿದೆ. ಘಟನಾ ಸ್ಥಳದಲ್ಲಿ ಈಗಾಗಲೇ 14 ಮೃತ ದೇಹಗಳನ್ನು ಹೊರ ತೆಗೆಯಲಾಗಿದೆ. ಗಾಯಗೊಂಡಿರುವ 12 ಮಂದಿಯನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಕೇಂದ್ರೀಯ ಪ್ರಾದೇಶಿಕ ಗವರ್ನರ್ ನಸೇರಿ ಪೌಲ ಬೇ ಅವರು ತಿಳಿಸಿದ್ದಾರೆ.

ವಿರಳ ಕಾಯಿಲೆ: ಚಿಕಿತ್ಸೆಯಲ್ಲಿ ವಿಳಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಾದ್ಯಂತ ವಿರಳ ಕಾಯಿಲೆಗಳಿಂದ ಬಳಲುತ್ತಿರುವ 398 ರೋಗಿಗಳಿಗೆ ಚಿಕಿತ್ಸೆ ಆರಂಭಿಸುವಲ್ಲಿ ವಿಳಂಬವಾಗುತ್ತಿದೆ ಎಂದು ರೇರ್ ಡಿಸೀಸಸ್ ಇಂಡಿಯಾ ಫೌಂಡೇಷನ್ ಹೇಳಿದೆ. ಇದರಲ್ಲಿ ಕರ್ನಾಟಕದ 41 ರೋಗಿಗಳೂ ಇದ್ದಾರೆ.

ಪೊಂಪೆ, ಗೌಚರ್, ಎಂಪಿಎಸ್–1 ಮೊದಲಾದ ಲೈಸೋಸೋಮಲ್ ಸ್ಟೋರೇಜ್ ಡಿಸಾರ್ಡರ್ಸ್‌ನಂತಹ (ಎಲ್‌ಎಸ್‌ಡಿ) ಮಾರಣಾಂತಿಕ ವಿರಳ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ತಕ್ಷಣ ಚಿಕಿತ್ಸೆ ಅಗತ್ಯವಿದೆ ಎಂದು ಸಂಸ್ಥೆ ಪ್ರತಿಪಾದಿಸಿದೆ. ಕೇಂದ್ರ ಆರೋಗ್ಯ ಸಚಿವಾಲಯ ಹಾಗೂ ಶ್ರೇಷ್ಠ ದರ್ಜೆಯ ಆಸ್ಪತ್ರೆಗಳಿಂದ (ಸಿಒಇ) ಚಿಕಿತ್ಸೆ ಆರಂಭಿಸುವಲ್ಲಿ ವಿಳಂಬವಾಗಿದ್ದು, ಇದು ರೋಗಿಗಳ ಜೀವವನ್ನು ಅಪಾಯಕ್ಕೆ ತಳ್ಳುತ್ತದೆ ಎಂದು ತಿಳಿಸಿದೆ.

ಚಿಕಿತ್ಸೆ ಪಡೆಯಲು ರೋಗಿಗಳು ಪೂರೈಸಬೇಕಿರುವ ಪ್ರಕ್ರಿಯೆಗಳು ಕೂಡ ವಿಳಂಬಕ್ಕೆ ಕಾರಣವಾಗುತ್ತಿವೆ. ವಿಳಂಬಕ್ಕೆ ಕಾರಣ ಕೇಳಿ ಅಕ್ಟೋಬರ್‌ನಲ್ಲಿ ಸ್ಪಷ್ಟನೆ ಕೇಳಲಾಗಿತ್ತು. 19 ರೋಗಿಗಳ ದಾಖಲೆಗಳನ್ನು ಒದಗಿಸಿದ್ದ ಆಸ್ಪತ್ರೆಗಳು, ಇವರ ಚಿಕಿತ್ಸೆಗೆ ಹಣ ಬಿಡುಗಡೆಗೆ ಕೋರಿದ್ದವು. ಆದರೆ ಈವರೆಗೆ ಒಬ್ಬ ರೋಗಿಗೂ ಚಿಕಿತ್ಸೆ ಆರಂಭಿಸಿಲ್ಲ ಎಂದು ಸಂಸ್ಥೆ ವಿವರಿಸಿದೆ.

ಸಂಕ್ಷಿಪ್ತ ಸುದ್ದಿ

ಐವರು ಉಗ್ರರಿಗೆ ಜೀವಾವಧಿ ಶಿಕ್ಷೆ

ನವದೆಹಲಿ (ಪಿಟಿಐ): ದೇಶಾದ್ಯಂತ ಭಯೋತ್ಪಾದನಾ ಚಟುವಟಿಕೆಗಳಿಗೆ ಯುವಕರಿಗೆ ತರಬೇತಿ ನೀಡುತ್ತಿದ್ದ ಆರೋಪದ ಮೇಲೆ ಜೈಶ್–ಎ–ಮೊಹಮ್ಮದ್‌ನ (ಜೆಇಎಂ) ಐವರು ಭಯೋತ್ಪಾದಕರಿಗೆ ದೆಹಲಿ ನ್ಯಾಯಾಲಯ ಸೋಮವಾರ ಜೀವಾವಧಿ ಶಿಕ್ಷೆ ವಿಧಿಸಿದೆ.

ವಿಶೇಷ ನ್ಯಾಯಾಧೀಶ ಶೈಲೇಂದರ್ ಮಲಿಕ್ ಅವರು ತೀರ್ಪು ನೀಡಿದ್ದು, ಜೆಇಎಂನ ಸಜ್ಜದ್ ಅಹ್ಮದ್ ಖಾನ್, ಬಿಲಾಲ್ ಅಹ್ಮದ್ ಮಿರ್, ಮುಜಾಫರ್ ಅಹ್ಮದ್ ಭಟ್, ಇಶ್ಫಾಕ್ ಅಹ್ಮದ್ ಭಟ್ ಮತ್ತು ಮೆಹರಾಜ್–ಉದ್–ದಿನ್ ಚೋಪಾನ್ ಶಿಕ್ಷೆಗೆ ಗುರಿಯಾದವರಾಗಿದ್ದಾರೆ. ಈ ಪ್ರಕರಣದ ಇನ್ನೊಬ್ಬ ಅಪರಾಧಿ ತನ್ವೀರ್ ಅಹ್ಮದ್‌ಗೆ 5 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ.

ಹರಿಯಾಣ:ಬಿಜೆಪಿ ಕಳಪೆ ಪ್ರದರ್ಶನ

ಚಂಡೀಗಢ: ಹರಿಯಾಣ ಜಿಲ್ಲಾ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿದ್ದ 100 ಸ್ಥಾನಗಳ ಪೈಕಿ ಕೇವಲ 22 ಸ್ಥಾನಗಳಲ್ಲಿ ಮಾತ್ರ ಗೆಲ್ಲುವ ಮೂಲಕ ಬಿಜೆಪಿ ಕಳಪೆ ಪ್ರದರ್ಶನ ತೋರಿದೆ.

15 ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ ಎಎಪಿ ಎರಡನೇ ಸ್ಥಾನದಲ್ಲಿದೆ. ಎಎಪಿ ಕೂಡ 100 ಸ್ಥಾನಗಳಲ್ಲಿ ಸ್ಪರ್ಧಿಸಿತ್ತು.

ರಾಜ್ಯದ ಇತರ ಜಿಲ್ಲೆಗಳಲ್ಲಿ ಬಿಜೆಪಿ ಬೆಂಬಲಿತ 150ಕ್ಕೂ ಹೆಚ್ಚು ಅಭ್ಯರ್ಥಿಗಳು ಗೆದ್ದಿದ್ದಾರೆ ಎಂದು ಹರಿಯಾಣದ ಬಿಜೆಪಿ ವಕ್ತಾರರು ತಿಳಿಸಿದ್ದಾರೆ. ಕಾಂಗ್ರೆಸ್ ಮತ್ತು ಬಿಜೆಪಿಯ ಮಿತ್ರ ಪಕ್ಷವಾದ ಜನನಾಯಕ ಜನತಾ ಪಾರ್ಟಿಯು ಚುನಾವಣೆಯಲ್ಲಿ ಪಕ್ಷದ ಚಿಹ್ನೆಯಲ್ಲಿ ಸ್ಪರ್ಧಿಸಿರಲಿಲ್ಲ.

ಕ್ಷಮೆ ಕೋರಿದ ರಾಮ್‌ದೇವ್

ಮುಂಬೈ: 'ಮಹಿಳೆಯರು ಏನೂ ತೊಡದಿದ್ದರೂ ಚೆನ್ನಾಗಿ ಕಾಣುತ್ತಾರೆ...' ಎಂದು ಠಾಣೆ ನಗರದಲ್ಲಿ ಈಚೆಗೆ ಹೇಳಿದ್ದ ಯೋಗ ಗುರು ಬಾಬಾ ರಾಮ್‌ದೇವ್ ಅವರು ಕ್ಷಮೆ ಕೇಳಿದ್ದಾರೆ.

ಮಹಾರಾಷ್ಟ್ರ ಮಹಿಳಾ ಆಯೋಗ ರಾಮ್‌ದೇವ್ ಅವರಿಗೆ ವಿವರಣೆ ಕೇಳಿ ನೋಟಿಸ್ ಜಾರಿ ಮಾಡಿತ್ತು. 'ನೋಟಿಸ್‌ಗೆ ಪ್ರತಿಕ್ರಿಯಿಸಿರುವ ಬಾಬಾ ರಾಮ್‌ದೇವ್ ಅವರು ಕ್ಷಮೆ ಕೇಳಿದ್ದಾರೆ' ಎಂದು ಆಯೋಗದ ಮುಖ್ಯಸ್ಥೆ ರೂಪಾಲಿ ಚಕಣಕರ್ ಹೇಳಿದ್ದಾರೆ.

'ಗೆಹಲೋತ್–ಪೈಲಟ್ ಇಬ್ಬರೂ ಕಾಂಗ್ರೆಸ್ ಆಸ್ತಿ'

ಇಂದೋರ್ (ಪಿಟಿಐ): 'ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಮತ್ತು ಮಾಜಿ ಉಪಮುಖ್ಯಮಂತ್ರಿ ಸಚಿನ್ ಪೈಲಟ್ ಇಬ್ಬರೂ ಕಾಂಗ್ರೆಸ್ ಆಸ್ತಿ. ಇಬ್ಬರ ನಡುವಣ ವೈಮನಸ್ಸು 'ಭಾರತ ಜೋಡೊ' ಯಾತ್ರೆ ಮೇಲೆ ಪರಿಣಾಮ ಬೀರುವುದಿಲ್ಲ' ಎಂದು ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸೋಮವಾರ ಹೇಳಿದರು.

ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಮೇಥಿಯಿಂದ ಮತ್ತೆ ಚುನಾವಣೆಗೆ ಸ್ಪರ್ಧಿಸಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಒಂದು ಅಥವಾ ಒಂದೂವರೆ ವರ್ಷದ ನಂತರ ತೀರ್ಮಾನಿಸುತ್ತೇನೆ. ಸದ್ಯಕ್ಕೆ 'ಭಾರತ ಜೋಡೊ'ಯಾತ್ರೆ ಕಡೆಗಷ್ಟೇ ನನ್ನ ಗಮನ' ಎಂದರು.

ಮೇಘಾಲಯ: 3 ಶಾಸಕರ ರಾಜೀನಾಮೆ

ಶಿಲ್ಲಾಂಗ್ (ಪಿಟಿಐ): ಮೇಘಾಲಯದ ಆಡಳಿತಾರೂಢ ಎನ್‌ಪಿಪಿಯ ಇಬ್ಬರು ಶಾಸಕರು ಹಾಗೂ ವಿರೋಧ ಪಕ್ಷದ ಒಬ್ಬ ಶಾಸಕ ಸೋಮವಾರ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಎನ್‌ಪಿಪಿ ಶಾಸಕರಾದ ಫೆರ್ಲಿನ್ ಸಂಗ್ಮಾ, ಬೆನೆಡಿಕ್ ಮರಾಕ್ ಮತ್ತು ಟಿಎಂಸಿಯ ಎಚ್.ಎಂ.ಶಾಂಗ್‌ಪ್ಲ್ಯಾಂಗ್ ಅವರು ಸ್ಪೀಕರ್ ಮೆಟ್ಬಾ ಲಿಂಗ್ದೋಹ್ ಅವರಿಗೆ ರಾಜೀನಾಮೆ ಸಲ್ಲಿಸಿದ್ದಾರೆ. ಈ ಶಾಸಕರು ತಮ್ಮ ಪಕ್ಷಗಳ ಸದಸ್ಯತ್ವವನ್ನೂ ತ್ಯಜಿಸಿದ್ದು, ಮುಂದಿನ ತಿಂಗಳು ಎನ್‌ಪಿಪಿ ನೇತೃತ್ವದ ಮೇಘಾಲಯ ಡೆಮಾಕ್ರಟಿಕ್ ಅಲಯನ್ಸ್‌ನ ಮಿತ್ರಪಕ್ಷವಾದ ಬಿಜೆಪಿಗೆ ಸೇರಬಹುದು ಎಂಬ ಊಹಾಪೋಹ ಹರಡಿದೆ.

3,000 ಮಂದಿಯ ವಿರುದ್ಧ ಪ್ರಕರಣ

ತಿರುವನಂತಪುರ: ವಿಳಿಂಜ ಪೊಲೀಸ್ ಠಾಣೆ ಮೇಲೆ ದಾಳಿ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿ 3,000 ಮಂದಿಯ ವಿರುದ್ಧ ಪೊಲೀಸರು ಸೋಮವಾರ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅದಾನಿ ಬಂದರು ನಿರ್ಮಾಣ ವಿರೋಧಿಸಿ ಚರ್ಚ್ ನೇತೃತ್ವದ ಉದ್ರಿಕ್ತರ ಗುಂಪು ಪೊಲೀಸ್ ಠಾಣೆ ಮೇಲೆ ಭಾನುವಾರ ರಾತ್ರಿ ದಾಳಿ ನಡೆಸಿದ ಪರಿಣಾಮ 40 ಮಂದಿ ಪೊಲೀಸರು ಗಾಯಗೊಂಡಿದ್ದರು.

'ಬಾಹ್ಯ ಶಕ್ತಿಗಳ ಕೈವಾಡ': ಠಾಣೆ ಮೇಲೆ ನಡೆದಿರುವ ದಾಳಿಯ ಹಿಂದೆ 'ಬಾಹ್ಯ ಶಕ್ತಿಗಳ' ಕೈವಾಡವಿದೆ ಎಂದು ಲ್ಯಾಟಿನ್ ಕೆಥೋಲಿಕ್ ಚರ್ಚ್ ಆರೋಪಿಸಿದೆ.

'ಇನ್‌ಕೊವ್ಯಾಕ್' ತುರ್ತುಬಳಕೆಗೆ ಅನುಮೋದನೆ

ಹೈದರಾಬಾದ್ (ಪಿಟಿಐ): ಭಾರತ್ ಬಯೊಟೆಕ್ ಅಭಿವೃದ್ಧಿಪಡಿಸಿರುವ, ಮೂಗಿನ ಮೂಲಕ ನೀಡಬಹುದಾದ ಕೋವಿಡ್–19 ಲಸಿಕೆ 'ಇನ್‌ಕೊವ್ಯಾಕ್'ಗೆ ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆ ಅನುಮೋದನೆ ದೊರೆತಿದೆ. ಭಾರತದಲ್ಲಿ ತುರ್ತು ಸಂದರ್ಭದಲ್ಲಿ 18 ವರ್ಷ ಮೀರಿದವರಿಗೆ ನೀಡಬಹುದಾಗಿದೆ.

ಆಂಧ್ರ ಹೈಕೋರ್ಟ್ ಆದೇಶಕ್ಕೆ ತಡೆ

ನವದೆಹಲಿ: ಅಮರಾವತಿಯನ್ನು ಮಾತ್ರವೇ ಆಂಧ್ರಪ್ರದೇಶದ ರಾಜಧಾನಿಯನ್ನಾಗಿ ರೂಪಿಸಬೇಕು ಎಂದು ಆಂಧ್ರಪ್ರದೇಶ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ಸೋಮವಾರ ತಡೆಹಿಡಿದಿದೆ. ಪಟ್ಟಣ ನಕ್ಷೆ ಯೋಜನೆಗಾರರ ಕೆಲಸ ಮಾಡಲು ಕೋರ್ಟ್‌ಗಳಿಗೆ ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಇಬ್ಬರು ಭಾರತೀಯ ವಿದ್ಯಾರ್ಥಿಗಳ ಸಾವು

ಹೂಸ್ಟನ್ (ಪಿಟಿಐ): ಮಿಸೌರಿ ರಾಜ್ಯದ ಒಝಾರ್ಕ್ ಸರೋವರದಲ್ಲಿ ಈಜಲು ತೆರಳಿದ್ದ ಇಬ್ಬರು ಭಾರತೀಯ ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ.

'ತೆಲಂಗಾಣ ರಾಜ್ಯದ ಉತ್ತೇಜ್ ಕುಂಟ (24) ಮತ್ತು ಶಿವ ಕೆಲ್ಲಿಗಾರಿ (25) ಮೃತಪಟ್ಟ ವಿದ್ಯಾರ್ಥಿಗಳಾಗಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಆರ್‌ಎಸ್‌ಎಸ್ ಸಭೆ

ಚೆನ್ನೈ (ಪಿಟಿಐ): 2024ರ ಲೋಕಸಭಾ ಚುನಾವಣೆ ಸಂಬಂಧ ಕೈಗೊಂಡ ನಿರ್ಣಯಗಳನ್ನು ಅಂತಿಮಗೊಳಿಸಲು ಆರ್‌ಎಸ್‌ಎಸ್ ತನ್ನ ನಾಯಕರು ಮತ್ತು ಸದಸ್ಯರೊಂದಿಗೆ ಇಲ್ಲಿ ಎರಡು ದಿನಗಳ ಸಭೆ ನಡೆಸಿದೆ.

ಮತಾಂತರ: ಧಾರ್ಮಿಕ ಸ್ವಾತಂತ್ರ್ಯ ಹಕ್ಕಿನ ಭಾಗವಲ್ಲ– ಕೇಂದ್ರ

ನವದೆಹಲಿ: 'ನಿರ್ದಿಷ್ಟ ಧರ್ಮಕ್ಕೆ ಯಾವುದೇ ವ್ಯಕ್ತಿಯನ್ನು ಮತಾಂತರಗೊಳಿಸುವುದು ಧಾರ್ಮಿಕ ಸ್ವಾತಂತ್ರ್ಯದ ಹಕ್ಕಿನ ಭಾಗವಾಗಿ ಮೂಲಭೂತ ಹಕ್ಕು ಅಲ್ಲ' ಎಂದು ಕೇಂದ್ರ ಸರ್ಕಾರ ಸೋಮವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ. ಕಾನೂನುಬಾಹಿರ ಮತಾಂತರ ತಡೆಗೆ ಕಾಯ್ದೆಯು ಅಗತ್ಯವಾಗಿದೆ ಎಂದೂ ಪ್ರತಿಪಾದಿಸಿದೆ.

ಮಹಿಳೆಯರು ಸೇರಿದಂತೆ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ವರ್ಗಗಳ, ಪಾಲಿಸಬೇಕಾದ ಹಕ್ಕುಗಳನ್ನು ರಕ್ಷಿಸಲು ಕಾಯ್ದೆ ಅಗತ್ಯವಾಗಿದೆ ಎಂದು ಹೇಳಿದೆ. ಮತಾಂತರ ತಡೆಗೆ ನಿರ್ದೇಶನ ಕೋರಿ ಪ್ರಶ್ನಿಸಿ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಕೇಂದ್ರ ಸರ್ಕಾರ ಲಿಖಿತ ಪ್ರತಿಕ್ರಿಯೆ ಸಲ್ಲಿಸಿದೆ.

ಮತಾಂತರ ಕುರಿತು ಅರ್ಜಿದಾರರು ವ್ಯಕ್ತಪಡಿಸಿರುವ ಆತಂಕವನ್ನು ಒಕ್ಕೂಟ ಸರ್ಕಾರ ಗಂಭೀರವಾಗಿ ಪರಿಗಣಿಸಲಿದೆ. ಈ ಸಂಬಂಧ ಸೂಕ್ತ ಕ್ರಮವನ್ನೂ ಜರುಗಿಸಲಿದೆ. ಕಾನೂನುಬಾಹಿರ ಮತಾಂತರ ತಡೆಗೆ ವಿವಿಧ ರಾಜ್ಯಗಳಲ್ಲಿ ಈಗಾಗಲೇ ಆದೇಶಗಳು ಚಾಲ್ತಿಯಲ್ಲಿವೆ ಎಂದು ತಿಳಿಸಿದೆ.

ಅಲ್ಲದೆ, ಕಾನೂನುಬಾಹಿರ ಮತಾಂತರ ತಡೆಗೆ ಕರ್ನಾಟಕ, ಒಡಿಶಾ, ಮಧ್ಯಪ್ರದೇಶ, ಗುಜರಾತ್, ಹರಿಯಾಣ, ಉತ್ತರಾಖಂಡ, ಉತ್ತರ ಪ್ರದೇಶ, ಜಾರ್ಖಂಡ್ ರಾಜ್ಯಗಳಲ್ಲಿ ಕಾಯ್ದೆಯನ್ನು ರೂಪಿಸಿವೆ ಎಂದು ಕೇಂದ್ರವು ಸುಪ್ರೀಂ ಕೋರ್ಟ್‌ನ ಗಮನಕ್ಕೆ ತಂದಿತು.

ಬೆದರಿಕೆ, ಆಮಿಷ, ಆರ್ಥಿಕ ನೆರವಿನ ಭರವಸೆ ನೀಡಿ ಧಾರ್ಮಿಕ ಮತಾಂತರ ಮಾಡುವುದನ್ನು ತಡೆಯಲು ಕ್ರಮವಹಿಸುವಂತೆ ಕೇಂದ್ರಕ್ಕೆ ನಿರ್ದೇಶನ ನೀಡಬೇಕು. ಬಲವಂತದ ಮತಾಂತರವು ಸಂವಿಧಾನದ 14, 21 ಮತ್ತು 25ನೇ ವಿಧಿಯ ಉಲ್ಲಂಘನೆಯಾಗಲಿದೆ ಎಂದು ಅರ್ಜಿದಾರರು ಪ್ರತಿಪಾದಿಸಿದ್ದರು.

'ಬಲವಂತದ ಮತಾಂತರವು ಗಂಭೀರ ವಿಷಯ. ದೇಶದ ಭದ್ರತೆಗೂ ಧಕ್ಕೆ ತರಬಹುದು' ಎಂದು ಅಭಿಪ್ರಾಯಪಟ್ಟಿದ್ದ ಸುಪ್ರೀಂ ಕೋರ್ಟ್‌ನ ಪೀಠವು, ಈ ಸಂಬಂಧ ನಿಲುವು ತಿಳಿಸಬೇಕು ಎಂದು ನವೆಂಬರ್ 14ರಂದು ಕೇಂದ್ರ ಸರ್ಕಾರಕ್ಕೆ ಸೂಚಿಸಿತ್ತು.

ಪರಿಶಿಷ್ಟರೇ ಸಿ.ಎಂ: ನಿರ್ಣಯ

ಒಂದನೇ ಪುಟದಿಂದ

ಮೈಸೂರಿನ ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ, ಚಿತ್ರದುರ್ಗದ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಚಿತ್ರದುರ್ಗ ಬಂಜಾರಾ ಗುರುಪೀಠದ ಸಂತ ಸೇವಾಲಾಲ್ ಸ್ವಾಮೀಜಿ, ಚಿತ್ರದುರ್ಗ ಮೇದಾರ ಕೇತೇಶ್ವರ ಗುರುಪೀಠದ ಬಸವಪ್ರಭು ಇಮ್ಮಡಿ ಕೇತೇಶ್ವರ ಸ್ವಾಮೀಜಿ, ಚಿತ್ರದುರ್ಗ ಛಲವಾದಿ ಗುರುಪೀಠದ ಬಸವನಾಗಿದೇವ ಸ್ವಾಮೀಜಿ, ಉರಿಲಿಂಗಪೆದ್ದಿ ಶಾಖಾ ಮಠದ ಸಿದ್ದರಾಮೇಶ್ವರ ಸ್ವಾಮೀಜಿ ವೇದಿಕೆಯಲ್ಲಿದ್ದರು.

ನಂತರ, ಎಲ್ಲ ಮಠಾಧೀಶರೂ ಶಾಸಕ ರಮೇಶ ಜಾರಕಿಹೊಳಿ ಅವರ ನಿವಾಸದಲ್ಲಿ ಗೋಪ್ಯ ಸಭೆ ನಡೆಸಿದರು.

'ರಮೇಶ ಜಾರಕಿಹೊಳಿ ಅವರಿಗೆ ನೈತಿಕ ಬೆಂಬಲ, ಧೈರ್ಯ ನೀಡಲು ಬಂದಿದ್ದೇವೆ. ಅವರೊಂದಿಗೆ ನಾವೆಲ್ಲ ಇದ್ದೇವೆ' ಎಂದು ಜ್ಞಾನಪ್ರಕಾಶ ಸ್ವಾಮೀಜಿ ಸಭೆ ಬಳಿಕ ಪ್ರತಿಕ್ರಿಯೆ ನೀಡಿದರು.

ಮಂಕಿಪಾಕ್ಸ್ ಇನ್ನು 'ಎಂಪಾಕ್ಸ್'

ಲಂಡನ್ (ಎಪಿ): ವರ್ಣಭೇದ ಹಾಗೂ ತಾರತಮ್ಯಕ್ಕೆ ಕಾರಣವಾಗುತ್ತಿದ್ದ 'ಮಂಕಿಪಾಕ್ಸ್' ಹೆಸರನ್ನು 'ಎಂಪಾಕ್ಸ್' ಎಂದು ವಿಶ್ವ ಆರೋಗ್ಯ ಸಂಸ್ಥೆ ಮರುನಾಮಕರಣ ಮಾಡಿದೆ. ಮುಂದಿನ ವರ್ಷದಿಂದ 'ಎಂಪಾಕ್ಸ್' ಹೆಸರು ಬಳಸಲು ಸೂಚಿಸಿದೆ.

ನೂರಕ್ಕೂ ಹೆಚ್ಚು ದೇಶಗಳಿಗೆ 'ಮಂಕಿಪಾಕ್ಸ್' ಹರಡಿದ್ದು, ಅದು 'ಜನಾಂಗೀಯ ಮತ್ತು ಕಳಂಕಿತ ಭಾಷೆ' ಎಂಬ ಆರೋಪ ಕೇಳಿ ಬಂದಿತ್ತು. ಈ ಹೆಸರು ಬದಲಾಯಿಸಲು ಹಲವು ಸಂಘ– ಸಂಸ್ಥೆಗಳು ಕೋರಿದ್ದವು ಎಂದು ಡಬ್ಲ್ಯುಎಚ್‌ಒ ತಿಳಿಸಿದೆ.

ಡೆನ್ಮಾರ್ಕ್‌ನಲ್ಲಿ ಕಾಣಿಸಿದ ಸಿಡುಬಿನಂತಹ ಕಾಯಿಲೆಗೆ 1958ರಲ್ಲಿ 'ಮಂಕಿಪಾಕ್ಸ್' ಹೆಸರಿಡಲಾಗಿತ್ತು. ಹಲವು ದಶಕಗಳ ಬಳಿಕ ಕಾಯಿಲೆಯ ಹೆಸರನ್ನು ಮರುನಾಮಕರಣ ಮಾಡಿರುವುದು ಇದೇ ಮೊದಲು.

ಆಫ್ತಾಬ್ ಇದ್ದ ಪೊಲೀಸ್ ವಾಹನದ ಮೇಲೆ ದಾಳಿ

ನವದೆಹಲಿ: ಆರೋಪಿ ಆಫ್ತಾಬ್ ಇದ್ದ ಪೊಲೀಸ್ ವಾಹನದ ಮೇಲೆ ರೋಹಿಣಿ ವಿಧಿವಿಜ್ಞಾನ ಪ್ರಯೋಗಾಲಯದ ಹೊರಗೆ ಸೋಮವಾರ ಸಂಜೆ ದುಷ್ಕರ್ಮಿಗಳು ಆಯುಧಗಳನ್ನು ಹಿಡಿದು ದಾಳಿ ನಡೆಸಿದ್ದಾರೆ.

ಈ ಸಂದರ್ಭದಲ್ಲಿ ಆಫ್ತಾಬ್‌ನನ್ನು ಸುಳ್ಳುಪತ್ತೆ ಪರೀಕ್ಷೆಗೆ ಅಲ್ಲಿಗೆ ಕೊಂಡೊಯ್ಯಲಾಗಿತ್ತು.

ದಾಳಿಕೋರರನ್ನು ಬಂಧಿಸಿ, ಅವರಿಂದ ಆಯುಧಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಯುಧ ವಶಕ್ಕೆ: ಶ್ರದ್ಧಾ ವಾಲಕರ್ ಮೃತ ದೇಹವನ್ನು ತುಂಡು ತುಂಡಾಗಿ ಕತ್ತರಿಸಲು ಆರೋಪಿ ಆಫ್ತಾಬ್ ಅಮಿನ್ ಪೂನಾವಾಲಾ ಬಳಸಿದ್ದ ಎನ್ನಲಾದ ಆಯುಧವನ್ನು ದೆಹಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಶ್ರದ್ಧಾ ಅವರ ಉಂಗುರವನ್ನೂ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ಉಂಗುರವನ್ನು ಪೂನಾವಾಲಾ ಮತ್ತೊಬ್ಬ ಮಹಿಳೆಗೆ ನೀಡಿದ್ದ ಎನ್ನಲಾಗಿದೆ ಎಂದು ತಿಳಿಸಿದ್ದಾರೆ.

ಪೂನಾವಾಲಾ ತನ್ನ ಸಹಜೀವನ ಸಂಗಾತಿ ಶ್ರದ್ಧಾಳನ್ನು ಹತ್ಯೆ ಮಾಡಿ, ಆಕೆಯ ಮೃತದೇಹವನ್ನು 35 ತುಂಡುಗಳಾಗಿ ಕತ್ತರಿಸಿದ್ದ. ಬಳಿಕ ಅವುಗಳನ್ನು ಫ್ರಿಜ್‌ನಲ್ಲಿಟ್ಟು ಹಲವು ದಿನಗಳ ಕಾಲ ನಗರದ ವಿವಿಧ ಭಾಗಗಳಲ್ಲಿ ಎಸೆದಿದ್ದ. ಈತನನ್ನು ನ.12ರಂದು ಬಂಧಿಸಲಾಗಿದೆ.

ಶ್ರದ್ಧಾ ವಾಲಕರ್ ಹತ್ಯೆ ಬಳಿಕ ದೆಹಲಿಯಲ್ಲಿ ಮತ್ತೊಂದು ಬರ್ಬರ ಕೃತ್ಯ

ಪತಿ ಕೊಂದು ಹತ್ತು ತುಂಡಾಗಿಸಿ ಎಸೆದ ಪತ್ನಿ

ನವದೆಹಲಿ (ಪಿಟಿಐ): ಇಡೀ ದೇಶವನ್ನು ಬೆಚ್ಚಿ ಬೀಳಿಸಿದ, ಶ್ರದ್ಧಾ ವಾಲಕರ್ ಬರ್ಬರ ಹತ್ಯೆ ರೀತಿಯಲ್ಲೇ ಮತ್ತೊಂದು ಭೀಕರ ಕೊಲೆ ಪ್ರಕರಣ ರಾಜಧಾನಿಯಲ್ಲಿ ನಡೆದಿರುವುದು ಬೆಳಕಿಗೆ ಬಂದಿದೆ.

ಕಳೆದ ಮೇ 30ರಂದು ದೆಹಲಿಯ ಪಾಂಡವ್ ನಗರದ ನಿವಾಸಿ, ಲಿಫ್ಟ್ ಆಪರೇಟರ್ ಅಂಜನ್ ದಾಸ್ ಎಂಬಾತನನ್ನು ಆತನ ಎರಡನೇ ಪತ್ನಿ ಮತ್ತು ಆಕೆಯ ಮಗ ಸೇರಿ ಕೊಲೆ ಮಾಡಿ, ಶವವನ್ನು ಹತ್ತು ತುಂಡುಗಳಾಗಿ ಕತ್ತರಿಸಿದ್ದಾರೆ. ಆ ತುಂಡುಗಳನ್ನು ಪೂರ್ವ ದೆಹಲಿಯ ಹಲವೆಡೆ ಎಸೆಯುವ ಮೊದಲು ಫ್ರಿಜ್‌ನಲ್ಲಿ ಕೆಲವು ದಿನಗಳು ಇರಿಸಿದ್ದರು. ಕೊಲೆ ಆರೋಪಿಗಳಾದ ಪೂನಂ (48) ಮತ್ತು ದೀಪಕ್‌ನನ್ನು (25) ಬಂಧಿಸಲಾಗಿದೆ. ಫ್ರಿಜ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಶವದ ತುಂಡುಗಳಿದ್ದ ಚೀಲವೊಂದು ಪೂರ್ವ ದೆಹಲಿಯ ಕಲ್ಯಾಣ ಪುರಿಯ ರಾಮ್‌ಲೀಲಾ ಮೈದಾನದಲ್ಲಿ ಜೂನ್ 5ರಂದು ಪತ್ತೆಯಾಗಿತ್ತು. ಕೆಲವು ದಿನಗಳ ನಂತರ ವಿವಿಧೆಡೆ ಕಾಲುಗಳು, ತೊಡೆಗಳು, ತಲೆಬುರುಡೆ ಮತ್ತು ಮುಂಗೈ ಸಿಕ್ಕಿದವು. ಪಾಂಡವ್ ನಗರ ಠಾಣೆಯಲ್ಲಿ ಕೊಲೆ ಮತ್ತು ಸಾಕ್ಷ್ಯನಾಶ ಯತ್ನದ ಪ್ರಕರಣ ದಾಖಲಾಯಿತು.

'ಸಿಸಿ ಟಿ.ವಿ ದೃಶ್ಯಗಳು ಮತ್ತು ಸ್ಥಳೀಯರಿಂದ ಸಂಗ್ರಹಿಸಿದ ಮಾಹಿತಿಯಿಂದ ಶವದ ಸುಳಿವು ಸಿಕ್ಕಿತು. ಅಂಜನ್ ದಾಸ್ ನಾಪತ್ತೆ ದೂರು ದಾಖಲಿಸದಿರುವ ಸಂಶಯದ ಮೇಲೆ ಆತನ ಪತ್ನಿ ಪೂನಂ ಮತ್ತು ಮಲಮಗ ದೀಪಕ್‌ನನ್ನು ವಿಚಾರಣೆ ನಡೆಸಲಾಯಿತು. ಮಲಮಗಳು ಮತ್ತು ಸೊಸೆ (ಮಲಮಗನ ಪತ್ನಿ) ಮೇಲೆ ಅಂಜನ್ ದಾಸ್ ಕೆಟ್ಟದೃಷ್ಟಿ ಬೀರಿದ್ದ ಸಂಶಯದ ಮೇಲೆ ಕೊಲೆ ಮಾಡಿರುವುದಾಗಿ ತಾಯಿ–ಮಗ ತಪ್ಪೊಪ್ಪಿಕೊಂಡರು' ಎಂದು ಪೊಲೀಸರು ವಿವರಿಸಿದ್ದಾರೆ.

ಅಂಜನ್ ದಾಸ್‌ಗೆ ಬಿಹಾರದಲ್ಲಿ ಮೊದಲ ಪತ್ನಿ ಮತ್ತು ಎಂಟು ಪುತ್ರರು ಇದ್ದಾರೆ. ಆದರೆ, ಅದನ್ನು ಆತ ಪೂನಂನಿಂದ ಮುಚ್ಚಿಟ್ಟಿದ್ದ. ಶವದ ತುಂಡುಗಳ ತಾಳೆಗಾಗಿ ದಾಸ್ ರಕ್ತಸಂಬಂಧಿಗಳ ಡಿಎನ್‌ಎ ಮಾದರಿ ಸಂಗ್ರಹಿಸಲು ತನಿಖಾ ತಂಡ ಬಿಹಾರಕ್ಕೆ ತೆರಳಲಿದೆ ಎಂದು ಅವರು ತಿಳಿಸಿದ್ದಾರೆ.

ಸತ್ತವ ಕೊಲೆಗಾತಿಗೆ ಮೂರನೇ ಗಂಡ: ಪೊಲೀಸರ ಪ್ರಕಾರ, ಪೂನಂಗೆ14ರ ವಯಸ್ಸಿನಲ್ಲೇ ಸುಖದೇವ್ ತಿವಾರಿ ಎಂಬಾತನ ಜತೆ ವಿವಾಹವಾಗಿತ್ತು. ಆದರೆ, ಆತ ಪತ್ನಿ ತೊರೆದು ದೆಹಲಿಗೆ ಬಂದಿದ್ದ. ಗಂಡನನ್ನು ಅರಸಿ ದೆಹಲಿಗೆ ಬಂದ ಪೂನಂಗೆ ಕಲ್ಲು ಎಂಬಾತನ ಪರಿಚಯವಾಗಿ, ಆತನೊಂದಿಗೆ ಸಹಜೀವನ ನಡೆಸುತ್ತಿದ್ದಳು. ನಂತರ ಈಕೆಗೆ ಅಂಜನ್ ದಾಸ್ ಸಿಕ್ಕಿ, ಅವನೊಂದಿಗೆ ಸಂಬಂಧ ಬೆಳೆಸಿದಳು. ಕಲ್ಲು 2016ರಲ್ಲಿ ಮೃತಪಟ್ಟ. ಮರುವರ್ಷವೇ ಪೂನಂ ಮತ್ತು ಅಂಜನ್ ದಾಸ್ ಮದುವೆಯಾಗಿದ್ದರು. ತನ್ನ ಮೊದಲ ಮದುವೆ, ಕುಟುಂಬದ ವಿಚಾರ ಮುಚ್ಚಿಟ್ಟಿದ್ದ ದಾಸ್, ಪೂನಂಳ ಆಭರಣಗಳನ್ನು ಮಾರಿ, ಬಿಹಾರದಲ್ಲಿನ ತನ್ನ ಕುಟುಂಬಕ್ಕೆ ಹಣ ಕಳುಹಿಸಿದ್ದ.

ನಿದ್ರೆ ಮಾತ್ರೆ ಕೊಟ್ಟು ಗಂಟಲು ಸೀಳಿದರು

'ಮಾರ್ಚ್‌- ಏಪ್ರಿಲ್‌ನಲ್ಲೇ ಕೊಲೆಗೆ ಯೋಜಿಸಲಾಗಿತ್ತು. ಕೊಲೆಗೆ ಮುನ್ನ ದಾಸ್‌ಗೆ ಪಾನೀಯದಲ್ಲಿ ನಿದ್ರೆ ಮಾತ್ರೆ ಬೆರೆಸಿ ಕುಡಿಸಲಾಯಿತು. ಪ್ರಜ್ಞೆ ಕಳೆದುಕೊಂಡ ಮೇಲೆ ಚಾಕು ಮತ್ತು ಕಠಾರಿ ಬಳಸಿ, ಗಂಟಲು ಸೀಳಲಾಯಿತು. ದೇಹದಿಂದ ರಕ್ತ ಸಂಪೂರ್ಣ ಬಸಿಯುವವರೆಗೆ ಕಾದು, ತುಂಡುತುಂಡಾಗಿ ಕತ್ತರಿಸಲಾಯಿತು. ತಲೆ ಬುರುಡೆ ಸುಟ್ಟು ಹಾಕಲಾಯಿತು'ಎಂದು ಆರೋಪಿಗಳು ಪೊಲೀಸ್ ವಿಚಾರಣೆಯಲ್ಲಿ ಬಾಯಿಬಿಟ್ಟಿದ್ದಾರೆ.

ನಾಕೌಟ್‌ಗೆ ಬ್ರೆಜಿಲ್

ಕ್ಯಾಸೆಮಿರೊ ಕಾಲ್ಚಳಕ: ಸ್ವಿಟ್ಜರ್ಲೆಂಡ್ ಎದುರು 1–0 ಜಯ

ದೋಹಾ (ರಾಯಿಟರ್ಸ್): ಮಿಡ್‌ಫೀಲ್ಡರ್ ಕ್ಯಾಸೆಮಿರೊ ಅವರ ಕಾಲ್ಚಳಕದ ಬಲದಿಂದ ಬ್ರೆಜಿಲ್ ತಂಡವು ವಿಶ್ವಕಪ್ ಟೂರ್ನಿಯ 16ರ ಘಟ್ಟ ಪ್ರವೇಶಿಸಿತು.


ಸೋಮವಾರ ಇಲ್ಲಿಯ ಸ್ಟೇಡಿಯಂ 974ನಲ್ಲಿ ನಡೆದ ಪಂದ್ಯದಲ್ಲಿ ಬ್ರೆಜಿಲ್ 1–0ಯಿಂದ ಸ್ವಿಟ್ಜರ್ಲೆಂಡ್ ತಂಡ ವನ್ನು ಸೋಲಿಸಿತು. ಇದರೊಂದಿಗೆ ಗುಂಪು ಹಂತದಲ್ಲಿ ಒಂದು ಪಂದ್ಯ ಬಾಕಿಯಿರುವಂತೆಯೇ ನಾಕೌಟ್‌ಗೆ ಲಗ್ಗೆಯಿಟ್ಟಿತು.

ತೀವ್ರ ಪೈಪೋಟಿ ಕಂಡುಬಂದ 'ಜಿ' ಗುಂಪಿನ ಈ ಹಣಾಹಣಿಯು ಗೋಲು ರಹಿತ ಡ್ರಾದತ್ತ ಸಾಗಿತ್ತು. ಆದರೆ 83ನೇ ನಿಮಿಷದಲ್ಲಿ ಬ್ರೂನೊ ಗಿಮಾರೆಸ್ ನೆರವಿನಲ್ಲಿ ಗೋಲು ದಾಖಲಿಸಿದ ಕ್ಯಾಸೆಮಿರೊ ಗೆಲುವಿನ ಸರದಾರ ಎನಿಸಿದರು. ಈ ಗುಂಪಿನಲ್ಲಿ ಬ್ರೆಜಿಲ್ ಬಳಿ ಸದ್ಯ ಆರು ಪಾಯಿಂಟ್‌ಗಳಿವೆ.

ಗುಂಪಿನಲ್ಲಿ 2ನೇ ಸ್ಥಾನದಲ್ಲಿರುವ ಸ್ವಿಟ್ಜರ್ಲೆಂಡ್ ಬಳಿ 3 ಪಾಯಿಂಟ್ಸ್ ಇವೆ.

ಪ್ರಮುಖ ಆಟಗಾರ ನೇಮರ್ ಅವರ ಅನುಪಸ್ಥಿತಿಯ ನೆರಳು ಬ್ರೆಜಿಲ್ ತಂಡದ ಮೇಲಿತ್ತು. ಆದರೂ ತಂಡ ಉತ್ತಮ ಸಾಮರ್ಥ್ಯ ತೋರುವಲ್ಲಿ ಹಿಂದೆ ಬೀಳಲಿಲ್ಲ. 64ನೇ ನಿಮಿಷದಲ್ಲಿ ವಿನಿಸಿಯಸ್ ಜೂನಿಯರ್ ಅವರು ಚೆಂಡನ್ನು ಗೋಲ್‌ಪೋಸ್ಟ್ ಸೇರಿಸಿದರು. ಆದರೆ ಮರುಪರಿಶೀಲಿಸಿದ ಬಳಿಕ ರೆಫರಿಗಳು ಇದನ್ನು ಆಫ್‌ಸೈಡ್ ಎಂದು ತೀರ್ಮಾನಿಸಿದ್ದರು.

ಈ ಪಂದ್ಯದ ಜಯದೊಂದಿಗೆ ವಿಶ್ವಕಪ್‌ನ ಗುಂಪು ಹಂತದಲ್ಲಿ ಬ್ರೆಜಿಲ್‌ನ ಅಜೇಯ ಓಟ 17ಕ್ಕೆ ತಲುಪಿತು.



ಗೋಲು ಗಳಿಸಿದಾಗ ಸಂಭ್ರಮಿಸಿದ ಕ್ಯಾಸೆಮಿರೊ– ಎಎಫ್‌ಪಿ ಚಿತ್ರ

ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಬ್ರೆಜಿಲ್ ತಂಡವು ಕ್ಯಾಮರೂನ್ ಎದುರು ಆಡಲಿದೆ.

ಸರ್ಬಿಯಾ ಎದುರು ಗುಂಪಿನ ಕಡೆಯ ಪಂದ್ಯ ಆಡಲಿರುವ ಸ್ವಿಟ್ಜರ್ಲೆಂಡ್ ತಂಡಕ್ಕೆ ಗೆಲುವು ಅನಿವಾರ್ಯವಾಗಿದೆ.

ಸ್ಪೇನ್ ವಿರುದ್ಧ ಡ್ರಾ ಸಾಧಿಸಿದ ಜರ್ಮನಿ; ನಾಕೌಟ್ ಕನಸು ಜೀವಂತ

ಗೌರವ ಕಾಪಾಡಿದ ನಿಕ್ಲಾಸ್

ಅಲ್‌ಖೋರ್, ಕತಾರ್ (ಎಪಿ): ನಿಕ್ಲಾಸ್ ಫುಲ್‌ಕ್ರಗ್ ಹೊಡೆದ ಗೋಲು ಜರ್ಮನಿಯ ಗೌರವ ಕಾಪಾಡಿತು. ಜೊತೆಗೆ ಫಿಫಾ ವಿಶ್ವಕಪ್ ಟೂರ್ನಿಯ ನಾಕೌಟ್ ತಲುಪುವ ಆಸೆಯನ್ನೂ ಜೀವಂತವಾಗಿರಿಸಿತು.

ನಾಲ್ಕು ಬಾರಿಯ ವಿಶ್ವ ಚಾಂಪಿಯನ್ ಜರ್ಮನಿ ಭಾನುವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಸ್ಪೇನ್ ಎದುರು 1–1ರಿಂದ ಡ್ರಾ ಸಾಧಿಸಲು ನಿಕ್ಲಾಸ್ ಗೋಲು ಕಾರಣವಾಯಿತು.

ಅಲ್‌ಬೈತ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಸೋತಿದ್ದರೆ ಜರ್ಮನಿ ಫಿಫಾ ವಿಶ್ವಕಪ್ ಟೂರ್ನಿಯಿಂದ ನಿರ್ಗಮಿಸಬೇಕಿತ್ತು. ಏಕೆಂದರೆ ಮೊದಲ ಪಂದ್ಯದಲ್ಲಿ ಜಪಾನ್ ಎದುರು ಜರ್ಮನಿ ಸೋತಿತ್ತು.

ಇದೇ ಗುರುವಾರ ನಡೆಯುವ ಮೂರನೇ ಪಂದ್ಯದಲ್ಲಿ ಜರ್ಮನಿ ತಂಡವು ಕೋಸ್ಟರಿಕಾ ವಿರುದ್ಧ ಹೆಚ್ಚು ಗೋಲುಗಳ ಅಂತರದಿಂದ ಗೆದ್ದರೆ 16ರ ಘಟ್ಟಕ್ಕೆ ಪ್ರವೇಶಿಸುವ ಅವಕಾಶ ಸಿಗಬಹುದು. ಆದರೆ 'ಇ' ಗುಂಪಿನಲ್ಲಿ ಕೊನೆಯ ಸ್ಥಾನದಲ್ಲಿರುವ ಜರ್ಮನಿ ಬೇರೆ ಪಂದ್ಯಗಳ ಫಲಿತಾಂಶವನ್ನೂ ಕಾಯಬೇಕಾಗಬಹುದು. ಗೋಲು ಗಳಿಕೆಯ ಅಂತರದ ಲೆಕ್ಕಾಚಾರದಲ್ಲಿಯೂ ಮೇಲುಗೈ ಸಾಧಿಸಬೇಕಾದ ಸಾಧ್ಯತೆ ಇದೆ.

ಜಪಾನ್ ಮತ್ತು ಸ್ಪೇನ್ ತಂಡಗಳ ನಡುವಣ ಪಂದ್ಯವು ಇಲ್ಲಿ ಪ್ರಮುಖವಾಗಲಿದೆ. ಇದರಲ್ಲಿ ಸ್ಪೇನ್ ಗೆದ್ದರೆ ಜರ್ಮನಿಗೆ ಅವಕಾಶ. ಆಗ ತನ್ನ ಕೊನೆಯ ಪಂದ್ಯದಲ್ಲಿ ಕೋಸ್ಟರಿಕಾ ವಿರುದ್ಧ ಜರ್ಮನಿ ಗೆಲ್ಲಬೇಕು. ಜೊತೆಗೆ ಗೋಲುಗಳ ಅಂತರವನ್ನೂ ಹೆಚ್ಚಿಸಿಕೊಳ್ಳಬೇಕು. ಆದರೆ ಸ್ಪೇನ್ ಎದುರು ಜಪಾನ್ ಗೆದ್ದರೆ ಜರ್ಮನಿಯ ಹಾದಿ ಬಹುತೇಕ ಕೊನೆಗೊಂಡಂತಾಗುತ್ತದೆ.

ಸ್ಪೇನ್ ವಿರುದ್ಧದ ಪಂದ್ಯದಲ್ಲಿ ಜರ್ಮನಿಯ ಆಟದಲ್ಲಿ ಛಲವಿತ್ತು ಮತ್ತು ಶಿಸ್ತಿನ ಯೋಜನೆಯಿತ್ತು. ಆದರೂ 62ನೇ ನಿಮಿಷದಲ್ಲಿ ಸ್ಪೇನ್ ತಂಡದ ಅಲ್ವೆರೊ ಮೊರಾಟಾ ಗೋಲು ಹೊಡೆದರು. ತಮ್ಮ ಸಹ ಆಟಗಾರ ಜೋರ್ಡಿ ಅಲ್ಬಾ ಅವರಿಂದ ಕ್ರಾಸ್ ಪಡೆದ ಚೆಂಡನ್ನು ಅಲ್ವೆರೊ ಗೋಲ್‌ಪೋಸ್ಟ್‌ಗೆ ಕಳಿಸಿದ ರೀತಿ ಆಕರ್ಷಕವಾಗಿತ್ತು.

ಇದಾಗಿ 20ನಿಮಿಷಗಳ ನಂತರ ಕಣಕ್ಕಿಳಿದ ಸಬ್‌ಸ್ಟ್ಯೂಟ್ ನಿಕ್ಲಾಸ್ ಗೋಲು ಹೊಡೆಯುವುದರೊಂದಿಗೆ ಉಭಯ ತಂಡಗಳು ಸಮಬಲವಾದವು. ನಂತರದ ಹೋರಾಟದಲ್ಲಿ ರೋಚಕತೆ ಇತ್ತು. ಆದರೆ ಉಭಯ ತಂಡಗಳಿಗೆ ಗೋಲು ದಾಖಲಿಸಲಾಗಲಿಲ್ಲ.



ಜರ್ಮನಿಯ ನಿಕ್ಲಾಸ್ ಫುಲ್‌ಕ್ರಗ್ ಸಂಭ್ರಮ ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- 62ನೇ ನಿಮಿಷದಲ್ಲಿ ಗೋಲು ಗಳಿಸಿದ ಸ್ಪೇನ್‌ನ ಅಲ್ವೆರೊ ಮೊರಾಟಾ
- ಬದಲಿ ಆಟಗಾರನಾಗಿ ಬಂದು ಕಾಲ್ಚಳಕ ತೋರಿದ ನಿಕ್ಲಾಸ್
- ಜರ್ಮನಿಯು ಕೋಸ್ಟರಿಕಾ ವಿರುದ್ಧ ಹೆಚ್ಚು ಅಂತರದಿಂದ ಗೆದ್ದರೆ 16ರ ಘಟ್ಟದ ಅವಕಾಶ ಸಿಗಬಹುದು

ಘಾನಾ ಗೆಲುವು

ದೋಹಾ (ಎಎಫ್‌ಪಿ): ಮೊಹಮ್ಮದ್ ಕುದೂಸ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ರೋಚಕ ಗೆಲುವು ಪಡೆದ ಘಾನಾ ತಂಡ ವಿಶ್ವಕಪ್ ಟೂರ್ನಿಯ ನಾಕೌಟ್ ಹಂತ ಪ್ರವೇಶಿಸುವ ಕನಸನ್ನು ಜೀವಂತವಾಗಿರಿಸಿಕೊಂಡಿದೆ.

ಅಲ್ ರಯ್ಯಾನ್‌ನ ಎಜುಕೇಷನ್ ಸಿಟಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಘಾನಾ 3–2 ಗೋಲುಗಳಿಂದ ದಕ್ಷಿಣ ಕೊರಿಯಾ ತಂಡವನ್ನು ಮಣಿಸಿತು. ಈ ಗೆಲುವಿನ ಮೂಲಕ ಆಫ್ರಿಕಾದ ತಂಡ ಮೂರು ಪಾಯಿಂಟ್ಸ್‌ಗಳೊಂದಿಗೆ 'ಎಚ್' ಗುಂಪಿನಲ್ಲಿ ಎರಡನೇ ಸ್ಥಾನಕ್ಕೇರಿತು. ಸೋಲು ಅನುಭವಿಸಿದ ಕೊರಿಯಾ ತಂಡದ ನಾಕೌಟ್ ಪ್ರವೇಶದ ಸಾಧ್ಯತೆ ಬಹುತೇಕ ಅಸ್ತಮಿಸಿದೆ.

ಪ್ರಬಲ ಸೆಣಸಾಟ ನಡೆದ ಪಂದ್ಯದ 24ನೇ ನಿಮಿಷದಲ್ಲಿ ಮೊಹಮ್ಮದ್ ಸಲಿಸು ಅವರು ಘಾನಾ ತಂಡಕ್ಕೆ ಮುನ್ನಡೆ ತಂದಿತ್ತರು. 10 ನಿಮಿಷಗಳ ಬಳಿಕ ಕುದೂಸ್ ಅವರು ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು.

ಮೊದಲ ಅವಧಿಯುದ್ದಕ್ಕೂ ಲಯ ಕಂಡುಕೊಳ್ಳಲು ವಿಫಲವಾದ ಕೊರಿಯಾ ಎರಡನೇ ಅವಧಿಯಲ್ಲಿ ಪುಟಿದೆದ್ದು ನಿಂತಿತು. ಚೊ ಗುಯೆ ಸುಂಗ್ ಅವರು 58 ಮತ್ತು 61ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿ ಪಂದ್ಯವನ್ನು ಸಮಸ್ಥಿತಿಗೆ ತಂದರು.

ಕುದೂಸ್ 68ನೇ ನಿಮಿಷದಲ್ಲಿ ತಮ್ಮ ಎರಡನೇ ಗೋಲು ಗಳಿಸಿ ಘಾನಾ ಗೆಲುವಿಗೆ ಕಾರಣವಾದರು.

ಕ್ಯಾಮರೂನ್– ಸರ್ಬಿಯಾ ಪಂದ್ಯ ಡ್ರಾ

ದೋಹಾ (ಎಎಫ್‌ಪಿ): ಎರಡು ಗೋಲುಗಳ ಹಿನ್ನಡೆಯಿಂದ ಪುಟಿದೆದ್ದು ದಿಟ್ಟ ಆಟವಾಡಿದ ಕ್ಯಾಮರೂನ್ ತಂಡವು ವಿಶ್ವಕಪ್ ಟೂರ್ನಿಯಲ್ಲಿ ಬಲಿಷ್ಠ ಸರ್ಬಿಯಾ ತಂಡದೊಂದಿಗೆ ಡ್ರಾ ಸಾಧಿಸಿತು.

ಸೋಮವಾರ ಅಲ್ ಜನಾಬ್ ಕ್ರೀಡಾಂಗಣದಲ್ಲಿ ನಡೆದ 'ಜಿ' ಗುಂಪಿನ ಹಣಾಹಣಿಯಲ್ಲಿ ಕ್ಯಾಮರೂನ್ 3–3ರಿಂದ ಸಮಬಲ ಸಾಧಿಸಿತು. ಇದರೊಂದಿಗೆ 16ರ ಘಟ್ಟ ತಲುಪುವ ಆಸೆ ಜೀವಂತವಾಗಿರಿಸಿಕೊಂಡಿತು.

ಜಿದ್ದಾಜಿದ್ದಿನ ಪಂದ್ಯದ ದ್ವಿತೀಯಾರ್ಧದಲ್ಲಿ ಸ್ಟ್ರಾಹಿಂಜಾ ಪಾವ್ಲೊವಿಚ್, ಸೆರ್ಗೆಜ್ ಮಿಲಿಂಕೊವಿಚ್–ಸ್ಯಾವಿಚ್ ಮತ್ತು ಅಲೆಕ್ಸಾಂಡರ್ ಮಿಟ್ರೊವಿಚ್ ಗಳಿಸಿದ ಗೋಲುಗಳ ಬಲದಿಂದ ಸರ್ಬಿಯಾ 3–1ರಿಂದ ಮುನ್ನಡೆ ಪಡೆದು ಗೆಲುವಿನ ನಿರೀಕ್ಷೆಯಲ್ಲಿತ್ತು.

ಗೋಲುಗಳ ವಿವರ

ಕ್ಯಾಮರೂನ್- 3
ಜೀನ್ ಚಾರ್ಲ್ಸ್ ಕ್ಯಾಸ್ಟೆಲ್ಲೆಟೊ (29ನೇ ನಿ.)
ವಿನ್ಸೆಂಟ್ ಅಬೂಬಕ್ಕರ್ (63ನೇ ನಿ.)
ಎರಿಕ್ ಮ್ಯಾಕ್ಸಿಮ್ ಚುಪೊ ಮೊಟಿಂಗ್ (66ನೇ ನಿ.)

ಸರ್ಬಿಯಾ-3
ಸ್ಟ್ರಾಹಿಂಜಾ ಪಾವ್ಲೊವಿಚ್ (45+1ನೇ ನಿ.)
ಸೆರ್ಗೆಜ್ ಮಿಲಿಂಕೊವಿಚ್ ಸ್ಯಾವಿಚ್ (45+3ನೇ ನಿ.)
ಅಲೆಕ್ಸಾಂಡರ್ ಮಿಟ್ರೊವಿಚ್ (53ನೇ ನಿ.)

ಆದರೆ ವಿನ್ಸೆಂಟ್ ಅಬೂಬಕರ್ ಮತ್ತು ಎರಿಕ್ ಮ್ಯಾಕ್ಸಿಮ್ ಚೊಪೊ ಮೊಟಿಂಗ್ ಬೆನ್ನುಬೆನ್ನಿಗೆ ತೋರಿದ ಕಾಲ್ಚಳಕದಿಂದಾಗಿ ಪಂದ್ಯದ ಚಿತ್ರಣ ಬದಲಾಯಿತು. ಹಣಾಹಣಿ ಡ್ರಾನತ್ತ ಹೊರಳಿತು.

ಇದಕ್ಕೂ ಮೊದಲು ಪಂದ್ಯದ 29ನೇ ನಿಮಿಷದಲ್ಲೇ ಗೋಲು ಗಳಿಸಿದ್ದ ಜೀನ್ ಚಾರ್ಲ್ಸ್ ಕ್ಯಾಸ್ಟೆಲ್ಲೆಟೊ ಕ್ಯಾಮರೂನ್ ತಂಡಕ್ಕೆ ಮುನ್ನಡೆ ತಂದುಕೊಟ್ಟಿದ್ದರು. ಆದರೆ ಸರ್ಬಿಯಾ ತಿರುಗೇಟು ನೀಡಿತ್ತು.

ಈ ಫಲಿತಾಂಶದೊಂದಿಗೆ ಕ್ಯಾಮರೂನ್ ಮತ್ತು ಸರ್ಬಿಯಾ ತಲಾ ಒಂದು ಪಾಯಿಂಟ್ ಗಳಿಸಿದ್ದು 'ಜಿ' ಗುಂಪಿನಲ್ಲಿ ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿವೆ. ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಕ್ಯಾಮರೂನ್‌ಗೆ ಕಠಿಣ ಸವಾಲು ಎದುರಾಗಿದ್ದು, ಬ್ರೆಜಿಲ್ ವಿರುದ್ಧ ಆಡಬೇಕಿದೆ. 1990ರ ನಂತರ ಗುಂಪು ಹಂತ ದಾಟಿ ಮುನ್ನಡೆಯುವ ಅವಕಾಶ ಕ್ಯಾಮರೂನ್ ತಂಡಕ್ಕಿದೆ.

ಈ ಪಂದ್ಯದಲ್ಲಿ ಉಭಯ ತಂಡಗಳ ತಲಾ ಇಬ್ಬರು ಆಟಗಾರರು ಹಳದಿ ಕಾರ್ಡ್ ಪಡೆದರು



ಕ್ಯಾಮರೂನ್ ತಂಡದ ವಿನ್ಸೆಂಟ್ ಅಬೂಬಕ್ಕರ್ (ಎಡ) ಸಹ ಆಟಗಾರರೊಂದಿಗೆ ಸಂಭ್ರಮಿಸಿದರು– ಎಎಫ್‌ಪಿ ಚಿತ್ರ

ಬೆಲ್ಜಿಯಂ, ನೆದರ್ಲೆಂಡ್ಸ್‌ನಲ್ಲಿ ಹಿಂಸಾಚಾರ

ಬ್ರಸೆಲ್ಸ್ (ಎಪಿ): ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಬೆಲ್ಜಿಯಂ ತಂಡ ಮೊರೊಕ್ಕೊ ಕೈಯಲ್ಲಿ 0–2 ರಲ್ಲಿ ಆಘಾತಕಾರಿ ಸೋಲು ಅನುಭವಿಸಿದ ಬೆನ್ನಲ್ಲೇ ಬೆಲ್ಜಿಯಂ ಮತ್ತು ನೆದರ್ಲೆಂಡ್ಸ್‌ನ ಕೆಲವು ನಗರಗಳಲ್ಲಿ ಹಿಂಸಾಚಾರ ಘಟನೆ ನಡೆದಿದೆ.

ಬೆಲ್ಜಿಯಂ ಮತ್ತು ನೆದರ್ಲೆಂಡ್ಸ್‌ನ ಕೆಲವು ನಗರಗಳಲ್ಲಿ ಮೊರೊಕ್ಕೊದಿಂದ ವಲಸೆ ಬಂದಿರುವ ನೂರಾರು ಮಂದಿ ನೆಲೆಸಿದ್ದಾರೆ. ಅವರು ಮೊರೊಕ್ಕೊ ಗೆಲುವಿನ ಸಂಭ್ರಮ ಆಚರಿಸಿದ್ದು ಘರ್ಷಣೆಗೆ ಕಾರಣವಾಗಿದೆ.

ಬ್ರಸೆಲ್ಸ್‌ನಲ್ಲಿ ಸಂಭ್ರಮಾಚರಣೆ ವೇಳೆ ಹಲವು ಕಾರುಗಳನ್ನು ಜಖಂಗೊಳಿಸಲಾಗಿದ್ದು, ದ್ವಿಚಕ್ರ ವಾಹನಗಳಿಗೆ ಬೆಂಕಿ ಹಚ್ಚಲಾಗಿದೆ. ಇಲ್ಲಿ 10ಕ್ಕೂ ಅಧಿಕ ಮಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನೆದರ್ಲೆಂಡ್ಸ್‌ನ ರೋಟರ್‌ಡ್ಯಾಂನಲ್ಲಿ ಸುಮಾರು 500 ರಷ್ಟಿದ್ದ ಫುಟ್‌ಬಾಲ್ ಅಭಿಮಾನಿಗಳು ಪೊಲೀಸರತ್ತ ಕಲ್ಲು ತೂರಾಟ ನಡೆಸಿದ್ದಾರೆ. ರಾಜಧಾನಿ ಆಮ್‌ಸ್ಟರ್‌ಡ್ಯಾಂ ಮತ್ತು ದಿ ಹೇಗ್‌ನಲ್ಲೂ ಘರ್ಷಣೆ ನಡೆದಿವೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ರಾಜಕೀಯ ಬದ್ಧವೈರಿಗಳ ನಡುವಣ ಹಣಾಹಣಿ

ಇರಾನ್– ಅಮೆರಿಕ ಪಂದ್ಯ ಇಂದು

ದೋಹಾ (ಎಎಫ್‌ಪಿ): ಅಮೆರಿಕ ಮತ್ತು ಇರಾನ್ ನಡುವಿನ ರಾಜಕೀಯ ವೈರತ್ವ ಏನೆಂಬುದು ಇಡೀ ಜಗತ್ತಿಗೆ ತಿಳಿದಿದೆ. ಈ ಎರಡು ದೇಶಗಳ ತಂಡಗಳು ವಿಶ್ವಕಪ್ ಟೂರ್ನಿಯಲ್ಲಿ ಮಂಗಳವಾರ ಪರಸ್ಪರ ಪೈಪೋಟಿ ನಡೆಸಲಿದ್ದು, ಫುಟ್‌ಬಾಲ್ ಪ್ರೇಮಿಗಳಲ್ಲಿ ಕುತೂಹಲ ಗರಿಗೆದರಿದೆ.

ಅಲ್ ತುಮಾಮಾ ಕ್ರೀಡಾಂಗಣದಲ್ಲಿ ನಡೆಯುವ 'ಬಿ' ಗುಂಪಿನ ಪಂದ್ಯದಲ್ಲಿ ತುರುಸಿನ ಪೈಪೋಟಿ ನಿರೀಕ್ಷಿಸಲಾಗಿದೆ. ಉಭಯ ತಂಡಗಳಿಗೂ ಇದು ಕೊನೆಯ ಪಂದ್ಯವಾಗಿದ್ದು, ಗೆಲುವು ಪಡೆಯುವವರು 16ರ ಘಟ್ಟ ಪ್ರವೇಶಿಸಲಿದ್ದಾರೆ. ಸೋಲು ಅನುಭವಿಸುವ ತಂಡ ಟೂರ್ನಿಯಿಂದ ಹೊರಬೀಳಲಿದೆ.

ಇಂದಿನ ಪಂದ್ಯ

ಪಂದ್ಯ	ಸಮಯ
ನೆದರ್ಲೆಂಡ್ಸ್ Vs ಕತಾರ್	ರಾತ್ರಿ 8.30
ಈಕ್ವೆಡಾರ್ Vs ಸೆನೆಗಲ್	ರಾತ್ರಿ 8.30
ವೇಲ್ಸ್ Vs ಇಂಗ್ಲೆಂಡ್	ತಡರಾತ್ರಿ 12.30
ಇರಾನ್ Vs ಅಮೆರಿಕ	ತಡರಾತ್ರಿ 12.30

ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನಿಮಾ ಆ್ಯಪ್

ನಾಲ್ಕು ಪಾಯಿಂಟ್ಸ್ ಹೊಂದಿರುವ ಇಂಗ್ಲೆಂಡ್ 'ಬಿ' ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ. ಮೂರು ಪಾಯಿಂಟ್ಸ್‌ಗಳೊಂದಿಗೆ ಇರಾನ್ ಎರಡನೇ ಸ್ಥಾನದಲ್ಲಿದ್ದರೆ, ಎರಡು ಪಾಯಿಂಟ್ಸ್ ಗಳಿಸಿರುವ ಅಮೆರಿಕ ಬಳಿಕದ ಸ್ಥಾನದಲ್ಲಿದೆ.

1998ರಲ್ಲಿ ಗೆದ್ದಿದ್ದ ಇರಾನ್: ಇರಾನ್ ಮತ್ತು ಅಮೆರಿಕ ತಂಡಗಳು 1998ರ ವಿಶ್ವಕಪ್‌ನಲ್ಲಿ ಮೊದಲ ಬಾರಿ ಪೈಪೋಟಿ ನಡೆಸಿದ್ದಾಗ ಇರಾನ್ 2–1 ಗೋಲುಗಳಿಂದ ಗೆದ್ದಿತ್ತು. ಆ ಪಂದ್ಯ ಕೂಡಾ ಸಾಕಷ್ಟು ರೋಚಕತೆಗೆ ಸಾಕ್ಷಿಯಾಗಿತ್ತು. ಇದೀಗ 24 ವರ್ಷಗಳ ಬಿಡುವಿನ ಬಳಿಕ ಇದೀಗ ಇವೆರಡು ತಂಡಗಳು ಎದುರಾಗುತ್ತಿವೆ.

ವಿಶ್ವಕಪ್ ಟೂರ್ನಿಯ ಲೀಗ್ ಹಂತದ ಕೊನೆಯ ಸುತ್ತಿನ ಪಂದ್ಯಗಳು ಇಂದಿನಿಂದ ನಡೆಯಲಿವೆ.

ಋತುರಾಜ್ ಗಾಯಕವಾಡ್ ವಿಶ್ವದಾಖಲೆ

ಈ ಪಂದ್ಯದಲ್ಲಿ ಋತುರಾಜ್ 159 ಎಸೆತಗಳಲ್ಲಿ 16 ಸಿಕ್ಸರ್ ಮತ್ತು 10 ಬೌಂಡರಿ ನೆರವಿನಿಂದ 220 ರನ್ ಪೇರಿಸಿದರು.

ಒಂದು ಓವರ್; 7 ಸಿಕ್ಸರ್!

ಅಹಮದಾಬಾದ್ (ಪಿಟಿಐ): ಮಹಾರಾಷ್ಟ್ರ ತಂಡದ ನಾಯಕ ಋತುರಾಜ್ ಗಾಯಕವಾಡ್ ಅವರು ಒಂದೇ ಓವರ್‌ನಲ್ಲಿ ಏಳು ಸಿಕ್ಸರ್ ಹೊಡೆದು 'ಲಿಸ್ಟ್ ಎ' ಕ್ರಿಕೆಟ್ ಪಂದ್ಯದಲ್ಲಿ ವಿಶ್ವದಾಖಲೆ ಮಾಡಿದರು.

ಸೋಮವಾರ ನಡೆದ ವಿಜಯ್ ಹಜಾರೆ ಟ್ರೋಫಿ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಉತ್ತರ ಪ್ರದೇಶ ತಂಡದ ಶಿವ ಸಿಂಗ್ ಅವರು ಬೌಲ್ ಮಾಡಿದ 49ನೇ ಓವರ್‌ನಲ್ಲಿ ಈ ಸಾಧನೆ ಮೂಡಿಬಂತು. ಶಿವ ಸಿಂಗ್ ಒಂದು ನೋಬಾಲ್ ಹಾಕಿದ್ದರು. ಆ ಎಸೆತವನ್ನೂ ಋತುರಾಜ್ ಸಿಕ್ಸರ್‌ಗೆ ಅಟ್ಟಿದರು.



'ಲಿಸ್ಟ್ ಎ' ಕ್ರಿಕೆಟ್‌ನಲ್ಲಿ ಒಂದೇ ಓವರ್‌ನಲ್ಲಿ ಆಟಗಾರನೊಬ್ಬ ಏಳು ಸಿಕ್ಸರ್ ಹೊಡೆದದ್ದು ಇದೇ ಮೊದಲು. ಆದರೆ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಒಂದು ಓವರ್‌ನಲ್ಲಿ ಅತ್ಯಧಿಕ ಸಿಕ್ಸರ್ ಹೊಡೆದ ದಾಖಲೆ ನ್ಯೂಜಿಲೆಂಡ್‌ನ ಲೀ ಜರ್ಮನ್ ಅವರ ಹೆಸರಲ್ಲಿದೆ. ವೆಲಿಂಗ್ಟನ್‌ನಲ್ಲಿ ನಡೆದ ಶೆಲ್ ಟ್ರೋಫಿ ದೇಸಿ ಕ್ರಿಕೆಟ್ ಟೂರ್ನಿಯಲ್ಲಿ ಅವರು ಎಂಟು ಸಿಕ್ಸರ್ (ಎರಡು ನೋಬಾಲ್ ಇದ್ದವು) ಹೊಡೆದಿದ್ದರು.

43 ರನ್: ಶಿವ ಸಿಂಗ್ ಓವರ್‌ನಲ್ಲಿ 43 ರನ್‌ಗಳು ಬಂದವು. ಲಿಸ್ಟ್ ಎ ಪಂದ್ಯದ ಒಂದೇ ಓವರ್‌ನಲ್ಲಿ ಅತ್ಯಧಿಕ ರನ್‌ಗಳ ದಾಖಲೆ ಸರಿಗಟ್ಟಿದ ಸಾಧನೆ ಇದಾಗಿದೆ. ನ್ಯೂಜಿಲೆಂಡ್ ದೇಸಿ ಕ್ರಿಕೆಟ್‌ನ ಫೋರ್ಡ್ ಟ್ರೋಫಿ ಟೂರ್ನಿಯಲ್ಲಿ ನಾರ್ದರ್ನ್ ಡಿಸ್ಟ್ರಿಕ್ಟ್ಸ್ ತಂಡದ ಬ್ರೆಟ್ ಹ್ಯಾಂಪ್ಟನ್ ಮತ್ತು ಜೋ ಕಾರ್ಟರ್ ಅವರು ಸೆಂಟ್ರಲ್ ಡಿಸ್ಟ್ರಿಕ್ಟ್ಸ್ ತಂಡದ ವಿಲೆಮ್ ಲುಡಿಕ್ ಓವರ್‌ನಲ್ಲಿ 43 ರನ್ ಕಲೆಹಾಕಿದ್ದರು.

ಮಹಾರಾಷ್ಟ್ರ 50 ಓವರ್‌ಗಳಲ್ಲಿ 5 ವಿಕೆಟ್‌ಗೆ 330 ರನ್ ಗಳಿಸಿದರೆ, ಉತ್ತರ ಪ್ರದೇಶ 47.4 ಓವರ್‌ಗಳಲ್ಲಿ 272 ರನ್‌ಗಳಿಗೆ ಆಲೌಟಾಯಿತು. 58 ರನ್‌ಗಳಿಂದ ಗೆದ್ದ ಮಹಾರಾಷ್ಟ್ರ ಸೆಮಿಫೈನಲ್ ಪ್ರವೇಶಿಸಿತು.

ವಿಜಯ್ ಹಜಾರೆ ಟ್ರೋಫಿ: ಸೆಮಿಫೈನಲ್‌ಗೆ ಕರ್ನಾಟಕ

ಸಮರ್ಥ್, ಶ್ರೇಯಸ್ ಮಿಂಚು

ಅಹಮದಾಬಾದ್: ಆರ್.ಸಮರ್ಥ್ ಹಾಗೂ ಶ್ರೇಯಸ್ ಗೋಪಾಲ್ ಅವರ ಜವಾಬ್ದಾರಿಯುತ ಬ್ಯಾಟಿಂಗ್ ಮತ್ತು ವಿದ್ವತ್ ಕಾವೇರಪ್ಪ ತೋರಿದ ಅಮೋಘ ಬೌಲಿಂಗ್ ನೆರವಿನಿಂದ ಕರ್ನಾಟಕ ತಂಡ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಮಯಂಕ್ ಅಗರವಾಲ್ ಬಳಗ ನಾಲ್ಕು ವಿಕೆಟ್‌ಗಳಿಂದ ಪಂಜಾಬ್ ತಂಡವನ್ನು ಮಣಿಸಿತು. ಬುಧವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ ಕರ್ನಾಟಕ ತಂಡ, ಸೌರಾಷ್ಟ್ರದ ಸವಾಲು ಎದುರಿಸಲಿದೆ.

ಮೊದಲು ಬ್ಯಾಟ್ ಮಾಡಿದ ಪಂಜಾಬ್ 50 ಓವರ್‌ಗಳಲ್ಲಿ 235 ರನ್‌ಗಳಿಗೆ ಆಲೌಟಾಯಿತು. 40 ರನ್‌ಗಳಿಗೆ 4 ವಿಕೆಟ್ ಪಡೆದ ವಿದ್ವತ್ ಅವರು ಎದುರಾಳಿ ತಂಡವನ್ನು ಅಲ್ಪ ಮೊತ್ತಕ್ಕೆ ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಪಂಜಾಬ್‌ನ ಯುವ ಆಟಗಾರ ಅಭಿಷೇಕ್ ಶರ್ಮ (109 ರನ್, 123 ಎ.) ಶತಕ ಗಳಿಸಿ ಗಮನ ಸೆಳೆದರು.



ಆರ್. ಸಮರ್ಥ್

ಸಾಧಾರಣ ಗುರಿ ಬೆನ್ನಟ್ಟಿದ ಕರ್ನಾಟಕ ತಂಡ ಮಯಂಕ್ (1) ಅವರನ್ನು ಬೇಗನೇ ಕಳೆದುಕೊಂಡಿತು. ಆದರೆ ಆರ್.ಸಮರ್ಥ್ (71 ರನ್, 106 ಎ.), ನಿಕಿನ್ ಜೋಸ್ (29 ರನ್, 35 ಎ.) ಮತ್ತು ಮನೀಷ್ ಪಾಂಡೆ (35 ರನ್, 46 ಎ.) ಆಸರೆಯಾದರು. ಕರ್ನಾಟಕ 42ನೇ ಓವರ್‌ನಲ್ಲಿ 5 ವಿಕೆಟ್‌ಗೆ 188 ರನ್ ಗಳಿಸಿ ಅಲ್ಪ ಒತ್ತಡಕ್ಕೆ ಸಿಲುಕಿತ್ತು.

ಈ ವೇಳೆ ಜವಾಬ್ದಾರಿಯುತ ಆಟವಾಡಿದ ಶ್ರೇಯಸ್ ಗೋಪಾಲ್ (42 ರನ್, 52 ಎ.) ಮತ್ತು ಮನೋಜ್ ಭಾಂಡಗೆ (ಅಜೇಯ 25, 23 ಎ.) ತಂಡವನ್ನು ಗೆಲುವಿನ ಗಡಿ ದಾಟಿಸಿದರು.

ಸೆಮಿಗೆ ಸೌರಾಷ್ಟ್ರ, ಅಸ್ಸಾಂ: ಇತರ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಸೌರಾಷ್ಟ್ರ ತಂಡ 44 ರನ್‌ಗಳಿಂದ ತಮಿಳುನಾಡು ತಂಡವನ್ನು ಮಣಿಸಿದರೆ, ಅಸ್ಸಾಂ 7 ವಿಕೆಟ್‌ಗಳಿಂದ ಜಮ್ಮು ಮತ್ತು ಕಾಶ್ಮೀರ ವಿರುದ್ಧ ಗೆದ್ದಿತು.

ಸಂಕ್ಷಿಪ್ತ ಸ್ಕೋರ್: ಪಂಜಾಬ್ 50 ಓವರ್‌ಗಳಲ್ಲಿ 235 (ಅಭಿಷೇಕ್ ಶರ್ಮ 109, ಅನ್ಮೋಲ್ ಮಲ್ಹೋತ್ರ 29, ಸನ್ವೀರ್ ಸಿಂಗ್ 39, ರಮಣದೀಪ್ ಸಿಂಗ್ 17, ವಿದ್ವತ್ ಕಾವೇರಪ್ಪ 40ಕ್ಕೆ 4, ವಿ.ಕೌಶಿಕ್ 25ಕ್ಕೆ 1, ರೋನಿತ್ ಮೋರೆ 48ಕ್ಕೆ 2, ಮನೋಜ್ ಭಾಂಡಗೆ 47ಕ್ಕೆ1, ಕೆ.ಗೌತಮ್ 47ಕ್ಕೆ 1)

ಕರ್ನಾಟಕ 49.2 ಓವರ್‌ಗಳಲ್ಲಿ 6 ವಿಕೆಟ್‌ಗೆ 238 (ಆರ್.ಸಮರ್ಥ್ 71, ನಿಕಿನ್ ಜೋಸ್ 29, ಮನೀಷ್ ಪಾಂಡೆ 35, ಶ್ರೇಯಸ್ ಗೋಪಾಲ್ 42, ಮನೋಜ್ ಭಾಂಡಗೆ ಔಟಾಗದೆ 25, ಸನ್ವೀರ್ ಸಿಂಗ್ 28ಕ್ಕೆ 2, ಸಿದ್ಧಾರ್ಥ್ ಕೌಲ್ 56ಕ್ಕೆ 1) ಫಲಿತಾಂಶ: ಕರ್ನಾಟಕಕ್ಕೆ 4 ವಿಕೆಟ್ ಗೆಲುವು

ಜರ್ಮನಿಯಲ್ಲಿ ಅವಮಾನ: ನಾರಾಯಣನ್

ಚೆನ್ನೈ (ಪಿಟಿಐ): ಬಂಡೆಸ್‌ಲಿಗಾ ಚೆಸ್ ಲೀಗ್‌ನಲ್ಲಿ ಆಡಲು ಜರ್ಮನಿಗೆ ತೆರಳಿದ್ದ ಭಾರತದ ಗ್ರ್ಯಾಂಡ್‌ಮಾಸ್ಟರ್ ಎಸ್.ಎಲ್. ನಾರಾಯಣನ್ 'ಅವಮಾನ' ಅನುಭವಿಸಿದ್ದಾರೆ. ಸೋಮವಾರ ನಡೆಯಬೇಕಿದ್ದ ಪಂದ್ಯಕ್ಕೂ ಮೊದಲು ಅವರನ್ನು ಲೋಹ ಶೋಧಕ ತಪಾಸಣೆಯ ಸಂದರ್ಭದಲ್ಲಿ ಬರಿಗಾಲಿನಲ್ಲಿ ನಿಲ್ಲಿಸಲಾಗಿತ್ತು.

ಈ ಕುರಿತು ನಾರಾಯಣನ್ ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ.

ಲೋಹ ಶೋಧಕ ತಪಾಸಣೆಯ ಸಂದರ್ಭದಲ್ಲಿ 'ಬೀಪ್' ಶಬ್ದ ಉಂಟಾಯಿತು. ಹೀಗಾಗಿ ಅವರ ಬೂಟು ಮತ್ತು ಸಾಕ್ಸ್ ಬಿಚ್ಚಿಸಿ ನಿಲ್ಲಿಸಲಾಯಿತು. ಆದರೆ ಆ ಶಬ್ದ ಬಂದಿದ್ದು ನೆಲದ ಮೇಲೆ ಹಾಸಿದ್ದ ಕಾರ್ಪೆಟ್‌ನಿಂದ ಎಂದು ಬಳಿಕ ಗೊತ್ತಾಗಿದೆ. ಈ ರೀತಿಯ ತಪಾಸಣೆಗಳು ಈ ಮೊದಲು ನಡೆದಿವೆ. ಆದರೆ ವಿಶ್ವ ಚಾಂಪಿಯನ್, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಅಮೆರಿಕದ ಹ್ಯಾನ್ಸ್ ನೀಮನ್ ಅವರು ಮೋಸದಾಟದ ಆರೋಪ ಮಾಡಿದ ಬಳಿಕ ಆಟಗಾರರನ್ನು ತೀವ್ರ ತಪಾಸಣೆಗೆ ಒಳಪಡಿಸಲಾಗುತ್ತಿದೆ.

'ನನಗೆ ಅವಮಾನವಾಗಿದೆ. ಈ ಕುರಿತು ಮೌನವಾಗಿದ್ದರೆ ನನಗೆ ಮತ್ತು ಈ ರೀತಿಯ ಅವಮಾನ ಎದುರಿಸುವ ಕ್ರೀಡಾಪಟುಗಳಿಗೆ ನ್ಯಾಯ ಸಲ್ಲಿಸಿದಂತಾಗುತ್ತಿರಲಿಲ್ಲ' ಎಂದು ನಾರಾಯಣನ್ ಟ್ವೀಟ್ ಮಾಡಿದ್ದಾರೆ.

ಯೋಧಾಸ್‌ಗೆ ಗೆಲುವು

ಹೈದರಾಬಾದ್ (ಪಿಟಿಐ): ಪ್ರದೀಪ್ ನರ್ವಾಲ್ (14 ಪಾಯಿಂಟ್ಸ್) ಅವರ ಚುರುಕಿನ ಆಟದ ಬಲದಿಂದ ಯು.ಪಿ.ಯೋಧಾಸ್ ತಂಡ ಪ್ರೊ ಕಬಡ್ಡಿ ಲೀಗ್‌ನಲ್ಲಿ ರೋಚಕ ಗೆಲುವು ಪಡೆಯಿತು.

ಗಚಿಬೌಳಿ ಒಳಾಂಗಣ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಯೋಧಾಸ್ 33–32 ರಲ್ಲಿ ಬೆಂಗಾಲ್ ವಾರಿಯರ್ಸ್ ತಂಡವನ್ನು ಮಣಿಸಿತು.

ಪ್ರಥಮಾರ್ಧ ಕೊನೆಗೊಂಡಾಗ ಯೋಧಾಸ್ 19–11 ರಲ್ಲಿ ಮುನ್ನಡೆ ಸಾಧಿಸಿತ್ತು. ಮಣಿಂದರ್ ಸಿಂಗ್ (10) ಅವರ ಉತ್ತಮ ಆಟದಿಂದ ವಾರಿಯರ್ಸ್ ಎರಡನೇ ಅವಧಿಯಲ್ಲಿ ಮರುಹೋರಾಟ ನಡೆಸಿತು.

ದಿನದ ಇನ್ನೊಂದು ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ 48–28 ರಲ್ಲಿ ತೆಲುಗು ಟೈಟನ್ಸ್ ವಿರುದ್ಧ ಭಾರಿ ಅಂತರದಿಂದ ಗೆದ್ದಿತು. ಅರ್ಜುನ್ ದೇಶ್ವಾಲ್ (18) ಅವರು ಜೈಪುರ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಪುಣೇರಿ	18	12	4	2	69
ಜೈಪುರ	18	12	6	0	64
ಬೆಂಗಳೂರು	18	11	6	1	63
ಯುಪಿ	18	10	6	2	60
ತಲೈವಾಸ್	18	8	7	3	53
ಡೆಲ್ಲಿ	18	9	9	0	51

ಇಂದಿನ ಪಂದ್ಯಗಳು

ಪುಣೇರಿ ಪಲ್ಟನ್– ಗುಜರಾತ್ ಜೈಂಟ್ಸ್

ಹರಿಯಾಣ ಸ್ಟೀಲರ್ಸ್– ಯು ಮುಂಬಾ

ಆಯ್ಕೆ ಸಮಿತಿ: ಮಣಿಂದರ್, ದಾಸ್ ಅರ್ಜಿ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ರಾಷ್ಟ್ರೀಯ ಆಯ್ಕೆ ಸಮಿತಿ ಮುಖ್ಯಸ್ಥನ ಸ್ಥಾನಕ್ಕೆ ಮಾಜಿ ಆಟಗಾರರಾದ ಎಡಗೈ ಸ್ಪಿನ್ನರ್ ಮಣಿಂದರ್ ಸಿಂಗ್ ಮತ್ತು ಆರಂಭಿಕ ಬ್ಯಾಟರ್ ಶಿವಸುಂದರ್ ದಾಸ್ ಅವರು ಅರ್ಜಿ ಸಲ್ಲಿಸಿದ್ದಾರೆ.

ವೇಗದ ಬೌಲರ್ ಅಜಿತ್ ಅಗರ್ಕರ್ ಅರ್ಜಿ ಸಲ್ಲಿಸಿದ್ದಾರೆಯೇ ಎಂಬುದು ಖಚಿತವಾಗಿಲ್ಲ. ಅಗರ್ಕರ್ ಅರ್ಜಿ ಸಲ್ಲಿಸಿದ್ದರೆ ಅವರು ಆಯ್ಕೆ ಸಮಿತಿ ಮುಖ್ಯಸ್ಥರಾಗುವ ಸಾಧ್ಯತೆಯೇ ಅಧಿಕ ಎಂದು ಮೂಲಗಳು ಹೇಳಿವೆ.



ಮಣಿಂದರ್

ಭಾರತ ತಂಡದ ಮಾಜಿ ವಿಕೆಟ್ ಕೀಪರ್ ನಯನ್ ಮೋಂಗಿಯಾ ಕೂಡ ಅರ್ಜಿ ಹಾಕಿದ್ದಾರೆ.

ಮುಂಬೈ ಕ್ರಿಕೆಟ್ ಸಂಸ್ಥೆ ಆಯ್ಕೆ ಸಮಿತಿ ಮುಖ್ಯಸ್ಥ ಸಲಿಲ್ ಅಂಕೋಲಾ, ಸಮೀರ್ ದಿಘೆ ಮತ್ತು ವಿನೋದ್ ಕಾಂಬ್ಳಿ ಅವರು ಮುಂಬೈನಿಂದ ಅರ್ಜಿ ಸಲ್ಲಿಸಿದ್ದಾರೆ. ಆಯ್ಕೆ ಸಮಿತಿಗೆ ಅರ್ಜಿ ಸಲ್ಲಿಸಲು ಸೋಮವಾರ ಕೊನೆಯ ದಿನವಾಗಿತ್ತು. 50 ಕ್ಕೂ ಅಧಿಕ ಅರ್ಜಿಗಳು ಬಂದಿವೆ ಎಂದು ಮೂಲಗಳು ಹೇಳಿವೆ.

ಡಿ.2ರಿಂದ ಬೆಂಗಳೂರು ರೇಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ಬೆಂಗಳೂರು ಚಳಿಗಾಲದ ರೇಸ್‌ಗಳು ಡಿ.2 ರಿಂದ ಪ್ರಾರಂಭವಾಗಲಿದ್ದು, ಒಟ್ಟು 22 ರೇಸ್ ದಿನಗಳನ್ನು ಏರ್ಪಡಿಸಲಾಗಿದೆ ಎಂದು ಬೆಂಗಳೂರು ಟರ್ಫ್ ಕ್ಲಬ್ ಅಧ್ಯಕ್ಷ ಶಿವಕುಮಾರ್ ಖೇಣಿ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಾಮಾನ್ಯವಾಗಿ ಚಳಿಗಾಲದ ರೇಸ್‌ಗಳು ನವೆಂಬರ್ ಮೊದಲನೇ ಅಥವಾ ಎರಡನೇ ವಾರದಲ್ಲಿ ಆರಂಭವಾಗುತ್ತವೆ. ಆದರೆ ಮಳೆಯ ಕಾರಣ ಈ ಬಾರಿ ತಡವಾಗಿ ಆರಂಭಿಸಲಾಗಿದೆ. ಇದನ್ನು ಸರಿದೂಗಿಸಲು ಎರಡು ಹೆಚ್ಚುವರಿ ರೇಸ್ ದಿನಗಳನ್ನು ಏರ್ಪಡಿಸಲು ಎಲ್ಲಾ ಪ್ರಯತ್ನ ಮಾಡಲಾಗುವುದು' ಎಂದರು.

'ಪ್ರಸಕ್ತ ವರ್ಷದ ಇನ್ವಿಟೇಶನಲ್ ರೇಸ್‌ಗಳನ್ನು ಆಯೋಜಿಸುವ ಅವಕಾಶ ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್‌ಗೆ ದೊರೆತಿದೆ. ಮುಂದಿನ ವರ್ಷ ಮಾರ್ಚ್ 4 ರಂದು ಸ್ಪ್ರಿಂಟರ್ಸ್ ಕಪ್ ಮತ್ತು ಸ್ಟೇಯರ್ಸ್ ಕಪ್; ಮಾರ್ಚ್ 5 ರಂದು ದಿ ಇಂಡಿಯನ್ ಟರ್ಫ್ ಇನ್ವಿಟೇಶನ್ ಕಪ್ ಹಾಗೂ ಸೂಪರ್ ಮೈಲ್ ಕಪ್ ನಡೆಯಲಿವೆ' ಎಂದು ಮಾಹಿತಿ ನೀಡಿದರು.

ಇನ್ವಿಟೇಶನಲ್ ರೇಸ್‌ಗಳನ್ನು ಹೊರತುಪಡಿಸಿ, ಚಳಿಗಾಲದ ರೇಸ್‌ಗಳಿಗೆ ಬಹುಮಾನ ಮೊತ್ತ ಸೇರಿದಂತೆ, ₹ 13.31 ಕೋಟಿ ಮೊತ್ತ ಮೀಸಲಿಡಲಾಗಿದೆ. ಎರಡು ಅಣಕು ರೇಸ್‌ಗಳನ್ನು ನಡೆಸಲಾಗಿದ್ದು, ರೇಸ್ ನಡೆಸಲು ಟ್ರ್ಯಾಕ್ ಸಮರ್ಥವಾಗಿದೆ ಎಂದು ಅಣಕು ರೇಸ್‌ನಲ್ಲಿ ಪಾಲ್ಗೊಂಡಿದ್ದ ಜಾಕಿಗಳು ತಿಳಿಸಿದ್ದಾರೆ ಎಂದರು.

ಒಂದೇ ಟೋಟ್ ಬೆಟ್ಟಿಂಗ್: ದೇಶದ ಎಲ್ಲಾ ರೇಸ್ ಕ್ಲಬ್‌ಗಳು ಸೇರಿ ಅಖಿಲ ಭಾರತ ಮಟ್ಟದಲ್ಲಿ ಒಂದೇ ಟೋಟ್ ಬೆಟ್ಟಿಂಗ್ ನಡೆಸಲು ಒಪ್ಪಿಗೆ ನೀಡಿವೆ. ಈ ಪ್ರಕ್ರಿಯೆ ಪ್ರಾಯೋಗಿಕ ಹಂತದಲ್ಲಿದ್ದು, ಡಿ. 21 ರಿಂದ ಪ್ರಾರಂಭವಾಗುವ ನಿರೀಕ್ಷೆಯಿದೆ. ಬೆಂಗಳೂರು ಡರ್ಬಿ ರೇಸ್‌ಅನ್ನು ಮುಂದಿನ ವರ್ಷ ಜ. 26 ರಂದು ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ನನ್ನಿಂದ ಬಟ್ಟೆ ತೊಳೆಸಿದ್ದ ಸಲೀಂ: ವಾಸೀಂ ಆರೋಪ

ಕರಾಚಿ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿಟ್ಟ ಆರಂಭದ ದಿನಗಳಲ್ಲಿ ಸಲೀಂ ಮಲಿಕ್ ಅವರು ತನ್ನನ್ನು ಸೇವಕ ನಂತೆ ನಡೆಸಿಕೊಂಡಿದ್ದರು ಎಂದು ಪಾಕಿಸ್ತಾನದ ದಿಗ್ಗಜ ವೇಗಿ ವಾಸೀಂ ಅಕ್ರಂ ಆರೋಪಿಸಿದ್ದಾರೆ. ಈ ವಿಷಯವನ್ನು ವಾಸೀಂ ತಮ್ಮ ಜೀವನಚರಿತ್ರೆ 'ಸುಲ್ತಾನ್ ಎ ಮೆಮೊಯರ್'ನಲ್ಲಿ ಉಲ್ಲೇಖಿಸಿದ್ದಾರೆ.

'ತಂಡದ ಅನುಭವಿ ಆಟಗಾರನಾಗಿದ್ದ ಸಲೀಂ ತನಗೆ ಮಸಾಜ್ ಮಾಡಲು ಒತ್ತಾಯಿಸಿದ್ದರು. ಅಲ್ಲದೆ ಬೂಟು ಮತ್ತು ಬಟ್ಟೆಗಳನ್ನು ತೊಳೆದುಕೊಡುವಂತೆ ಹೇಳುತ್ತಿದ್ದರು' ಎಂದು 1984ರಲ್ಲಿ ತಂಡಕ್ಕೆ ಪದಾರ್ಪಣೆ ಮಾಡಿದ್ದ ವಾಸೀಂ ಬಹಿರಂಗಪಡಿಸಿದ್ದಾರೆ. ವಾಸೀಂ ಆರೋಪ ಸಲೀಂ ಅಲ್ಲಗಳೆದಿದ್ದಾರೆ. ತಮ್ಮ ಪುಸ್ತಕದ ಪ್ರಚಾರ ಕ್ಕಾಗಿ ಅವರು ಈ ರೀತಿ ಬರೆದುಕೊಂಡಿದ್ದಾರೆ ಎಂದಿದ್ದಾರೆ.

ಪಂದ್ಯಶುಲ್ಕ ದೇಣಿಗೆ ನೀಡಿದ ಸ್ಟೋಕ್ಸ್

ಇಸ್ಲಾಮಾಬಾದ್ (ರಾಯಿಟರ್ಸ್): ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಅವರು ಪಾಕಿಸ್ತಾನದ ಎದುರಿನ ಮೂರು ಟೆಸ್ಟ್ ಪಂದ್ಯಗಳ ಸರಣಿಯ ಪಂದ್ಯ ಶುಲ್ಕವನ್ನು ಪಾಕಿಸ್ತಾನದ ಪ್ರವಾಹ ಸಂತ್ರಸ್ತರಿಗೆ ದೇಣಿಗೆ ನೀಡಲಿದ್ದಾರೆ. ಸೋಮವಾರ ಅವರು ಈ ವಿಷಯ ತಿಳಿಸಿದ್ದಾರೆ. ಮೊದಲ ಪಂದ್ಯ ಗುರುವಾರ ರಾವಲ್ಪಿಂಡಿಯಲ್ಲಿ ಆರಂಭವಾಗಲಿದೆ.